ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 18-19 ಮೇ 9, 2004 ಬೆಲೆ ರೂ. 3.00



ಕೆಂಪು ಮೇ ದಿನ ವೀರ ನಮನ





ಬಿಜೆಪಿ ಸೋಲಿಗೆ ಅಂತಿಮ ಗುದ್ದು!



ಇರಾಕ್ : ಭೀಕರತೆಯ ಮುನ್ಸೂಚನೆ



- ತೃತೀಯ ರಂಗ - ಮಹತ್ವದ ಪಾತ್ರ
- ನೆಲದ ನಂಟು ತೊರೆದ ವಲಸಿಗ ಹಕ್ಕಿಗಳು
- ವಿಶಿಷ್ಟ ಸ್ಪರ್ಧೆ - ವಿಭಿನ್ನ ಪ್ರಚಾರ

ಸಿಐಟಿಯು - ಬಿಕ್ಕಟ್ಟು ತೀವ್ರ ಸಂಘರ್ಷಕ್ಕೆ ಸಜ್ಜು

ಒಂದು ಕೋಟಿಗೂ ಹೆಚ್ಚಿನ ಜನ ಮತದಾನದ ಹಕ್ಕು-ಅವಕಾಶಗಳಿಂದ ವಂಚಕರು! ಸರ್ಕಾರದ ನೀತಿಗಳಿಗೆ ಬಲಿಯಾದವರು, ರೋಷವಿದ್ದರೂ ಹೊಟ್ಟೆಗೆ ಹಿಟ್ಟಿಲ್ಲದೇ, ರಟ್ಟೆಯಲ್ಲಿ ಕಸುವಿಲ್ಲದೇ, ವಲಸೆಹೋದ ಈ ನೆಲದ ಹಕ್ಕಿಗಳ ಪಾಡೇನು?

ದೂರ ದೇಶದ ವಲಸಿಗ ಹಕ್ಕಿಗೂ...

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಹತ್ತಿರ ಹತ್ತಿರ ಒಂದು ಕೋಟಿ ಭಾರತೀಯರು ಮತದಾನ ಮಾಡುವುದಿಲ್ಲ. ಏನು ಕಾರಣ? ಕಳೆದ ಚುನಾವಣೆಯಿಂದೀಚೆಗೆ ಇವರೆಲ್ಲ ತೀರಿಕೊಂಡಿದ್ದಾರೆಯೇ ಅಥವಾ ತಾವು ಭಾರತೀಯರೆಂದು ಸಾಬೀತು ಮಾಡಲು (ಮತದಾನದ ಗುರುತಿನ ಚೀಟಿಯೂ ಸೇರಿದಂತೆ) ಯಾವ ದಾಖಲೆಯೂ ಇವರ ಬಳಿ ಇಲ್ಲವೆ ಅಥವಾ ಇವರ ಹೆಸರು ಪಟ್ಟಿಗಳಿಂದ ಬಿಟ್ಟು ಹೋಗಿದೆಯೆ ಅಥವಾ ಇವರೇ ಉದ್ದೇಶಪೂರ್ವಕ ಚುನಾವಣೆಗಳನ್ನು ಬಹಿಷ್ಕರಿಸಿದ್ದಾರೆಯೇ? ಇಲ್ಲ, ಇವ್ಯಾವುದೂ ಕಾರಣಗಳಲ್ಲ, ನಿಜವಾದ ಕಾರಣ ಇವರೆಲ್ಲ ಹೊಟ್ಟೆ ಹೊರೆಯಲು ಕೆಲಸ ಹುಡುಕಿಕೊಂಡು ಪರಸ್ಥಳಗಳಿಗೆ ಈಗಾಗಲೇ ವಲಸೆಹೋಗಿರುವುದು, ಚುನಾವಣೆಯ ವೇಳೆ ತಮ್ಮೂರಿಗೆ ಮತದಾನಕ್ಕೆ ಮರಳಲಾಗದಷ್ಟು ದೂರದಲ್ಲಿರುವುದು.

ವಲಸೆ ಹೋದವರಲ್ಲಿ ಗ್ರಾಮೀಣ ಭಾರತೀಯರು. ಇವರಲ್ಲಿ ಸಣ್ಣ ಹಿಡುವಳಿದಾರರು, ದಿನ ಗೂಲಿಗಳು, ದಲಿತ ಸಂಸಾರಗಳು, ಕೃಷಿ ಕಾರ್ಮಿಕರು, ಆದಿವಾಸಿಗಳು ಮತ್ತು ಕೃಷಿ ಆಧಾರಿತ ಸಣ್ಣ, ಅತಿಸಣ್ಣ ವಾಣಿಜ್ಯ, ಉದ್ದಿಮೆಗಳ ಅವಲಂಬಿತರೆ ಹೆಚ್ಚು. ಇದೇ ಮೊದಲ ಬಾರಿಗೆ ತಾವು ಹುಟ್ಟೂರಿನಲ್ಲೇ ಸಾಯಬೇಕು ಎಂಬ ದೃಢ ವಿಶ್ವಾಸವಿದ್ದವರೂ ವಲಸೆ ಹೋಗಿದ್ದಾರೆ. ದಿಢೀರ್ ಸಿರಿವಂತನಾಗುವ ಸಿನಿಮೀಯ ನಿರೀಕ್ಷೆಗಳನ್ನು ಇಟ್ಟುಕೊಂಡು ವಲಸೆಹೋದವರಲ್ಲ ಇವರು. ಕೈಗಿಷ್ಟು ಕೆಲಸ, ಹೊಟ್ಟೆಗಿಷ್ಟು ಅನ್ನ, ಹೆತ್ತವರಿಗೆ ಹೊರೆಯಾಗಬಾರದು ಎಂಬ ಅತಿಸಾಮಾನ್ಯ ಅಪೇಕ್ಷೆಗಳೇ ಇವರ ವಲಸೆಗೆ ಕಾರಣ. ಬದುಕಿನ ಹೋರಾಟಗಳ ಸುಳಿಯಲ್ಲಿ ಮತದಾನದ ಅವಕಾಶವನ್ನು ತ್ಯಾಗಮಾಡಬೇಕಾದ ದಯನೀಯ ಸ್ಥಿತಿ ಇವರದು.

ಒಂದು ಸರಳ ಪ್ರಶ್ನೆ

ಬಹಳ ಪ್ರಮುಖ ಹಾಗೂ ಸರಳ ಪ್ರಶ್ನೆಯೊಂದು ಈಗ ನಮ್ಮೆದುರಿಗಿದೆ. ಇವರೆಲ್ಲ ಏಕೆ




ಜೀವನೋಪಾಯ ಹುಡುಕಿಕೊಂಡು ವಲಸೆ ಹೋಗಬೇಕಾಯಿತು? ಕಾರಣಗಳು ಸ್ಫಟಿಕ ಸ್ಪಷ್ಟ. ಬರಗಾಲ ಮತ್ತು ವಿಶ್ವ ಬ್ಯಾಂಕ್(WB), ಅಂತರರಾಷ್ಟ್ರೀಯ ವಿತ್ತನಿಧಿ (IMF), ಏಷ್ಯಾ ಅಭಿವೃದ್ಧಿ ಬ್ಯಾಂಕ್ (ADB) ಹಾಗೂ ವಿಶ್ವ ವ್ಯಾಪಾರ ಸಂಸ್ಥೆ (WTO) ಗಳೆಂಬ ದುಷ್ಟ ಚತುಷ್ಟಯಗಳ ನಿರ್ದೇಶನದ ಮೇರೆಗೆ ನಮ್ಮ ಕೇಂದ್ರ ಹಾಗೂ ಹಲವು ರಾಜ್ಯಗಳು ಅನುಸರಿಸುತ್ತಿರುವ ಅಮಾನವೀಯ, ನಿರುತ್ಸಾಹದಾಯಕ ಕೃಷಿ ಮತ್ತು ಆರ್ಥಿಕ ನೀತಿಗಳು. ಇವುಗಳ ಪರಿಣಾಮವಾಗಿ ಮಣ್ಣಿನ ಮಕ್ಕಳು ಮತ್ತು ಮಣ್ಣಿನಲ್ಲೇ ಕನಸುಗಳ ಬೀಜ ಬಿತ್ತುವವರು ಕಂಗಾಲಾಗಿ ತಮ್ಮ ನೆಲದ ನಂಟು ತೊರೆದು ವಲಸೆ ಹೋಗಬೇಕಾಗಿ ಬಂದಿದೆ. ಉತ್ತರ ಕರ್ನಾಟಕ, ಆಂಧ್ರ ಪ್ರದೇಶ, ವಿದರ್ಭ, ಪಶ್ಚಿಮ ಗುಜರಾತ್, ಒರಿಸ್ಸಾ, ರಾಜಸ್ಥಾನ, ಉತ್ತರಪ್ರದೇಶ, ಚತ್ತೀಸ್‌ಘಡ್ ಮುಂತಾದ ಪ್ರದೇಶಗಳಿಂದ ನೆರೆಯ ಅಥವಾ ದೂರದ ರಾಜ್ಯಗಳಿಗೆ ವಲಸೆ ಹೋದವರ ಪ್ರಮಾಣ ಹೆಚ್ಚಾಗಿದೆ.

ಈಗಿನ ಭಾರತದಲ್ಲಿ ನೆಲದ ನಂಟಿರುವವರಿಗೆ ಮಾನ್ಯತೆಯಿಲ್ಲ. ಕಂಪ್ಯೂಟರ್ ಕೀಲಿಮಣೆ ಸ್ಪರ್ಶಿಸುವ ಸಾಫ್ಟ್‌ವೇರ್ ಬುದ್ಧಿವಂತ್ರೆಗಳಿಗೆ, ಸುಖೋಪಯೋಗಿ ವಸ್ತುಗಳ ತಯಾರಕರಿಗೆ, ಅಮೇರಿಕಾ ಯೂರೋಪ್‌ಗಳಿಗೆ ರಫ್ತಾಗುವ ಕಂಠಪಾಠದ ಪ್ರತಿಭೆಗಳಿಗೆ ದಕ್ಕುತ್ತಿರುವ ಪ್ರೋತ್ಸಾಹದಲ್ಲಿ ಒಂದು ಪಾಲೂ ಈಗ ಗ್ರಾಮೀಣ ವಾಸಿಗಳಿಗೆ ದೊರಕುತ್ತಿಲ್ಲ. ಅವರನ್ನು ಅವರ 'ಹಣೆಬರಹ'ಗಳ ಪ್ರಯೋಗ ಪಶುಗಳನ್ನಾಗಿ ಪರಿವರ್ತಿಸುವಲ್ಲಿ ಕಳೆದೈದು ವರ್ಷಗಳಲ್ಲಿ ಸರ್ಕಾರಗಳು ಬಹಳಷ್ಟು ಯಶಸ್ವಿಯಾಗಿವೆ. ಯಶಸ್ವಿಯಾಗ ಬೇಕಾಗಿರುವುದು ಇನ್ನೂ ಬಹಳಷ್ಟಿದೆ!

ಕೆ.ಎಸ್.ರವಿಕುಮಾರ್, ಹಾಸನ

ಸರ್ಕಾರಗಳು ಪ್ರತಿ ಚುನಾವಣೆಯ ನಂತರ ರಚನೆಯಾಗುವುದು ಎಷ್ಟು ನಿಜವೋ, ಅಷ್ಟೇ ನಿಜ ಆರ್ಥಿಕವಾಗಿ ದುರ್ಬಲವಾಗಿರುವವರೂ ಹೊಟ್ಟೆ ಹೊರೆಯ ಬೇಕಾದ ಅನಿವಾರ್ಯತೆ. ಒರಿಸ್ಸಾದ ಬೋಲಾಂಗಿರ್, ಕಾಲಹಂದಿ, ನೌಪಾಡ ಪ್ರದೇಶಗಳಿಂದ ಸಾವಿರಾರು ಆದಿವಾಸಿಗಳು ಹೊರಟು ಮುಂಬೈನಲ್ಲಿ ಕಟ್ಟಡ ನಿರ್ಮಾಣಕ್ಕೆ ಇಟ್ಟಿಗೆ ಹೊರುವುದು, ಬಿಹಾರಿಗಳು ದೂರದ ಪಂಜಾಬ್ ಮತ್ತು ಅಸ್ಸಾಂಗಳಲ್ಲಿ ಬೆವರು ಬಸಿಯುವುದು, ಉತ್ತರ ಕರ್ನಾಟಕದ ಕೃಷಿ ಕಾರ್ಮಿರು ಮಹಾರಾಷ್ಟ್ರದ ಹೊಲಗಳಲ್ಲಿ ಬಾಡುತ್ತಿರುವುದು, ಆಂಧ್ರದ ಮೆಹಬೂಬನಗರ ಮತ್ತು ಅನಂತಪುರ ಜಿಲ್ಲೆಯ ಲಕ್ಷಾಂತರ ಬರಪೀಡಿತರು ಪೂನಾದಲ್ಲಿ ಕೂಲಿಗಳಾಗಿರುವುದು ಇಲ್ಲವೆ ಚತ್ತೀಸ್‌ಘರ್‌ನ ರಾಯಪುರದಲ್ಲಿ ರಿಕ್ಷಾಚಾಲಕರಾಗಿರುವುದು, ಉತ್ತರ ಪ್ರದೇಶದ ದಲಿತರು ಹರಿಯಾಣದಲ್ಲಿ ಹೈರಾಣಾಗುವುದು, ಅದೇ ಹರಿಯಾಣಾದಲ್ಲಿ ಮಧ್ಯಪ್ರದೇಶದವರು ಇಟ್ಟಿಗೆ ಗೂಡಿಗೆ ಮಣ್ಣು ಕಲೆಸುವುದು ಇವು ವಲಸಿಗರ ಬವಣೆಯ ಕೆಲವು ಉದಾಹರಣೆಗಳು. ಕಳೆದ ಡಿಸೆಂಬರ್‌ನಿಂದ ಈಚೆಗೆ ಸಾವಿರಾರು ಬಸ್ಸು, ರೈಲುಗಳು (ಬಸ್ಸುಗಳಂತೂ ನಮ್ಮ ಪ್ರಧಾನಿಯ ಕನಸಾದ ಚತುಷ್ಪಥ ಹೆದ್ದಾರಿಯಲ್ಲಿ ದೇಶದಾದ್ಯಂತ ಲಕ್ಷಾಂತರ ವಲಸಿಗರನ್ನು ಸಾಗಿಸಿವೆ ಎನ್ನುವುದು ಕುಹಕವಲ್ಲ) ವಲಸಿಗರನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ನಿರಂತರ ಸಾಗಿಸಿಕೊಂಡು ಬಂದಿವೆ.

ತೆಲೆಂಗಾಣದ ಮೆಹಬೂಬ್‌ನಗರ ಜಿಲ್ಲೆಯಲ್ಲಿ ವಲಸೆಯ ತೀವ್ರತೆ ಎಷ್ಟಿತ್ತೆಂದರೆ ನಿವಾಸಿಗಳಿಲ್ಲದೆ ನೂರಾರು ಹಳ್ಳಿಗಳು ಸಂಪೂರ್ಣ ಖಾಲಿ ಖಾಲಿ. ಹಲವು ಹಳ್ಳಿಗಳಲ್ಲಿ ಪ್ರಯಾಣ ಮಾಡಲಾಗದ ವೃದ್ಧರು ಮತ್ತು ಪುಟ್ಟ ಮಕ್ಕಳು ಮಾತ್ರ ಹಿಂದೆ ಉಳಿದಿದ್ದಾರೆ. 58 ಆಸನ ಸಾಮರ್ಥ್ಯದ ಬಸ್ಸುಗಳಲ್ಲಿ



ದೂರ ದೇಶದ ವಲಸೆ ಹಕ್ಕಿಗಳಾಗಿ ನಿಲ್ಲಲು ಜಾಗವಿದೆ ನಿಜ! ಆದರೆ ಅನ್ನ ಹುಡುಕಿ ಹೊರಟ ಈ ನೆಲದ ಮಕ್ಕಳಿಗೆ ಎಲ್ಲಿ ಜಾಗ!

ನೂರಕ್ಕೂ ಹೆಚ್ಚು ವಲಸಿಗರು ಒಮ್ಮೆಲೆ ತುಂಬಿ ಸಾಗುವ ದೃಶ್ಯಗಳು ಈ ಹೊತ್ತಿಗೂ ಆಂಧ್ರದಲ್ಲಿ ಕಾಣಬರುತ್ತಿವೆ (ಆಂಧ್ರ ರಸ್ತೆ ಸಾರಿಗೆಗೆ ಕಳೆದ ಆರ್ಥಿಕ ಸಾಲಿನಲ್ಲಿ ಒಳ್ಳೆಯ ಲಾಭವಾಗಲು ಈ ದಿಢೀರ್ ವಲಸೆಗಳೂ ಕಾರಣ ಎಂಬ ವ್ಯಂಗ್ಯವನ್ನು ಹೇಗೆ ವ್ಯಾಖ್ಯಾನಿಸಬೇಕು?)

ಕಳೆದೊಂದು ವರ್ಷದಿಂದ ಜರುಗುತ್ತಿರುವ ವಲಸೆಗಳ ವಿಶೇಷವೆಂದರೆ ಸ್ವತಂತ್ರ ಭಾರತದ ಇತಿಹಾಸದಲ್ಲೆ ಭಾರಿ ಪ್ರಮಾಣದ 'ಸಾಮೂಹಿಕ ವಲಸೆ' (MASS EXODUS) ಇವು ಎನಿಸಿರುವುದು. ಕೃಷಿ ಕ್ಷೇತ್ರದಲ್ಲಿ ಶೂನ್ಯ ಬಂಡವಾಳ ಹೂಡಿಕೆ, ಸಣ್ಣ ಉದ್ದಿಮೆಗಳ ನಾಶ, ಸಾಲ ತೀರಿಸಲಾಗದ ಅಗಾಧ ಆತಂಕ, ಬರಗಾಲದಲ್ಲಿ ಸಕಾಲದಲ್ಲಿ ನೆರವಿಗೆ ಬಾರದಿದ್ದ ಸರ್ಕಾರಗಳು, ಬರಪರಿಹಾರಗಳನ್ನು ಜಾರಿಗೆ ತರಲಾಗದಿರುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಸ್ಪರರನ್ನು ದೂಷಿಸುವ ಕೀಳು ರಾಜಕಾರಣಗಳ ಒಟ್ಟು ಫಲಿತಾಂಶವೇ ನಿಸ್ಸಹಾಯಕರ ಹತಾಶ ವಲಸೆ.

ಗುಳೇ ಹೋದ ಭಾರತೀಯರು ಈಗಾಗಲೇ ತಮ್ಮ ಕಾಲಿನಿಂದ ಮತದಾನ ಮಾಡಿಬಿಟ್ಟಿದ್ದಾರೆ. ಅವಧಿಗೆ ಮುನ್ನ ಕೇಂದ್ರ ಸರ್ಕಾರಗಳನ್ನು ವಿಸರ್ಜಿಸಿದ ರಾಜಕೀಯದ ಬಗ್ಗೆ ತಲೆಕೆಡಿಸಿಕೊಳ್ಳಲು ಇವರಿಗೆ ವಿರಾಮವಿಲ್ಲ. ಚುನಾವಣಾ ಆಯೋಗ ಚುನಾವಣೆ ದಿನಾಂಕಗಳನ್ನು ನಿಗದಿ ಮಾಡುವವರೆಗೆ ಹಸಿದ ಹೊಟ್ಟೆಯಲ್ಲಿ ನಿರೀಕ್ಷೆ ಮಾಡುವುದು ಇವರಿಗೆ ಸಾಧ್ಯವಿರಲಿಲ್ಲ. ಈ ದೇಶದಲ್ಲಿ ಯಾವ ಪ್ರಲೋಭನೆಯು ಇವರು ವಲಸೆ ಹೋಗುವುದನ್ನು ತಪ್ಪಿಸುವುದು ಸಾಧ್ಯವಿರಲಿಲ್ಲ.

ಹೇಗೂ ಈ ವಿಶಾಲ ದೇಶದೊಳಗೆ ಗುಳೇ ಬಂದ ದೂರದೇಶದ ವಲಸಿಗ ಹಕ್ಕಿಗಳಿಗೆ ನಿಲ್ಲಲು ಜಾಗಕ್ಕಂತೂ ಕೊರತೆ ಇಲ್ಲ. ಕೊರತೆ ಇರುವುದೆಲ್ಲ 'ಬನ್ನಿರಿ ನೀವು ನಮ್ಮ ಬಳಗ' ಎಂದು ಕರೆಯದ ಸರ್ಕಾರಗಳಲ್ಲೆ.

ಇವರಿಗೆ ತಿರಸ್ಕಾರ, ಅವರಿಗೆ ಪುರಸ್ಕಾರ

ನಮ್ಮ ಕೇಂದ್ರ ಸರ್ಕಾರ ಬಹಳ ಉದಾರ ಮನಸ್ಸಿನ ಸರ್ಕಾರ. ಭಾರತದಿಂದ ಬಡತನ ಹೊಡೆದೋಡಿಸಲು ಬಂಡವಾಳ ಹೂಡಿರುವ ದೊಡ್ಡ ದೊಡ್ಡ ಕಾರ್ಪೊರೇಟ್, ವಿದೇಶಿ ಹಾಗೂ ಬಹುರಾಷ್ಟ್ರೀಯ ಉದ್ದಿಮೆಗಳಿಗೆ ಉದಾರ ತೆರಿಗೆ ವಿನಾಯಿತಿಗಳನ್ನು ನೀಡಿದೆ. ಅವರು ಕಾಲಕಾಲಕ್ಕೆ ಪಾವತಿಸಬೇಕಾದ ಕಡ್ಡಾಯ ತೆರಿಗೆಗಳನ್ನು ಕಾಲಕಾಲಕ್ಕೆ ವಸೂಲಿಮಾಡದೆ ಅವರ ಬೆನ್ನು ತಟ್ಟುತ್ತ ಬಂದಿದೆ. ಕಾರ್ಪೋರೇಟ್ ತೆರಿಗೆ, ಕಸ್ಟಮ್ಸ್ ಸುಂಕ, ಆದಾಯ ತೆರಿಗೆ, ಕೇಂದ್ರ ಅಬಕಾರಿ ಸುಂಕ ಎಂದು ಈ ಉದ್ದಿಮೆಗಳು ಬಾಕಿ ಉಳಿಸಿದ್ದ ತೆರಿಗೆಯ ಪ್ರಮಾಣ ಮಾರ್ಚ್ 31, 1998ರಲ್ಲಿ 47,888 ಕೋಟಿ ರೂಪಾಯಿಗಳಿದ್ದದ್ದು 2002ರ ಮಾರ್ಚ 31ರ ವೇಳೆಗೆ 86,342 ಕೋಟಿ ರೂಪಾಯಿಗಳಾಗಿದ್ದವು. ಈ ಪ್ರಮಾಣ ಈಗ ಅಂದರೆ 2004ರ ಮಾರ್ಚ ಅಂತ್ಯದ ವೇಳೆಗೆ 1,00,000 ಕೋಟಿ ರೂಗಳಾಗಿವೆ. ಹೊಟ್ಟೆ ತುಂಬಿದ ಈ ಉದ್ಯಮಿಗಳಿಗೆ ಸರ್ಕಾರದ ಎಲ್ಲ ಭರವಸೆ, ರಿಯಾಯಿತಿ ಸಿಗುವುದಾದರೆ ಹೊಟ್ಟೆಗಿಲ್ಲದ, ಕೆಲಸವಿಲ್ಲದ ದುರ್ಬಲ ಗ್ರಾಮೀಣರಿಗೆ ಸಿಗುವ ಭರವಸೆ ಏನು?


ವಾಜಪೇಯಿ ಸರ್ಕಾರದ ಔದಾರ್ಯ ಎಲ್ಲ ನಿಸ್ಸಂಕೋಚಗಳ ಗಡಿಯನ್ನು ದಾಟಿಬಿಟ್ಟಿದೆ. ಅಂದ ಹಾಗೆ ಇವರ ಹಿಂದಿನ ಸರ್ಕಾರಗಳೂ ಉದ್ಯಮಿಗಳಿಗೆ ಕಕ್ಕುಲಾತಿ ತೋರಿಸಿದ್ದವು. ಆದರೆ ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದ ಕಾಲದಲ್ಲಿ, ಚಿದಂಬರಮ್ ಹಣಕಾಸು ಸಚಿವರಾಗಿದ್ದ ಸಂಯುಕ್ತರಂಗ ಸರ್ಕಾರವಿದ್ದ ವೇಳೆ ಉದ್ಯಮಿಗಳಿಂದ ಬಾಕಿಯಿದ್ದ ತೆರಿಗೆಗಳನ್ನು ಸ್ವಲ್ಪವಾದರೂ ಕಠಿಣ ಕ್ರಮಗಳಿಂದ ವಸೂಲಿ ಮಾಡುವ ಪ್ರಯತ್ನ ಸಾಗಿತ್ತು. ಆದರೆ ಆ ಎರಡೂ ಸರ್ಕಾರಗಳು ಅಕಾಲ ಮರಣ ಹೊಂದಿದವು. ವಿ.ಪಿ.ಸಿಂಗ್ ಸರ್ಕಾರವನ್ನು ಬೀಳಿಸಿದ ಬಿಜೆಪಿ ಮತ್ತು ಸಂ.ರಂಗ ಸರ್ಕಾರವನ್ನು ಬೀಳಿಸಿದ ಕಾಂಗ್ರೆಸ್ ಹೇಗೆ ಎರಡೂ ರಾಷ್ಟ್ರೀಯ ಪಕ್ಷಗಳ ಹಿಂದೆ ಉದ್ಯಮಿಗಳು ಪಿತೂರಿ ನಡೆಸಿದ್ದರು ಎಂಬ ವಿಚಾರ ಗುಟ್ಟಾಗಿ ಉಳಿದಿಲ್ಲ.

ಪಾಪ, **ಬಡಪಾಯಿ ವಲಸಿಗರಿಗೆ ಸರ್ಕಾರಗಳನ್ನು ಬೀಳಿಸುವ ತಾಕತ್ತಿಲ್ಲ. ಆದರೆ ಮತ ಚಲಾವಣೆಯ ಮೂಲಕ ಬದಲಾಯಿಸುವ ತಾಕತ್ತಿದೆ. ಆದರೆ ಈಗ ಈ ತಾಕತ್ತಿಗೂ ಸಂಚಕಾರ ಬಂದಿದೆ.** ಬರುವ ವರ್ಷಗಳಲ್ಲಿ ಈ ಸಂಚಕಾರದ ಕಪಿಮುಷ್ಠಿ ಬಿಗಿಯಾಗುತ್ತ ಹೋಗಬಹುದು. ಒಂದು ದಿನ ಭಾರತ ಉದ್ಯಮಿಗಳಿಂದ ಉದ್ಯಮಿಗಳಿಗಾಗಿ ಉದ್ಯಮಿಗಳೇ ನಡೆಸುವ ಪ್ರಭುತ್ವವಾಗಲಿದೆಯೇ? ❍

ಚುನಾವಣಾ ಹಿಂಸಾಚಾರ : ಪ್ರಜಾಪ್ರಭುತ್ವಕ್ಕೆ ಸಂಚಾಕಾರ!

14ನೇ ಲೋಕಸಭಾ, ವಿಧಾನಸಭಾ ಚುನಾವಣೆಯ ಮತದಾನದ ಎರಡು ಹಂತಗಳು ಮುಗಿದಿದೆ. ಇನ್ನೆರೆಡು ಹಂತ ಬಾಕಿ ಇದೆ. ಕರ್ನಾಟಕ ಮಟ್ಟಿನಲ್ಲಿ ಮತದಾನ ಪೂರ್ಣವಾಗಿದೆ.

ಮತದಾನ ಮುಗಿಯಿತು ಎಂದು ಹೇಳುವಾಗಲೇ ಚುನಾವಣಾ ಸಂಬಂಧಿ ಹಿಂಸಾಚಾರಗಳು ನಡೆದೇ ಇದ್ದವು. ಈಗಲೂ ಕಾಶ್ಮೀರದಲ್ಲಿ ಬಾಂಬ್-ಗ್ರೆನೇಡ್-ಬಂದೂಕುಗಳ ಹಿಂಸಾಚಾರ ನಿಂತಿಲ್ಲ. 'ಇಲ್ಲಿ ಮತದಾನ ಮಾಡಲು ಜನರು ಬರಲೇ ಇಲ್ಲ, ಭಾರತದ ಚುನಾವಣೆಯನ್ನು ಇಲ್ಲಿನ ಜನ ಬಹಿಷ್ಕರಿಸಿಬಿಟ್ಟಿದ್ದಾರೆ, ಇದೇ ಜನಮತ ಗಣನೆ, ಹೀಗಾಗಿ ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಿ' ಎಂದು ಮತ್ತೇ ಕೂಗೆಬ್ಬಿಸಲು ಅಮೆರಿಕಾ-ಬ್ರಿಟನ್ ಸಾಮ್ರಾಜ್ಯಶಾಹಿಗಳು, ಪಾಕಿಸ್ತಾನದ ಮೂಲಕ, ಭಯೋತ್ಪಾದಕರು ಉತ್ಸುಕರಾಗಿದ್ದಾರೆ. ಇದೊಂದು ಕಡೆಗಿದೆ. ಇದಲ್ಲದೆ ಆಳುವ-ವಿರೋಧ ಪಕ್ಷಗಳೆಂಬ ಒಂದೇ ಆಳುವ ವರ್ಗಗಳ ಪ್ರತಿನಿಧಿಗಳು ತಮ್ಮ ಮೇಲುಗೈ ಸಾಧಿಸಲು, ಅಧಿಕಾರ ಹಿಡಿಯಲು ಅಥವಾ ಸೇಡುತೀರಿಸಿಕೊಳ್ಳಲು ಪೈಪೋಟಿ ನಡೆಸಿ ಹಿಂಸಾಚಾರ ಹುಟ್ಟುಹಾಕಿ ವಿಕೃತ ಕೇಕೇ ಹಾಕಿ ವಿಜೃಂಭಿಸಿದ ನೂರಾರು ಘಟನೆಗಳು ಇವೆ. ಹಾಗೆ ನೋಡಿದರೆ ಮೊದಲ ಹಂತದ ಚುನಾವಣೆಯಲ್ಲಿನ 13 ರಾಜ್ಯಗಳ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ದೂರು ದಾಖಲಾದ ಪ್ರಕರಣಗಳು 1260. ಇದರಲ್ಲಿ 29 ಜನ ಸತ್ತಿದ್ದಾರೆ, 560 ಜನ ಗಾಯಗೊಂಡಿದ್ದಾರೆ! ದೂರದ ರಾಜ್ಯಗಳದ್ದು ಹಾಗಿರಲಿ ಕರ್ನಾಟಕದಲ್ಲೇ 15 ಲೋಕಸಭಾ ಕ್ಷೇತ್ರಗಳ ಸುಮಾರು 120 ವಿಧಾನಸಭಾ ಕ್ಷೇತ್ರಗಳಲ್ಲಿ 168 ಕಡೆ ಗಲಭೆಗಳಾಗಿವೆ. ನಾಲ್ಕಾರು ಸಾವುಗಳಾಗಿವೆ. ಚುನಾವಣಾ ಹಿಂಸಾಚಾರಗಳ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಜನ ಭಾಗವಹಿಸದಂತೆ, ಹಕ್ಕುಗಳನ್ನೇ ಕಸಿಯಲು ನಾಟಕೀಯವಾಗಿ ಸ್ಥಾಪಿತ ಹಿತಾಸಕ್ತಿಗಳು - ಭೂಮಾಲೀಕು-ಧಣಿಗಳು ತಾವೇ ಚಲಾಯಿಸಿ. ಪ್ರಜಾಪ್ರಭುತ್ವದ ಕ್ರಿಯೆಯನ್ನೇ ಹಾಳುಗೆಡವಿ, ಅಪಹಾಸ್ಯಕ್ಕೀಡು ಮಾಡುತ್ತಿರುವುದು ಹೊಸದೇನಲ್ಲ. ದೇಶದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲೇ ಬೆಸಗುರಾಯ್ (ಉತ್ತರ ಭಾರತದ) ಕ್ಷೇತ್ರದಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಗೆಲ್ಲದಂತೆ ತಡೆಯಲು ಭೂಮಾಲೀಕ ಶಕ್ತಿಗಳು (ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು) ವ್ಯಾಪಕ ಹಿಂಸಾಚಾರ ಹುಟ್ಟುಹಾಕಿದ್ದು ಇತಿಹಾಸ. ಇಂತಹ ಹಿಂಸೆ, ಧಾಳಿಗಳು ಈಗಿರುವ ಪ್ರಜಾಪ್ರಭುತ್ವದ ಹಕ್ಕು - ಅವಕಾಶಗಳನ್ನು ನಾಶಗೊಳಿಸುವ ಕೃತ್ಯಗಳಾಗಿವೆ. ಇದು ಗಂಡಾಂತರಕಾರಿ ಬೆಳವಣಿಗೆ.



ಈ ಸಲ - ಕರ್ನಾಟಕದಲ್ಲಿನ ವಿದ್ಯಮಾನಗಳನ್ನೇ ಗಮನಿಸಿದರೆ ಹಿಂದಿನದಕ್ಕೆ ಹೋಲಿಸಿದರೆ - ಇಂದಿನ ಸಂದರ್ಭದಲ್ಲಿ ಹಿಂಸಾಕಾಂಡವನ್ನು ಹೆಚ್ಚು ಸಂಘಟಿಸಲಾಗುತ್ತಿರುವುದು ಆತಂಕಕಾರಿಯಾಗಿದೆ. ಇದರಲ್ಲಿ ಬಹುತೇಕ ಕಾಂಗ್ರೆಸ್-ಬಿಜೆಪಿ ಪಕ್ಷಗಳ ಮುಖಂಡರು, ಬೆಂಬಲಿಗರು ಭಾಗಿಯಾಗಿರುವುದೇ ಎದ್ದು ಕಾಣುತ್ತದೆ. ಇಂತಹ ಗೂಂಡಾಗಿರಿ ಹಿಂಸಾಚಾರ ನಡೆಸುವ 'ತಾಕತ್ತನ್ನು' ಅಭ್ಯರ್ಥಿಯ ಅಥವಾ ಆ ಪಕ್ಷದ ವಿಶೇಷ ಸಾಮರ್ಥ್ಯವೆಂಬಂತೆ ಬಿಂಬಿಸಲಾಗುತ್ತದೆ. ಎಷ್ಟು ಥರದ ಸಮಾಜಘಾತುಕ-ಕ್ರಿಮಿನಲ್‌ಗಳು ತಮ್ಮ ಹಿಂದಿವೆ ಎಂಬುದನ್ನು ಈ 'ಸಾಮರ್ಥ್ಯ' ಅವಲಂಬಿಸಿದೆ! ಈ ಬೆಂಗಳೂರು, ಶಿವಮೊಗ್ಗ, ದ.ಕನ್ನಡ, ಉಡುಪಿ, ಉತ್ತರ ಕನ್ನಡ, ಕೋಲಾರ, ಗುಲ್ಬರ್ಗಾ ಮುಂತಾದ ಜಿಲ್ಲೆಗಳಲ್ಲಿ ನಡೆದ ಘಟನೆಗಳಲ್ಲಿ ವೃತ್ತಿ ನಿರತ ಕ್ರಿಮಿನಲ್‌ಗಳು ತೊಡಗಿದ್ದುದ್ದು ಅತ್ಯಂತ ಅಪಾಯಕಾರಿಯಾಗಿದೆ.

ಶಿವಮೊಗ್ಗ-ಸಾಗರದಲ್ಲಿ ಬಿಜೆಪಿ ಸೇರಿಕೊಂಡಿರುವ ಬಂಗಾರಪ್ಪನವರ ಬೆಂಬಲಿಗರೆನಿಸಿಕೊಂಡ ಕ್ರಿಮಿನಲ್‌ಗಳು (ಬೆಂಗಳೂರು ಮುಂತಾದಕಡೆಗಳಿಂದ ಬಂದವರು) ಸಚಿವ ಕಾಗೋಡು ತಿಮ್ಮಪ್ಪನವರ ಮೇಲೆಯೇ ಧಾಳಿ ನಡೆಸಿದ್ದಾರೆ, ಅವರೊಂದಿಗೆ ಅನೇಕರು ಆಸ್ಪತ್ರೆ ಸೇರುವಂತಾಗಿದೆ. ಇದೇ ಸರಣಿಯಲ್ಲಿ ಬಿಜೆಪಿ-ಆರ್‌ಎಸ್‌ಎಸ್ ಪಡೆ ಹಲವಾರು ಮತಗಟ್ಟೆಗಳಲ್ಲಿ ದಾಂಧಲೆ ನಡೆಸಿದೆ. ವಿಶೇಷ ಅಂಶವೆಂದರೆ ಅಲ್ಪಸಂಖ್ಯಾತರು ವಾಸವಾಗಿರುವ ಕೆಲವು ಮತಗಟ್ಟೆಗಳಲ್ಲಿ ಜನ ಮತದಾನಕ್ಕೆ ಬರದಂತೆ ಭಯೋತ್ಪಾದನೆ ಮಾಡಿರುವುದು, ಬೆಂಗಳೂರು ನಗರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಹಿಂಸಾಚಾರಗಳು ನಡೆದಿವೆ. ಮಾಗಡಿಯಲ್ಲಿ ಜನತಾದಳ(ಎಸ್) ಅಭ್ಯರ್ಥಿಗೇ ಅಡ್ಡಿ ಮಾಡಲಾಗಿದೆ. ನೇತೇನ ಹಳ್ಳಿಯಲ್ಲಿ ಜೆಡಿ(ಎಸ್) ಮುಖಂಡರೊಬ್ಬರಿಗೆ ಬಿಜೆಪಿ ನಾಯಕರೊಬ್ಬರು ಪಿಸ್ತೂಲ್ ತೋರಿಸಿ ಬೆದರಿಸಿದ್ದಾರೆಂದು ವರದಿಯಾಗಿದೆ. (ಈ ಘರ್ಷಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮನೆಗೆ ಬೆಂಕಿ ಹಚ್ಚುವ ಪ್ರಯತ್ನಗಳ ವರದಿಗಳೂ ಇವೆ)

ಕನಕಪುರ, ಸಾತನೂರು ಕ್ಷೇತ್ರಗಳಲ್ಲಿ ಹಿಂಸಾಚಾರ ಹಬ್ಬಿಸುವ ಯತ್ನಗಳು ವರದಿಯಾಗಿವೆ. ನಕಲಿ ಮತದಾನಕ್ಕೆ ಕಾಂಗ್ರೆಸ್ ಅಭ್ಯರ್ಥಿ ಸಚಿವ ಡಿ.ಕೆ.ಶಿವಕುಮಾರ್ ಬೇರೆಡೆಯಿಂದ ಜನರನ್ನು ಸಾಗಿಸುವಾಗಲೇ ಗಲಾಟೆ ನಡೆದಿದೆ. ಅಕ್ರಮ ಮತದಾನದ ವರದಿಗಳು ಇವೆ. ಹೊಸಕೋಟೆ ಕ್ಷೇತ್ರದಲ್ಲಿ ಚುನಾವಣಾ ಸಮಯದಲ್ಲಿ ಹಾಗೂ - ನಂತರ ಜೆಡಿ(ಎಸ್) - ಕಾಂಗ್ರೆಸ್ ನಡುವೆ ಗಲಭೆಗಳಾಗಿವೆ. ಮತದಾನ ಕೇಂದ್ರಕ್ಕೆ ಭೇಟಿ ನೀಡಿದ್ದ ಕಾಂಗ್ರೆಸ್ ಅಭ್ಯರ್ಥಿಯನ್ನು ಆ ಕೇಂದ್ರದಲ್ಲೇ ಎರಡು ಗಂಟೆಗಳ ಕಾಲ ಕೂಡಿಹಾಕಿದ್ದು, ಪೋಲೀಸರು ಹಾಗೂ ಅವರ ಬೆಂಬಲಿಗರ ಮಧ್ಯಪ್ರವೇಶದಿಂದ ಅನಾಹುತಗಳು ತಪ್ಪಿದ ವರದಿಯಿದೆ. ಸತತವಾಗಿ ತಮಗೇ ಮತ ಮಾಡಿಸಿಕೊಳ್ಳುತ್ತಿದ್ದ ಬೂತ್‌ಗಳು ತಮ್ಮ ಕೈತಪ್ಪಿರುವ ಆತಂಕ, ಜೆಡಿ(ಎಸ್)ನ ಮುಖಂಡರನ್ನು ಕಾಡಿದೆಯೆಂಬ ದೂರುಗಳಿವೆ. ಮತದಾನದ ಬಳಿಕ ಹೊಸಕೋಟೆಯ ಎರಡು ಹಳ್ಳಿಗಳಲ್ಲಿ ದಲಿತರೇ ವಾಸಿಸುವ ಮನೆಗಳಿಗೆ ಬೆಂಕಿ ಇಟ್ಟು ಹಲ್ಲೆ ನಡೆಸಲಾಗಿದೆ. ಆ ಘರ್ಷಣೆಗಳಲ್ಲಿ ಇಬ್ಬರು ಸತ್ತಿದ್ದಾರೆ. ಕಾರಣ ಈ ಬಾರಿ ಆ ದಲಿತರು ಅವರಿಗೆ ಮತ ನೀಡಲಿಲ್ಲ ಎಂಬುದು.



ದ.ಕನ್ನಡ - ಉಡುಪಿಗಳಲ್ಲಿ ಬಿಜೆಪಿ - ಆರ್‌ಎಸ್‌ಎಸ್ ನ ಗೂಂಡಾ ಪಡೆಗಳೇ ಚುನಾವಣೆಗಳ ಹಿಂಸಾಚಾರದಲ್ಲಿ ವಿಜೃಂಭಿಸಿವೆ. ವ್ಯಾಪಕ ಹಿಂಸಾಚಾರವನ್ನು ದ.ಕನ್ನಡದ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿಯೂ ನಡೆಸಲಾಗಿದೆ. ಇಲ್ಲಿ ಕಾಂಗ್ರೆಸ್‌ನ ಕೈ ಇಲ್ಲದಿಲ್ಲ.

ಇನ್ನೂ ವಿಶೇಷವಾಗಿ ಬಾಗೇಪಲ್ಲಿ ಕ್ಷೇತ್ರದಲ್ಲಿ ಬೆಳೆಯುತ್ತಲೇ ಹೋದ ಸಿಪಿಐ(ಎಂ)ನ ಬೆಂಬಲ-ಅಭ್ಯರ್ಥಿ ಕಾಂ. ಶ್ರೀರಾಮರೆಡ್ಡಿಯವರ ಜನಪ್ರಿಯತೆ ಸಹಿಸದೇ ಸೋತುಹೋಗುವ ಭಯದಿಂದ ಪೂಲವಾರಿಪಲ್ಲಿ, ವಡ್ಡರಪಾಳ್ಯ ಪ್ರದೇಶಗಳ ಮತದಾನ ಕೇಂದ್ರಗಳನ್ನು ಕಾಂಗ್ರೆಸ್‌ನ ಅಭ್ಯರ್ಥಿ ಸಂಪಂಗಿಯವರ ಬೆಂಬಲಿಗರು ವಶಪಡಿಸಿಕೊಂಡು ಜನ ಸಾಮಾನ್ಯರು, ಮುಖ್ಯವಾಗಿ ದಲಿತರು ಮತದಾನಕ್ಕೆ ಬರದಂತೆ ತಡೆಹಿಡಿದಿದ್ದರು. ಪ್ರತಿಭಟನೆ ನಂತರ ಚುನಾವಣಾಧಿಕಾರಿ ಮಧ್ಯಪ್ರವೇಶಿಸಿ ಅಲ್ಲಿಗೆ ಬಂದ ಬಳಿಕವೂ ಮತದಾನಕ್ಕೆ ಅವಕಾಶ ಸಿಗದಂತೆ ಗಲಭೆ-ಧಾಳಿಯನ್ನು ಕಾಂಗ್ರೆಸ್ ಗುಂಪು ನಡೆಸಿತು. ಭಾರಿ ಪ್ರತಿಭಟನೆ ಮತ್ತು ಆಯೋಗಕ್ಕೆ ದೂರು ನೀಡಿ ಒತ್ತಾಯಿಸಿದ ಬಳಿಕ ಮರು ಮತದಾನ ನಡೆದಿದೆ. ಹಾಗೆ ಕೊತ್ತಕೋಟೆಯ ಸಿಪಿಐಎಂ ಬೆಂಬಲಿಗರಾದ ಸುಬ್ಬಾರೆಡ್ಡಿಯವರಿಗೆ ಮಚ್ಚಿನಿಂದ ಹೊಡೆದುಕಾಂಗ್ರೆಸ್ ಗೂಂಡಾಗಳು ಹತ್ಯಾ ಯತ್ನ ನಡೆಸಿದ್ದಾರೆ.

ಸಿಪಿಐ(ಎಂ)ನ ಪ್ರಬಲ ಸ್ಪರ್ಧೆ ಇರುವ ಇನ್ನೊಂದು ಕ್ಷೇತ್ರವಾದ ಕಮಲಾಪುರದಲ್ಲಿ ಈ ಬಾರಿ ಬಿಜೆಪಿ-ಕಾಂಗೆಸ್‌ಗಳಿಗೆ ತೀವ್ರ ಪ್ರತಿರೋಧವಿದ್ದುದರಿಂದ ಹಿಂದಿನಂತೆ ವ್ಯಾಪಕ ಹಿಂಸಾಚಾರ ನಡೆಸಲು ಅಷ್ಟಾಗಿ ಆಗಿಲ್ಲ, ಆದರೆ ಮತದಾನದ ಬಳಿಕ ಹೊಡೆಲ್ (ಕುಖ್ಯಾತ ಹೊಡೆಲ್ ಚನ್ನಪ್ಪ ಕೊಲೆ ನಡೆದ ಪ್ರದೇಶ) ದಲ್ಲಿ ಸಿಪಿಐ(ಎಂ)ನ ಕಾರ್ಯಕರ್ತರು, ಬೆಂಬಲಿಗರಮೇಲೆ ಕಾಂಗ್ರೆಸ್‌ನ ವೃತ್ತಿ ನಿರತ ಕ್ರಿಮಿನಲ್ ಪಡೆ ಮರಣಾಂತಿಕ ಧಾಳಿ ನಡೆಸಿದೆ. ಈ ಬಗ್ಗೆ ವೈದ್ಯಕೀಯ ವರದಿಯೊಂದಿಗೆ ದೂರು ನೀಡಿದರೆ ಕ್ರಿಮಿನಲ್‌ಗಳ ಮೇಲೆ ಪೊಲೀಸರು ಸಾಮಾನ್ಯ ಗಲಭೆ ದೂರು ದಾಖಲಿಸಿದ್ದು, ಹಲ್ಲೆಗೊಳಗಾದವರ ಮೇಲೆ 'ಅಸ್ಪೃಶ್ಯತೆ' ಕೇಸ್ ಹಾಕಿ ಜೈಲಿಗೆ ತಳ್ಳುವ ಯತ್ನ ನಡೆದಿದೆ. ಹಾಗೇ ಹೊಡಲೂರುನಲ್ಲಿ ಮತಗಟ್ಟೆ ಬಳಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಬಿಜೆಪಿಯ ಪಂಚಾಯತ್ ಸದಸ್ಯ ಹಲ್ಲೆ ನಡೆಸಿದ್ದಾನೆ. ಇನ್ನೊಂದು ಲಮಾಣಿ ತಾಂಡಾದಲ್ಲಿ ಇಡೀ ಜನತೆ ಬಿಜೆಪಿ ಶಾಸಕ ರೇವೂ ನಾಯ್ಕನನ್ನು ವಿರೋಧಿಸಿ ಸಿಪಿಐ(ಎಂ)ಗೆ ಮತ ನೀಡಲು ನಿರ್ಧರಿಸಿದ್ದರಿಂದ ನಿವೃತ್ತ ಶಿಕ್ಷಕರೊಬ್ಬರು ತಾಂಡಾಕ್ಕೆ ಬಂದರೆ ಆಕ್ರಮಣ ನಡೆಸುವುದಾಗಿ ಬೆದರಿಕೆ ಒಡ್ಡಲಾಗಿತ್ತು. ಕೋಮುವಾದಿಗಳನ್ನು ಸೋಲಿಸಿ ಎಂದು ಜಾಥಾ ಹೊರಟ ಸಾಹಿತಿ, ಚಿಂತಕರನ್ನು ಬೀರೂರಿನಲ್ಲಿ ಬಿಜೆಪಿ ಪಡೆ ತಡೆದಿದೆ. ಹಲ್ಲೆಗೆ ಮುಂದಾಗಿದೆ. ಇಂತಹ ಘಟನೆಗಳು ನೂರಾರು.


ನಕಲಿ ಮತದಾನ, ಮತದಾನಕ್ಕೆ ಜನ ಬರದಂತೆ ತಡೆಯಲು ಭಯ ಹುಟ್ಟಿಸುವುದು ಮತ್ತು ವೈಷಮ್ಯಗಳು ಸಾಧಿಸುವುದು ಎದ್ದುಕಾಣುವಂತಹವು. ಹೇಗಾದರೂ ಅಧಿಕಾರ ಹಿಡಿದು ಆಡಳಿತ ಯಂತ್ರದ ಮೇಲೆ ಹಿಡಿತ ಸಾಧಿಸಿ ತಮ್ಮ ಹಿತ ಸಾಧಿಸಿಕೊಳ್ಳುವ ಹವಣಿಕೆಗಳು ಹಲವಾರು. ಓಟಿನ ಪ್ರಜಾಪ್ರಭುತ್ವದ ಹಕ್ಕನ್ನು ಸ್ವಲ್ಪವಾದರೂ ಬಳಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಯಸಿದರೆ ಸ್ಥಾಪಿತ ಹಿತಾಸಕ್ತಿಗಳು - ಭೂಮಾಲೀಕ ಬಂಡವಾಳಗಾರರು ಆ ಹಕ್ಕನ್ನೇ ಕಿತ್ತುಕೊಳ್ಳುವ, ಅದನ್ನು ನಾಶ ಪಡಿಸಲು ಮುಂದಾಗಿದ್ದಾರೆ-ಆಗುತ್ತಾರೆ. ಪ್ರಜಾಪ್ರಭುತ್ವಕ್ಕೆ ಬೆದರಿಕೆ ಇರೋದು ಈ ವರ್ಗಗಳಿಂದಲೇ . ಜನತೆ ವರ್ಗ ಇವುಗಳನ್ನು ಎದುರಿಸಿ ಪ್ರಜಾಪ್ರಭುತ್ವದ ಹಕ್ಕು ಕಾಯ್ದುಕೊಳ್ಳುವುದು ಜನರ ಪ್ರಜಾಸತ್ತಾತ್ಮಕ ಚಳುವಳಿಯ ಮುನ್ನಡೆಗೆ ಅಗತ್ಯವಿದೆ. ಈ ಘಟನೆಗಳು ಇನ್ನೊಂದೆಡೆಯಲ್ಲಿ ಆಳುವ ವರ್ಗಗಳ ವೈಫಲ್ಯಗಳನ್ನು ಎತ್ತಿ ತೋರಿಸುತ್ತವೆ. ಹಾಗೇ ಜನತೆಯ ತೀವ್ರ ಅತೃಪ್ತಿ ಪ್ರತಿರೋಧವನ್ನೂ ಸಹ.

ವೃತ್ತಿ ಶಿಕ್ಷಣ ಬಿಕ್ಕಟ್ಟು ತೀವ್ರ: ಸಂಘರ್ಷಕ್ಕೆ ಶಿಕ್ಷಣ ಪ್ರೇಮಿಗಳು ಸಜ್ಜು

ಆರ್.ರಾಮಕೃಷ್ಣ

ವೃತ್ತಿ ಶಿಕ್ಷಣದ ಪ್ರವೇಶಕ್ಕೆ ಸಂಬಂಧಿಸಿದ ಸನ್ನಿವೇಶ ಅತ್ಯಂತ ಆಸ್ಫೋಟಕಾರಿ, ಗಂಭೀರ. ಸಾಮಾಜಿಕವಾಗಿ ಹೊಣೆ ಇಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಣ ದೋಚುವುದೇ ಲಕ್ಷ್ಯ. ಅಂಕಗಳಿದ್ದು ಪ್ರವೇಶ ದಕ್ಕದೇ ಪರದಾಡುವ ತೀವ್ರ ಆಂತಕದಲ್ಲಿ ಬೇಯುತ್ತಿರುವ ವಿದ್ಯಾರ್ಥಿ, ಪಾಲಕರು, ಇನ್ನೊಂದೆಡೆ ತನ್ನ ಹೊಣೆಗಾರಿಕೆಯಿಂದ ಜಾರಿಕೊಂಡು ಕಾನೂನು ತೋರಿಸುತ್ತಾ ವಂಚಿಸುತ್ತಿರುವ ಸರ್ಕಾರ... ಈಗ ತಕ್ಷಣದಲ್ಲಿ ಆಗಬೇಕಾದದ್ದೇನು?

ವೃತ್ತಿ ಶಿಕ್ಷಣದ ಸಮಸ್ಯೆಗಳು ದಿನೇ ದಿನೇ ಹೊಸ ಹೊಸ ರೂಪ ಹೊಸ ಮಜಲನ್ನು ಪಡೆಯುತ್ತಾ ಬೆಳೆಯುತ್ತಿವೆ. ಮೇ 18-19, 2004 ರಂದು ಕರ್ನಾಟಕ ರಾಜ್ಯ ಸರ್ಕಾರ ನಡೆಸುವ ಸಿಇಟಿ ರಾಜ್ಯಾದ್ಯಂತ ನಡೆಯಲಿವೆ. ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕಾಮೆಡ್-ಕೆ)ವು ಈ ಬಾರಿ 'ತಮ್ಮ ಪಾಲಿನ' ಸೀಟುಗಳಿಗೆ ಪ್ರತ್ಯೇಕ ಸಿಇಟಿ ನಡೆಸಲಿದ್ದಾರೆ. ಸರ್ಕಾರವೇ ನಡೆಸುವ ಸಿಇಟಿ ಮೂಲಕವೇ ತಮ್ಮ ಕಾಲೇಜಿಗೆ ವಿದ್ಯಾರ್ಥಿಗಳನ್ನು ತುಂಬಿಕೊಳ್ಳಲು ಅವಕಾಶವಿತ್ತು. ಆದರೆ ಪ್ರತಿಭೆ-ಸಾಮಾಜಿಕ ನ್ಯಾಯ, ಮನುಷ್ಯತ್ವದ ಮೌಲ್ಯಗಳು ಯಾವುದಕ್ಕೂ ಬದ್ಧವಾಗಲು ಸಿದ್ಧವಿಲ್ಲದ ಖಾಸಗಿ ಆಡಳಿತ ಮಂಡಳಿಗಳ ಧನ ದಾಹವು ತಮ್ಮ ಪಾಲಿನ ಸೀಟುಗಳಿಗೆ ಪ್ರತ್ಯೇಕ ಸಿಇಟಿ ನಡೆಸುವಂತೆ ಪ್ರೇರೇಪಿಸಿದೆ. 2002 ರ ಟಿಎಂಎ ಪೈ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಪೂರ್ಣಪೀಠದ ತೀರ್ಪು ಸಹ ಇದಕ್ಕೆ ಪೂರಕವಾಗಿದೆ.



ಶಿಕ್ಷಣಾಕಾಂಕ್ಷಿ ವಿದ್ಯಾರ್ಥಿಗಳು ಮಾತ್ರ ಈಗ ಸರ್ಕಾರಿ-ಖಾಸಗಿ ಎರಡು ಸಿಇಟಿ ಪರೀಕ್ಷೆ ಬರೆಯಬೇಕಿದೆ.

ಎಂ.ಡಿ.-ಎಂ.ಡಿ.ಎಸ್.

ಕೋರ್ಸುಗಳ ಶುಲ್ಕ ಏರಿಕೆಯ ಬರ ಸಿಡಿಲು

ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ

ಪುಟ 9 ಕ್ಕೆ


ರಾಮದುರ್ಗ: ಹೊಸ ವಿಭಾಗಗಳನ್ನು ಸೆಳೆದ ಸ್ಪರ್ಧೆ

ಬೆಳಗಾವಿ ಜಿಲ್ಲೆಯ ರಾಮದುರ್ಗ ಮತಕ್ಷೇತ್ರದಲ್ಲಿ ಈ ಸಲ ಸಿಪಿಐ(ಎಂ) ಸ್ಪರ್ಧೆ ಹೊಸ ಸಾಧ್ಯತೆಗಳನ್ನು ಹುಟ್ಟುಹಾಕಿದೆ. 10 ವರ್ಷಗಳ ನಂತರ 13ನೇ ವಿಧಾನಸಭೆಗಾಗಿ ನಡೆದ ಈ ಸ್ಪರ್ಧೆ ತಾಲೂಕಿನ ಹೊಸ ವಿಭಾಗಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.

1994 ರ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಪಕ್ಷದ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ವ್ಹಿ.ಪಿ.ಕುಲಕರ್ಣಿ ಅವರು ಸ್ಪರ್ಧಿಸಿದ್ದಾಗ ಸುಮಾರು 3 ಸಾವಿರ ಮತಗಳನ್ನು ಪಡೆದಿದ್ದರು. ಈ ಮತಗಳು ಮುಖ್ಯವಾಗಿ ನಗರ ಪ್ರದೇಶದ ಬೀಡಿ ಕಾರ್ಮಿಕರು ಮತ್ತು ಅಲ್ಪಸಂಖ್ಯಾತ ಸಮಾಜದ ಮತಗಳಾಗಿದ್ದವು. ಆದರೆ ಈ ಚುನಾವಣೆಯಲ್ಲಿ ತಾಲೂಕಿನ ಒಂದು ಪ್ರದೇಶದ ರೈತರು ಇಡಿಯಾಗಿ ಕಾಮ್ರೇಡ್ ಕುಲಕರ್ಣಿ ಅವರ ಬೆಂಬಲಕ್ಕೆ ನಿಂತದ್ದು ಒಂದು ಗಮನಾರ್ಹ ಬೆಳವಣಿಗೆ.

ಹೊಸದಾಗಿ ಮೂಡಿಬಂದ ಈ ಜನಬೆಂಬಲಕ್ಕೆ ಕಳೆದ 10 ವರ್ಷಗಳ ಅವಧಿಯಲ್ಲಿ ಕುಲಕರ್ಣಿಯವರ ನೇತೃತ್ವದಲ್ಲಿ ನಡೆಸಲಾದ ಹೋರಾಟಗಳೇ ಕಾರಣ ಎನ್ನುವುದರಲ್ಲಿ ಸಂದೇಹವಿಲ್ಲ. ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರನ್ನು ಸಂಘಟಿಸಿ ನಡೆಸಿದ ಹೋರಾಟದಿಂದ ಅವರು ರೈತರ ಅಪಾರ ನಂಬಿಕೆ ಮತ್ತು ಗೌರವಕ್ಕೆ ಪಾತ್ರರಾದರು. ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹಳೆಯ ಬಾಕಿಗಳನ್ನು ಮನ್ನಾ ಮಾಡಬೇಕು ಮತ್ತು ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಬಾರದೆಂದು ಒತ್ತಾಯಿಸಿ ಅವರು ತಾಲೂಕಿನಲ್ಲಿ ಆರಂಭಿಸಿದ ಚಳುವಳಿಯು ಇಡೀ ಜಿಲ್ಲೆಯನ್ನು ವ್ಯಾಪಿಸಿತು. ಕೊನೆಗೆ ಹಳೆಯ ಬಾಕಿಗಳನ್ನು ಮನ್ನಾ ಮಾಡಲು ಸರ್ಕಾರ ನಿರ್ಧಾರ ಮಾಡಿದಾಗ ರಾಮದುರ್ಗ ತಾಲೂಕಿನ ರೈತರು ವಿಜಯೋತ್ಸವವನ್ನೇ ಆಚರಿಸಿದ್ದರು.

'ರಾಮದುರ್ಗ ತಾಲೂಕಿನ ಗಂಡುಮಗ ಅಂದ್ರೆ ಕುಲಕರ್ಣಿ' ಅವರಿಂದ ನಮಗೆ ಅನ್ಕೂಲ ಆಗ್ಯೆತಿ. ಅದ್ರಿಗೇ ನಾವು ಓಟು ಹಾಕೋದು'' ಇದು ಮಲಪ್ರಭ ನದಿಗುಂಟ ಇರುವ ಇಪ್ಪತ್ತು ಇಪ್ಪತ್ತೈದು ಹಳ್ಳಿಗಳಲ್ಲಿ ಕೇಳಿಬರುತ್ತಿದ್ದ ಒಂದೇ ಮಾತು. ಇದುವರೆಗೆ ಕಾಂಗ್ರೆಸ್, ಬಿಜೆಪಿ, ಜನತಾದಳ ಮೊದಲಾದ ಪಕ್ಷಗಳನ್ನು ಬೆಂಬಲಿಸುತ್ತಿದ್ದ ಜನಗಳು ಇದೇ ಮೊದಲ ಬಾರಿಗೆ ಒಂದಾಗಿ ನಿಂತು ಸಿಪಿಐ(ಎಂ) ಅಭ್ಯರ್ಥಿ ಯನ್ನು ಬೆಂಬಲಿಸಲು ನಿರ್ಧರಿಸಿ ದ್ದರು.



ಕುಲಕರ್ಣಿ ಅವರ ಪ್ರಚಾರಾರ್ಥ ದಿನಾಲೂ ನೂರಾರು ಜನ ಟ್ರಾಕ್ಟರು ಗಳಲ್ಲಿ ಹಳ್ಳಿಹಳ್ಳಿಗೆ ಹೋಗುತ್ತಿದ್ದರು. ಕಾರ್ಯಕರ್ತರಿಗಾಗಿ ಜೋಳದ ರೊಟ್ಟಿ ಗಳನ್ನು ಮಾಡಿಸಿಕೊಂಡು ತಂದು ಕೊಡುತ್ತಿದ್ದರು. ಊಟಕ್ಕೆ ಬೇಕಾಗುವ ಅಕ್ಕಿಯನ್ನು ಸಹ ಪೂರೈಸುತ್ತಿದ್ದರು. ಪಕ್ಷದ ಕಾರ್ಯಾಲಯದ ಆವರಣದಲ್ಲಿ ನಿತ್ಯ ನೂರಾರು ಕಾರ್ಯಕರ್ತರು ಸೇರುತ್ತಿದ್ದರು. ಹೀಗೆ **ಯಾರ ಬಲವಂತವೂ ಇಲ್ಲದೆ, ಸ್ವಯಂಸ್ಫೂರ್ತಿ ಯಿಂದ ನಡೆದ ಈ ಚುನಾವಣಾ ಪ್ರಚಾರ ವೈಖರಿಯು ಇತರ ಎಲ್ಲ ಪಕ್ಷದವರನ್ನು ನಿಬ್ಬೆರಗಾಗಿಸಿತ್ತು.**

ಎತ್ತಿನ ಬಂಡಿಗಳ ಮೆರವಣಿಗೆ:

ಕುಲಕರ್ಣಿ ಅವರ ಬೆಂಬಲಕ್ಕೆ ನಿಂತ ಗ್ರಾಮಗಳಲ್ಲಿ ಅವರಾದಿ ಮತ್ತು ಮುಳ್ಳೂರು ಪ್ರಮುಖವಾದವುಗಳು. ಈ ಎರಡು ಗ್ರಾಮಗಳ ಮತ್ತು ಅವುಗಳ ಸುತ್ತಲಿನ ಇಪ್ಪತ್ತಕ್ಕೂ ಹೆಚ್ಚು ಗ್ರಾಮಗಳ ರೈತರು ತಮ್ಮ ಎತ್ತಿನ ಗಾಡಿಗಳನ್ನು ಚುನಾವಣಾ ಪ್ರಚಾರಕ್ಕೆ ಬಳಸಿದ್ದು ಇನ್ನೊಂದು ವೈಶಿಷ್ಟ್ಯವಾಗಿತ್ತು. ಸುರೇಬಾನ್ ರಾಮದುರ್ಗ ತಾಲೂಕಿನ ಒಂದು ಮುಖ್ಯ ಹೋಬಳಿ ಕೇಂದ್ರ. ಅಂದು ಈ ಗ್ರಾಮಗಳ ಒಂದು ಸಾವಿರಕ್ಕೂ ಹೆಚ್ಚು ಜನ ರೈತರು ಯಾವುದೇ ಪೂರ್ವಸೂಚನೆ ಇಲ್ಲದೆ ಸುರೇಬಾನ್ ಬೀದಿಗಳಲ್ಲಿ ಮೆರವಣಿಗೆ ನಡೆಸುತ್ತಾ ಸಿಪಿಐ (ಎಂ) ಪರವಾಗಿ ಜಯಘೋಷ ಮಾಡಿದಾಗಲೂರಿಗೆ ಊರೇ ಹೊರ ಬಂದು ವೀಕ್ಷಿಸು ವಂತಾಯಿತು.

ಪ್ರಚಾರದ ಕೊನೆಯದಿನ ಏಪ್ರಿಲ್ 24 ರಂದು ರಾಮದುರ್ಗ ನಗರದಲ್ಲಿಯೂ ಒಂದು ಬೃಹತ್ ರ್‍ಯಾಲಿಯನ್ನು ಸಂಘಟಿಸಲಾಗಿತ್ತು. ಈ ಸಲ ರೈತರು ನೂರಾರು ಟ್ರಾಕ್ಟರುಗಳಿಗೆ ಬಾವುಟಗಳನ್ನು ಬ್ಯಾನರುಗಳನ್ನು ಕಟ್ಟಿಕೊಂಡು ಬಂದಿದ್ದರು. ಕೇವಲ ಒಂದೇ ದಿನದ ಕರೆಗೆ ಓಗೊಟ್ಟು ಎರಡು ಸಾವಿರಕ್ಕೂ ಹೆಚ್ಚು ಜನ ರೈತರು, ಕೂಲಿಕಾರರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಎರಡು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಮೆರವಣಿಗೆಯ ನಂತರ ನಡೆದ ಬಹಿರಂಗಸಭೆ ಯನ್ನು ಉದ್ದೇಶಿಸಿ ಕಾಮ್ರೇಡ್ ಜಿ.ಎನ್. ನಾಗರಾಜ, ನಿತ್ಯಾನಂದ ಸ್ವಾಮಿ ಮತ್ತು ಭೀಮಸಿ ಕಲಾದಗಿ ಮಾತನಾಡಿದರು. ರ್‍ಯಾಲಿಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಕುಲಕರ್ಣಿಯವರು ನಾಮಪತ್ರ ಸಲ್ಲಿಸಿದ ದಿನದಂದೂ ಇದೇ ರೀತಿ ಒಂದು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಬೇರೆ ಪಕ್ಷಗಳಂತೆ ಇವರ್‍ಯಾರೂ 'ಬಾಡಿಗೆ ಜನ' ಆಗಿರಲಿಲ್ಲ.

ಹಳದಿ ಪಡಿತರ ಕಾರ್ಡುಗಳಿಗಾಗಿ ಚಳುವಳಿ ನಡೆಸಿದ ಬಡ ಕೂಲಿಕಾರರೂ ಕುಲಕರ್ಣಿಯವರನ್ನು ಬೆಂಬಲಿಸಲು ಮುಂದಾಗಿದ್ದರು. ನಿವೇಶನರಹಿತರ ಸಂಘದ ಹೋರಾಟದ ಮೂಲಕ ಹುಟ್ಟಿಕೊಂಡ ಭಾಗ್ಯ ನಗರದ ನಿವಾಸಿಗಳು ಸಿಪಿಐ(ಎಂ)ನ ಕಟ್ಟಾ ಬೆಂಬಲಿಗರು. ಅಂಗನವಾಡಿ ಕಾರ್ಯಕರ್ತೆಯವರು, ಗ್ರಾಮ ಪಂಚಾಯತ್ ನೌಕರರು, ಮಧ್ಯಮವರ್ಗದ ನೌಕರಸ್ಥರು, ಅಲ್ಲದೆ ವಿದ್ಯಾವಂತ ಯುವಕರೂ ಕುಲಕರ್ಣಿ ಅವರಿಗೆ ಈ ಸಲ ವಿಶೇಷ ಆಸಕ್ತಿ ವಹಿಸಿ ಮತನೀಡಿದ್ದಾರೆ.

ಚುನಾವಣಾ ಪ್ರಚಾರ ಪ್ರಕ್ರಿಯೆ ಕೇವಲ 12 ದಿನಗಳ ವರೆಗೆ ಮಾತ್ರ ನಡೆಸಲು ಸಾಧ್ಯವಾಗಿತ್ತು. ಆದರೆ ಪ್ರಚಾರ ಕಾರ್ಯದಲ್ಲಿ ನೆರವಾಗಿದ್ದ ಸಂಗಾತಿಗಳಾದ ವಿಠ್ಠಲ ಭಂಡಾರಿ, ಯಮುನಾ ಗಾಂವ್ಕರ, ಕೃಷ್ಣೇಗೌಡ, ಸುರೇಖಾ ರಜಪೂತ, ಅಬ್ದುಲ್ ರಜಾಕ್ ಮುಲ್ಲಾ, ವಿಜಯಕುಮಾರ್ ದೊಡ್ಡಮನಿ, ಗೈಬುಸಾಬ್ ಜೈನೆಖಾನ್, ಬಾಬು, ನಾಗಪ್ಪ, ಹನುಮಂತ, ಫಕ್ರುಸಾಬ್, ಆನಂದ್ ಕುಲಕರ್ಣಿ, ದಾದಾ, ಎಲ್.ಎಸ್.ನಾಯಕ್, ಎಫ್.ಎಂ.ನದಾಫ್ ಮತ್ತು ಇತರ ನೂರಾರು ಕಾರ್ಯಕರ್ತರ ಶ್ರಮದಿಂದ ಚುನಾವಣಾ ಪ್ರಚಾರ ಕೆಲಸ ಅತ್ಯಂತ ಉತ್ಸಾಹದಾಯಕವೂ ಪರಿಣಾಮಕಾರಿಯೂ ಆಗುವಂತಾಯಿತು. ರಾಮದುರ್ಗದಲ್ಲಿ ಈ ಸಲದ ಸ್ಪರ್ಧೆ ಸಿಪಿಐ(ಎಂ) ಪರವಾದ ಮತಗಳನ್ನು ಗಣನೀಯವಾಗಿ ಹೆಚ್ಚಿಸಲಿದೆ ಮಾತ್ರವಲ್ಲ, ಮುಂದಿನ ಗೆಲುವಿಗೆ ದೃಢವಾದ ಬುನಾದಿ ಒದಗಿಸಿದೆ.


● ನಿತ್ಯಾನಂದಸ್ವಾಮಿ

ಉಳ್ಳಾಲ: ಚುನಾವಣಾ ಹೋರಾಟ

ಕಾರ್ಯಕರ್ತರ ಸ್ಫೂರ್ತಿದಾಯಕ ಚುನಾವಣಾ ಪ್ರಚಾರ

ಕಮ್ಯೂನಿಸ್ಟ್ ಪಕ್ಷವು ಕಳೆದ ಐದು ದಶಕಗಳಿಂದಲೂ ಸ್ಪರ್ಧಿಸುತ್ತಾ ಬಂದಿರುವ ವಿಧಾನಸಭಾ ಕ್ಷೇತ್ರ ಉಳ್ಳಾಲ, ಕೇರಳದ ಉತ್ತರ ಗಡಿ ತಲಪಾಡಿಯಿಂದ ಆರಂಭವಾಗಿ ನೇತ್ರಾವತಿ ನದಿಯವರೆಗಿನ ಹದಿನಾಲ್ಕು ಗ್ರಾಮಗಳು ಮತ್ತು ಮಂಗಳೂರು ಮಹಾನಗರ ಪಾಲಿಕೆಯ ಹತ್ತು ವಾರ್ಡುಗಳನ್ನು ಒಳಗೊಂಡು ಅರ್ಧ ಭಾಗ ನಗರ ಮತ್ತು ಅರ್ಧ ಭಾಗ ಗ್ರಾಮಾಂತರ ಪ್ರದೇಶದಲ್ಲಿ ವ್ಯಾಪಿಸಿದ ಕ್ಷೇತ್ರ ಉಳ್ಳಾಲ. ಒಟ್ಟು ಒಂದೂಕಾಲು ಲಕ್ಷ ಮತದಾರರ ಪೈಕಿ ಸುಮಾರು 26 ಸಾವಿರ ಮತದಾರರನ್ನು ಹೊಂದಿರುವ ಉಳ್ಳಾಲವೆಂಬ ದೊಡ್ಡ ಗ್ರಾಮ ಈ ಕ್ಷೇತ್ರದಲ್ಲಿ ಒಳಗೊಂಡಿದೆ. ಆದ್ದರಿಂದ ಈ ಗ್ರಾಮದ ಹೆಸರನ್ನೇ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ. ರೈತರು, ಕೂಲಿಗಾರರು ಮತ್ತು ಬೀಡಿ ಕಾರ್ಮಿಕರೇ ಬೃಹತ್ ಸಂಖ್ಯೆಯಲ್ಲಿರುವ ಈ ಕ್ಷೇತ್ರದ ಕೋಣಾಜೆ ಎಂಬ ಗ್ರಾಮದಲ್ಲಿ ಮಂಗಳೂರು ವಿಶ್ವವಿದ್ಯಾಲಯವಿದೆ. ಇತ್ತೀಚೆಗೆ ಎರಡು ವೈದ್ಯಕೀಯ ಕಾಲೇಜುಗಳೂ ಈ ಪ್ರದೇಶದಲ್ಲಿ ಆರಂಭವಾಗಿವೆ.

1962ರಲ್ಲಿ ಈ ಕ್ಷೇತ್ರದಿಂದ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ದಿವಂಗತ ಎ.ಕೃಷ್ಣಶೆಟ್ಟರು ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಪಕ್ಷ ವಿಭಜನೆಯಾದಾಗ ಅವರು ಸಿಪಿಐ(ಎಂ)ನಲ್ಲಿ ಮುಂದುವರಿದರು. ಬಡರೈತರ ಅಸಂಖ್ಯ ಹೋರಾಟಗಳನ್ನು ಸಂಘಟಿಸಿ ಸಮರಶೀಲ ನೇತೃತ್ವ ನೀಡಿದ ಕಾಮ್ರೇಡ್ ಎಂ.ಕೃಷ್ಣ ಶೆಟ್ಟರ ಹೆಸರು ದ.ಕ. ಜಿಲ್ಲೆಯಲ್ಲಿ ಮನೆ ಮಾತಾಗಿತ್ತು. ಅವರು ನಿಧನರಾಗಿ ಮೂರು ದಶಕಗಳ ನಂತರ ಇಂದಿಗೂ ಅವರ ಹೆಸರೆತ್ತಿದರೆ ಈ ಪ್ರದೇಶದ ರೈತರೂ, ಕಾರ್ಮಿಕರೂ ರೋಮಾಂಚನಗೊಳ್ಳುತ್ತಾರೆ. 1983ರಲ್ಲಿ ಈ ಕ್ಷೇತ್ರದಿಂದ ದಿವಂಗತ ಪಿ.ರಾಮಚಂದ್ರ ರಾವ್ ಅವರು ಆಯ್ಕೆಯಾದರು. ಎರಡೇ ವರ್ಷಗಳಲ್ಲಿ ವಿಧಾನಸಭೆ ವಿಸರ್ಜನೆಗೊಂಡರೂ ಆ ಅಲ್ಪ ಅವಧಿಯಲ್ಲಿ 'ಮಾಸ್ಟ್ರು' ಬೀಡಿ ಕಾರ್ಮಿಕರಿಗೆ ತುಟ್ಟಿ ಭತ್ಯೆ ನಿಗದಿಗೊಳಿಸಿ ಜಾರಿ ಮಾಡಿಸುವ ದರಲ್ಲಿ ಯಶಸ್ವಿಯಾದರು. ಮಾತ್ರವಲ್ಲದೆ ಉಳ್ಳಾಲ ಕ್ಷೇತ್ರದ ಜನಸಾಮಾನ್ಯರ ಅಸಂಖ್ಯ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಿದರು. ಆ ನಂತರದ ಚುನಾವಣೆ ಗಳಲ್ಲಿ ರಾಜಕೀಯ ಏರುಪೇರುಗಳ ನಡುವೆ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿ ಕೆಲವೊಮ್ಮೆ ಗಣನೀಯ ಮತಗಳನ್ನೂ ಕೆಲವೊಮ್ಮೆ ಕಡಿಮೆ ಸಂಖ್ಯೆಯ ಮತಗಳನ್ನೂ ಪಡೆದರು.



ಇತ್ತೀಚಿನ ವರ್ಷಗಳಲ್ಲಿ ಉಳ್ಳಾಲದಲ್ಲಿ ಕೋಮುವಾದಿಗಳ ಚಟುವಟಿಕೆ ತೀವ್ರವಾಗುತ್ತಿದೆ. ಪದೇ ಪದೇ ಕೋಮು ಗಲಭೆಗಳು ನಡೆಯುತ್ತಿವೆ. ಕೇವಲ ಆರು ತಿಂಗಳುಗಳ ಹಿಂದೆ ಇಲ್ಲಿ ಕೋಮು ದ್ವೇಷದಿಂದ ಎರಡು ಕೊಲೆಗಳು ನಡೆದಿವೆ. ಇಂತಹ ಸನ್ನಿವೇಶದಲ್ಲಿ ಕೋಮು ಸಾಮರಸ್ಯವನ್ನು ಕಾಪಾಡಲು ಸಿಪಿಐ(ಎಂ) ಕಾರ್ಯಕರ್ತರು ದುಡಿಯುತ್ತಿದ್ದಾರೆ.

ಈ ಸಲದ ಚುನಾವಣೆಯಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿಯೂ, ದ.ಕ.ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯೂ ಆದ ರಾಮಚಂದ್ರ ಉಚ್ಚಿಲರು ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಈ ಕ್ಷೇತ್ರವು ಪಕ್ಷದ ಎರಡು ಪ್ರಾದೇಶಿಕ ಸಮಿತಿಗಳ ವ್ಯಾಪ್ತಿಯೊಳಗೆ ಬರುತ್ತದೆ. ನೇತ್ರಾವತಿ ನದಿಯ ದಕ್ಷಿಣಕ್ಕಿರುವ 14 ಗ್ರಾಮಗಳನ್ನೊಳಗೊಂಡ ಪ್ರದೇಶವು ಉಳ್ಳಾಲ ಮಂಗಳೂರು ಮಹಾನಗರದ ಹತ್ತು ವಾರ್ಡುಗಳು ಮಂಗಳೂರು ನಗರ ಸಮಿತಿಯ ವ್ಯಾಪ್ತಿಯಲ್ಲಿದೆ.

ಸುಮಾರು ಆರು ನೂರು ಮಂದಿ ಸದಸ್ಯರು ಈ ಕ್ಷೇತ್ರದ ವ್ಯಾಪ್ತಿಯಲ್ಲಿದ್ದಾರೆ. ಇಲ್ಲಿರುವ ಬೀಡಿ ಕಾರ್ಮಿಕರ ಮೂರು ಸಂಘಗಳಲ್ಲಿ ಹತ್ತುಸಾವಿರ ಸದಸ್ಯರಿದ್ದಾರೆ ರೈತ ಸಂಘದಲ್ಲಿ ಐದು ಸಾವಿರ ಸದಸ್ಯರಿ ದ್ದಾರೆ. ಕೋಮುವಾದಿಗಳ ದಾಳಿಗೆ ಬಲಿಯಾದ ಹುತಾತ್ಮ ಶ್ರೀನಿವಾಸ ಬಜಾಲ್ ಅವರ ಕಾರ್ಯಕ್ಷೇತ್ರ ವಾದ ಬಜಾಲ್ ವಾರ್ಡು ಈ ವಿಧಾನ ಸಭಾ ಕ್ಷೇತ್ರದಲ್ಲಿದೆ. ಕೋಮುವಾದಿಗಳನ್ನು ಸೋಲಿಸುವ ದೃಢ ಸಂಕಲ್ಪ ಮಾಡಿದ ಡಿವೈಎಫ್ ಐ ಕಾರ್ಯಕರ್ತರು ಸಿಪಿಐ(ಎಂ) ಅಭ್ಯರ್ಥಿಯ ಗೆಲುವಿಗಾಗಿ ಶಕ್ತಿ ಮೀರಿ ದುಡಿದಿದ್ದಾರೆ.

ಚುನಾವಣಾ ಪ್ರಚಾರದ ಉದ್ಘಾಟನಾ ಸಭೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಉದ್ಘಾಟನಾ ಭಾಷಣ ಮಾಡಿ ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಿದ್ದಾರೆ. ತೊಕ್ಕೊಟಿನಲ್ಲಿ ನಡೆದ ಪ್ರಮುಖ ಸಾರ್ವಜನಿಕ ಸಭೆಯಲ್ಲಿ ಎಸ್.ವೈ. ಗುರುಶಾಂತ್ ಪ್ರಧಾನ ಭಾಷಣಕಾರರಾಗಿದ್ದರು. ಕೆ.ಆರ್. ಶ್ರೀಯಾನ್, ಬಿ.ಮಾಧವ, ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ ಮೊದಲಾದ ನಾಯಕರು ಅಸಂಖ್ಯ ಸಭೆಗಳಲ್ಲಿ ಭಾಗವಹಿಸಿದ್ದಾರೆ.

ಈ ಚುನಾವಣೆಯಲ್ಲಿ ಉಳ್ಳಾಲ ಕ್ಷೇತ್ರದಲ್ಲಿ ಜಾತ್ಯಾತೀತ ಜನತಾದಳದ ಪಾತ್ರವು ಆ ಪಕ್ಷದ ಚರಿತ್ರೆಯಲ್ಲಿ ಒಂದು ಕಪ್ಪು ಚುಕ್ಕೆಯಾಗಿ ಮೂಡಿಬಂತು. ರಾಜ್ಯ ಮಟ್ಟದ ಚುನಾವಣಾ ಹೊಂದಾಣಿಕೆಯ ಪ್ರಕಾರ ಉಳ್ಳಾಲವನ್ನು ಸಿಪಿಐ(ಎಂ)ಗೆ ಬಿಟ್ಟು ಕೊಡಲಾಗಿತ್ತು. ಅದರಂತೆ ಸಿಪಿಐ(ಎಂ) ಅಭ್ಯರ್ಥಿ ನಾಮಪತ್ರ ಸಲ್ಲಿಸಿದ ನಂತರ, ಮಾಜಿ ಬಿಜೆಪಿ ಶಾಸಕ ಕೆ.ಜಯರಾಮ ಶೆಟ್ಟರನ್ನು ಜೆಡಿ(ಎಸ್) ಸದಸ್ಯರನ್ನಾಗಿ ಸೇರ್ಪಡೆಗೊಳಿಸಿ ಅವರಿಗೆ ಆ ಪಕ್ಷದಿಂದ ಬಿ.ಫಾರ್ಮ ನೀಡಲಾಯಿತು.

ಮೂವತ್ತೈದು ವರ್ಷಗಳಿಂದ ಸಂಘ ಪರಿವಾರದ ಸಕ್ರಿಯ ಕಾರ್ಯಕರ್ತ ನಾಗಿದ್ದ ಜಯರಾಮ ಶೆಟ್ಟರು ತಮಗೆ ಬಿಜೆಪಿಯವರು ಟಿಕೆಟ್ ನೀಡಲಿಲ್ಲ ಎಂಬ ಒಂದೇ ಕಾರಣಕ್ಕಾಗಿ ಒಮ್ಮಿಂದೊಮ್ಮೆಗೆ ಜಾತ್ಯಾತೀತರಾಗಿ ಪರಿವರ್ತನೆಗೊಂಡರೆಂಬುದನ್ನು ಜೆಡಿ(ಎಸ್)ನವರು ಸಮರ್ಥಿಸಬಲ್ಲರೇ? ಸಿಪಿಐ(ಎಂ)ಗೆ ವಿಶ್ವಾಸ ದ್ರೋಹ ಮಾಡಿ ಜೆಡಿ(ಎಸ್) ಸಾಧಿಸಿ ದ್ದೇನು? ಎಂದು ಸಿಪಿಐ(ಎಂ) ಕಾರ್ಯಕರ್ತರು ಕೇಳುತ್ತಿದ್ದಾರೆ.

ಸಿಪಿಐ(ಎಂ)ನ ನಿರಂತರ ರಾಜಕೀಯ ಹೋರಾಟಗಳಲ್ಲಿ ಚುನಾವಣೆ ಒಂದು ಅವಶ್ಯಕ-ವಾದ ಮಜಲು. ಪ್ರಸಕ್ತ ಚುನಾವಣಾ ಹೋರಾಟವು ಉಳ್ಳಾಲ ಕ್ಷೇತ್ರದ ಸಿಪಿಐ(ಎಂ) ಕಾರ್ಯಕರ್ತರ ರಾಜಕೀಯ ಪ್ರಜ್ಞೆಯನ್ನು ಮತ್ತಷ್ಟು ದೃಢಗೊಳಿಸಲಿದೆ.

● ಬಿ. ಮಾಧವ

ಮೇ ದಿನ 2004

ಹೊಸ ಆಂದೋಲನದ ಸಂಕಲ್ಪದಲ್ಲಿ...

1848ರಲ್ಲಿ ಕಮ್ಯೂನಿಸ್ಟ್ ಪ್ರಣಾಳಿಕೆ ಪ್ರಕಟವಾದಾಗ ವಿಶ್ವ ಶ್ರಮಜೀವಿ ವರ್ಗದ ಆಂದೋಲನವನ್ನು ಅದು ಸಂಕೇತಿಸಿತು. ಅಂದಿನಿಂದ ವಿಶ್ವ ಕಾರ್ಮಿಕ ಆಂದೋಲನ ಹಲವು ತಿರುವುಗಳನ್ನು ಹಾದು ಬಂದಿದೆ; ಕಮ್ಯೂನಿಸ್ಟ್ ಪ್ರಣಾಳಿಕೆ ಹೇಳಿರುವಂತೆ ಕಾರ್ಮಿಕ ವರ್ಗ ಹಂತ ಹಂತವಾಗಿ ತನ್ನದೇ ಹೋರಾಟಗಳಿಂದ ಪ್ರಗತಿ ಹೊಂದಿ ಕ್ರಾಂತಿಕಾರಿ ರಾಜಕೀಯ ಪಾಠಗಳನ್ನು ಕಲಿತಿದೆ. 2004ರ ಮೇ ದಿನದ ಸಂದರ್ಭದಲ್ಲಿ ಈ ಕಳೆದ 156 ವರ್ಷಗಳ ಬೆಳವಣಿಗೆಗಳ ಒಂದು ಸಂಕ್ಷಿಪ್ತ ಹಿನ್ನೋಟ ನೀಡುತ್ತದೆ ಈ ಲೇಖನ ವಿಶ್ವ ಶ್ರಮಜೀವಿವರ್ಗದ ಆಂದೋಲನ ಈಗಿನ ಸವಾಲುಗಳನ್ನು ಎದುರಿಸಿ ಹೇಗೆ ಮುನ್ನಡೆ ಸಾಧಿಸ ಬಹುದು ಎಂದೂ ಸೂಚಿಸುತ್ತದೆ.

ವಿ.ಜೆ.ಕೆ.ನಾಯರ್

"ವಿಶ್ವದ ಕಾರ್ಮಿಕರೇ ಒಂದಾಗಿ" ಎಂದು 156 ವರ್ಷಗಳ ಹಿಂದೆ 1848ರಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೇಲ್ಸ್ ಜತೆ ಸೇರಿ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಬರೆದಿದ್ದರು. ಕಾರ್ಮಿಕರಿಗೆ ಕಳಕೊಳ್ಳಲು ಏನೂ ಇಲ್ಲ, ಗಳಿಸಿಕೊಳ್ಳಲು ಇಡೀ ಜಗತ್ತೇ ಇದೆ ಎಂದು ಪ್ರಣಾಳಿಕೆ ಸಾರಿತ್ತು.

ಮಾರ್ಕ್ಸ್ ಮತ್ತು ಎಂಗೆಲ್ಸ್ ಮಾಡಿದ ವಿಶ್ಲೇಷಣೆಯಲ್ಲಿ ಯಾವುದೇ ಒಂದು ಪ್ರಶ್ನೆಯ ಮೇಲೆ ನಂತರ ಹೊಸ ಸಂಗತಿಗಳು ಕಂಡು ಬಂದು ಆ ಆಧಾರದಲ್ಲಿ ಆ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಾಗ ಆ ಹೊಸ ಸಂಗತಿಗಳನ್ನು ಒಪ್ಪಿಕೊಳ್ಳಲು ಅವರು ಹಿಂಜರಿಯುತ್ತಿರಲಿಲ್ಲ. ಅವರಿಗೆ ವೈಜ್ಞಾನಿಕ ಆಧಾರ ಮತ್ತು ವಿಧಾನ ಬಿಟ್ಟು ಬೇರೆ ಯಾವುದೇ ಒಪ್ಪಿಗೆಯಿರಲಿಲ್ಲ.

ಇಡೀ ಕಮ್ಯೂನಿಸ್ಟ್ ಪ್ರಣಾಳಿಕೆ ಅದುವರೆಗೆ ಅವರಿಗೆ ತಿಳಿದಿದ್ದ ಸಮಾಜದ ವೈಜ್ಞಾನಿಕ ವಿಶ್ಲೇಷಣೆಯನ್ನು ಆಧರಿಸಿತ್ತು. ಬಂಡವಾಳಶಾಹಿ ಸಮಾಜ, ಕಾರ್ಖಾನೆ ವ್ಯವಸ್ಥೆ, ವಿಶ್ವ ವ್ಯಾಪಾರ ಇವೆಲ್ಲಾ ಪಾಳೆಯಗಾರೀ ಸಮಾಜದೊಂದಿಗೆ ಸಂಘರ್ಷದಲ್ಲಿ ಬೆಳೆಯಿತು ಎಂಬುದನ್ನು ಅವರು ಕಂಡು ಹಿಡಿದರು. ಅದೇ ಸ್ವತಃ ಪಾಳೆಯಗಾರೀ ವ್ಯವಸ್ಥೆ ಅದಕ್ಕೆ ಮೊದಲಿದ್ದ ಗುಲಾಮರ ಒಡೆತನದ ಸಮಾಜದಿಂದ, ಆ ಉತ್ಪಾದನಾ ವಿಧಾನದಿಂದ ಎದ್ದು ಬಂತು. ಈ ಗುಲಾಮರ ಒಡೆತನದ ಸಮಾಜ ಆದಿಕಾಲದ ಸಮತಾ ಸಮಾಜ ವಿಸರ್ಜನೆಗೊಂಡಾಗ ಮೂಡಿ ಬಂತು. ಸಾವಿರಾರು ವರ್ಷಗಳ ಕಾಲ ಇದ್ದ ಹಲವಾರು ವರ್ಗಗಳು ಹೇಗೆ ಕೇವಲ ಬೂರ್ಜ್ವಾ ವರ್ಗ ಮತ್ತು ಶ್ರಮಜೀವಿ ವರ್ಗ ಎಂಬ ಎರಡು ವರ್ಗಗಳಾಗಿ ಸರಳೀಕೃತಗೊಳ್ಳುತ್ತಿವೆ ಎಂಬುದನ್ನು ಅವರು ವಿಶ್ಲೇಷಿಸಿದರು.

ಹೇಗೆ ಬೂರ್ಜ್ವಾ ವರ್ಗವೇ ಪಾಳೆಯಗಾರೀ ವ್ಯವಸ್ಥೆಯ ಗರ್ಭದಿಂದಲೇ ಮೂಡಿ ಬಂತು, ಹೇಗೆ ಆ ವರ್ಗವನ್ನು ಬೇಟೆಯಾಡಲಾಯಿತು, ನಂತರ ಆ ವರ್ಗವೇ ಸಾಕಷ್ಟು ಶಕ್ತಿಶಾಲಿಯಾಗಿ ತನ್ನನ್ನು ಬೇಟೆ ಮಾಡಿದವರನ್ನೇ ಬೇಟೆಯಾಡಿದರು ಎಂಬುದನ್ನು ಅವರು ಸವಿವರವಾಗಿ ವರ್ಣಿಸಿದ್ದಾರೆ.

ಬೂರ್ಜ್ವಾ ವರ್ಗ ಹೇಗೆ ಪ್ರಜಾಪ್ರಭುತ್ವದ ತಳಪಾಯವನ್ನು ಹಾಕಿತು ಹಾಗೂ ಗಣತಂತ್ರವನ್ನು ಸ್ಥಾಪಿಸಿತು ಎಂಬುದನ್ನು ಪ್ರಣಾಳಿಕೆ ವಿವರಿಸುತ್ತದೆ. ಅವರ ಗಣತಂತ್ರ ತಮ್ಮದೇ ವ್ಯವಹಾರಗಳನ್ನು ನಿರ್ವಹಿಸುವ ಒಂದು ಸಮಿತಿಯಲ್ಲದೆ ಬೇರೇನೂ ಅಲ್ಲ ಎಂದೂ ಅದು ಹೇಳುತ್ತದೆ.

ಪ್ರಣಾಳಿಕೆ ಸಮಾಜದಲ್ಲಿ ಬದಲಾವಣೆಯ ಚಾಲಕ ಶಕ್ತಿ ಯಾವುದು ಎಂಬುದನ್ನು ವಿವರಿಸುತ್ತದೆ. ಮಾನವ ಜೀವಿಗಳು ಬದುಕುಳಿಯಲು ಉತ್ಪಾದನೆ ಮತ್ತು ವಿನಿಮಯದಲ್ಲಿ ತೊಡಗಬೇಕಾಗುತ್ತದೆ. ಉತ್ಪಾದನಾ ಸಾಧನಗಳನ್ನು ಬೆಳೆಸುವುದು ಸಮಾಜದ ಬೆಳವಣಿಗೆಯ ಭೌತಿಕ ಆಧಾರ ಎಂದು ಅದು ಹೇಳುತ್ತದೆ.

ಉತ್ಪಾದನಾ ಶಕ್ತಿಗಳ ಬೆಳವಣಿಗೆ

ಬೆಳವಣಿಗೆ ಹೊಂದಿದ ಉತ್ಪಾದನಾ ಸಾಧನಗಳೊಂದಿಗೆ ಶ್ರಮವೂ ಸೇರಿ ಉತ್ಪಾದನಾ ಶಕ್ತಿಗಳಾಗುತ್ತವೆ. ಉತ್ಪಾದನಾ ಸಂಬಂಧಗಳು ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಅಡ್ಡಿಯಾದಾಗ ಅಂತಹ ಸಮಾಜ ಅಭಿವೃದ್ಧಿ ಹೊಂದುವುದಿಲ್ಲ. ಆದಿಕಾಲದ ಸಮತಾ ಸಮಾಜದಲ್ಲಿನ ಉತ್ಪಾದನಾ ಸಂಬಂಧಗಳು ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಒಂದು ಅಡ್ಡಿಯಾದವು. ಆಗ ಅದು ಸ್ಫೋಟಗೊಂಡು ಪಾಳೆಯಗಾರಿ ಉತ್ಪಾದನಾ ವಿಧಾನ ಸ್ಥಾಪನೆಗೊಂಡಿತು ಎಂದು ಕಮ್ಯೂನಿಸ್ಟ್ ಪ್ರಣಾಳಿಕೆ ಹೇಳುತ್ತದೆ. ಈ ಪಾಳೆಯಗಾರಿ ಬಂಡವಾಳಶಾಹಿಗೆ ದಾರಿ ಮಾಡಿಕೊಟ್ಟಾಗ ಮತ್ತೆ ಇತಿಹಾಸ ನಿರ್ಮಾಣವಾಯಿತು. ಬಂಡವಾಳಶಾಹಿ ಉತ್ಪಾದನಾ ಶಕ್ತಿಗಳು ಎಷ್ಟೊಂದು ಬೆಳೆದವೆಂದರೆ ಅದುವರೆಗೆ ತಿಳಿದಿದ್ದ ಮಾನವ ಸಮಾಜದ ಸಾಧನೆಗಳನ್ನೆಲ್ಲಾ, ಮೀರಿ ನಿಂತಿತು (ಒಂದೂವರೆ ಶತಮಾನದ ಹಿಂದೆಯೇ).



ಬಂಡವಾಳಶಾಹಿ ಪಾಳೆಯಗಾರಿ ಸಮಾಜವನ್ನು ಪರಿವರ್ತಿಸುತ್ತದೆ; ಶ್ರಮಜೀವಿಗಳನ್ನು ಕೇವಲ ಕೂಲಿ ಗುಲಾಮರಾಗಿ ಪರಿವರ್ತಿಸುತ್ತದೆ ಬಂಡವಾಳಶಾಹಿ ಹಿಂದಿನ ಎಲ್ಲಾ ವ್ಯವಸ್ಥೆಗಳನ್ನು ತನ್ನ ಅಡಿಯಾಳಾಗಿಸುತ್ತದೆ ಮತ್ತು ಅವನ್ನೂ ಪರಿವರ್ತಿಸುತ್ತದೆ. ಹೀಗೆ ಮಾಡುವಾಗ ತನ್ನದೇ ಬಿಂಬದಿಂದ ಒಂದು ಜಗತ್ತನ್ನು ಸೃಷ್ಟಿಸುತ್ತದೆ ಎನ್ನುತ್ತದೆ ಕಮ್ಯೂನಿಸ್ಟ್ ಪ್ರಣಾಳಿಕೆ.

ಬಂಡವಾಳಶಾಹಿ ತನ್ನದೇ ಸ್ವಭಾವದಿಂದಾಗಿ ಜಗತ್ತೆಲ್ಲಾ ವ್ಯಾಪಿಸುವಂತೆ ಮಾಡುತ್ತದೆ. ಇದು ಈ ಹಿಂದಿನ ಎಲ್ಲಾ ವ್ಯವಸ್ಥೆಗಳನ್ನು ಹಳಸಲಾಗಿಸುತ್ತದೆ, ಅಂತಿಮ ವಾಗಿ ಇಲ್ಲವಾಗಿಸುತ್ತದೆ.

ಅದೇ ವೇಳೆಗೆ ಬಂಡವಾಳಶಾಹಿ ಒಂದು ಹೊಸವರ್ಗವನ್ನು ಸೃಷ್ಟಿಸುತ್ತದೆ. ಶ್ರಮಜೀವಿ ವರ್ಗ. ಈ ವರ್ಗ ತನ್ನನ್ನು ಉದ್ಧರಿಸಿಕೊಳ್ಳ ಬೇಕಾದರೆ ಬಂಡವಾಳಶಾಹಿಯನ್ನೇ ಕೊನೆಗೊಳಿಸಿ ಸಮಾಜ ವಾದದಲ್ಲಿ ಹೊಸ ಉತ್ಪಾದನಾ ವಿಧಾನವನ್ನು ಪ್ರವೇಶಿಸ ಬೇಕಾಗುತ್ತದೆ.



ಕಾರ್ಮಿಕ ವರ್ಗ ಮೊದಮೊದಲು ಬಂಡವಾಳದ ಹಿತಾಸಕ್ತಿಗಳಿಗಾಯೇ ಹೋರಾಡುತ್ತದೆ. ನಂತರ ಹಂತ ಹಂತವಾಗಿ ತನ್ನದೇ ಹೋರಾಟಗಳಿಂದ ಪ್ರಗತಿ ಹೊಂದಿ ಕ್ರಾಂತಿಕಾರಿ ರಾಜಕೀಯದ ಪಾಠಗಳನ್ನು ಕಲಿಯುತ್ತದೆ ಎಂದೂ ಪ್ರಣಾಳಿಕೆ ಹೇಳುತ್ತದೆ.

ಮಾರ್ಕ್ಸ್ ಮತ್ತು ಎಂಗೆಲ್ಸ್ ಬಂಡವಾಳ ಶಾಹಿ ಸಮಾಜ ಬಿಕ್ಕಟ್ಟುಗ್ರಸ್ತವಾಗಿದೆ ಎಂದು ವಿಶ್ಲೇಷಣಾತ್ಮಕವಾಗಿ ಸಾಬೀತು ಪಡಿಸಿದ್ದಾರೆ. ಬೇಕಾದ್ದಕ್ಕಿಂತ ಹೆಚ್ಚು ಉತ್ಪಾದನೆಯಿಂದ ಎಂತಹ ಬಿಕ್ಕಟ್ಟಿನತ್ತ ಸಾಗುತ್ತದೆಯೆಂದರೆ ಉತ್ಪಾದನೆಯನ್ನು ಕಾದುಕೊಳ್ಳುವುದು ಅಸಾಧ್ಯವಾಗುತ್ತದೆ. ದುಡಿಯುವ ಜನಗಳು ಮಾತ್ರವೇ ಸಮಾಜವನ್ನು ಒಂದು ಶೋಷಣಾರಹಿತವಾದ ಸಮಾಜವಾಗಿ ಪುನರ್‍ರೂಪಿಸಲು ಸಾಧ್ಯ ಎಂದು ಅವರು ಹೇಳಿದರು.

ಪ್ಯಾರೀಸ್ ಕಮ್ಯೂನ್

ಕಾರ್ಲ್‌ಮಾರ್ಕ್ಸ್ ಕಾಲದಲ್ಲೇ ಪ್ಯಾರೀಸ್ ಕಮ್ಯೂನ್ ಸಂಭವಿಸಿತು. 1871ರಲ್ಲಿ ಪ್ಯಾರೀಸ್‌ನ ಕಾರ್ಮಿಕ ವರ್ಗ ಫ್ರೆಂಚ್ ಸರ್ಕಾರವನ್ನು ಕಿತ್ತೆಸೆದು ತನ್ನದೇ ಪ್ರಭುತ್ವವನ್ನು ಸ್ಥಾಪಿಸಿತು. ಈ ಕಮ್ಯೂನ್ 72 ದಿನಗಳ ಕಾಲ ಇತ್ತು. ವರ್ಸೆಲ್ಸ್‌ನತ್ತ ಹಿಂದೆ ಸರಿದಿದ್ದ ಫ್ರೆಂಚ್ ಸೇನೆ ಮತ್ತೆ ಪ್ಯಾರೀಸ್‌ನ ಮೇಲೆ ದಂಡೆತ್ತಿ ಬಂದು ಪ್ಯಾರೀಸ್ ಕಮ್ಯೂನ್‌ನಲ್ಲಿ ಭಾಗವಹಿಸಿದ ವರನ್ನು ದಮನ ಮಾಡಿದಾಗ ಅದು ಪತನಗೊಂಡಿತು. ಪ್ಯಾರೀಸ್ ಕಮ್ಯೂನ್‌ನ ಯಶಸ್ಸು ಮತ್ತು ಸೋಲನ್ನು ವಿಶ್ಲೇಷಿಸಿದ ಮಾರ್ಕ್ಸ್ ಕಮ್ಯೂನ್‌ನಲ್ಲಿ ಭಾಗ್ವಹಿಸಿದವರು ಬೂರ್ಜ್ವಾಗಳ ಪ್ರಭುತ್ವ ಯಂತ್ರವನ್ನು ಅವಲಂಬಿಸಬಾರದಿತ್ತು ಎಂಬ ತೀರ್ಮಾನಕ್ಕೆ ಬರುತ್ತಾರೆ. ಅದನ್ನು ಧ್ವಂಸ ಮಾಡಿ ದುಡಿಯುವ ಜನಗಳ ನಡುವಿನಿಂದ ಹೊಸ ಪ್ರಭುತ್ವ ಯಂತ್ರವನ್ನು ಸೃಷ್ಟಿಸಬೇಕಾಗಿತ್ತು ಎಂದಿದ್ದಾರೆ ಅವರು.

ಅಲ್ಲದೆ ಫ್ರೆಂಚ್ ಸೇನೆ ವರ್ಸೆಲ್ಸ್‌ಗೆ ಹಿಂದೆ ಸರಿಯಲು ಕ್ರಾಂತಿಕಾರಿಗಳು ಬಿಡಬಾರದಿತ್ತು. ಅದನ್ನು ಬೆನ್ನಟ್ಟಿ, ಧಾಳಿ ಮಾಡಿ ನಾಶಮಾಡಬೇಕಾಗಿತ್ತು.

ಇದರಲ್ಲಿ ಕಾರ್ಮಿಕ ವರ್ಗ ಯಶಸ್ವಿಯಾಗಬೇಕಾದರೆ ಅದು ರೈತಾಪಿ ವರ್ಗದೊಂದಿಗೆ ಒಂದು ಸಖ್ಯತೆಯನ್ನು ಕಟ್ಟದೆ ಸಾಧ್ಯವಿರಲಿಲ್ಲ ಎಂದೂ ಅವರು ಹೇಳುತ್ತಾರೆ. ಕಾರ್ಮಿಕವರ್ಗ ರೈತಾಪಿ ಜನಗಳನ್ನು ತಮ್ಮೆಡೆಗೆ ಗೆದ್ದುಕೊಂಡು ಫ್ರೆಂಚ್ ಸೇನೆಯನ್ನು ಬೆನ್ನಟ್ಟಿ ಗ್ರಾಮೀಣ ಪ್ರದೇಶಗಳತ್ತ ಸಾಗಿ ಅದನ್ನು ಸೋಲಿಸುವುದು ಅಗತ್ಯವಾಗಿತ್ತು.

ಹೊಸ ಸನ್ನಿವೇಶ - ಮೇ ದಿನ ಆಂದೋಲನ

ಹೊಸ ಸನ್ನಿವೇಶದಲ್ಲಿ ಎಂಟು ಗಂಟೆಯ ಕೆಲಸದ ದಿನದ ಆಂದೋಲನ ಆರಂಭವಾಯಿತು. ವಿಶ್ವಾದ್ಯಂತ ಇಡೀ ಕಾರ್ಮಿಕವರ್ಗಕ್ಕೆ ಒಂದೇ ರೀತಿಯ ಕೆಲಸದ ಪರಿಸ್ಥಿತಿ ಇದರ ಹಿಂದಿದ್ದ ಬೇಡಿಕೆ. ಪ್ರತಿಯೊಂದು ಪ್ರಭುತ್ವದಲ್ಲಿ ಕಾರ್ಮಿಕವರ್ಗ ತನ್ನದೇ ದಮನಕೋರರ ವಿರುದ್ಧ ಎಲ್ಲಾ ಕಾರ್ಮಿಕರ ಒಂದು ಬೇಡಿಕೆಗಾಗಿ ಹೋರಾಡಬೇಕಾಗುತ್ತದೆ, ಈ ಬೇಡಿಕೆ ಎಲ್ಲೆಡೆಯೂ ಅನ್ವಯವಾಗುತ್ತದೆ ಎಂಬುದು ಮಾರ್ಕ್ಸ್ ಕಣ್ಣೋಟವಾಗಿತ್ತು. ಕೆಲಸದ ದಿನವನ್ನು ಮಿತಗೊಳಿಸಬೇಕಾದರೆ ಅದು ಶಾಸನದ ಮೂಲಕ ಮಾತ್ರ ಸಾಧ್ಯ ಎಂಬ ತೀರ್ಮಾನಕ್ಕೆ ಮಾರ್ಕ್ಸ್ ಬಂದರು.

1886ರಲ್ಲಿ ಚಿಕಾಗೋದಲ್ಲಿ ಹೇಮಾರ್ಕೆಟ್ ಘಟನೆ ಅಮೆರಿಕಾದಲ್ಲಿ ಎಂಟು ಗಂಟೆಗಳ ಕೆಲಸದ ಆಂದೋಲನ ತುತ್ತತುದಿಗೇರಿದ್ದ ಸಂದರ್ಭದಲ್ಲಿ ನಡೆಯಿತು. ಕಾರ್ಮಿಕ ಮುಖಂಡರನ್ನು ಹೇಮಾರ್ಕೆಟ್ ಘಟನೆಯಲ್ಲಿ ಸುಳ್ಳು ಆರೋಪ ಹೊರಿಸಿ ಗಲ್ಲಿಗೇರಿಸಿದಾಗ ಅಮೆರಿಕನ್ ಪ್ರಭುತ್ವದ ವರ್ಗ ಸ್ವರೂಪ ಬಯಲಾಯಿತು. 'ಮಾನವ ಹಕ್ಕು'ಗಳನ್ನು ಜಗತ್ತಿಗೆ ಸಾರಿದ ಅಮೆರಿಕನ್ ಸರ್ಕಾರ ಅದೇ ಹಕ್ಕನ್ನು ದುಡಿಯುವ ಮಾನವನಿಗೆ ಕೊಟ್ಟು ಆತ ತನ್ನ ಅದೃಷ್ಟವನ್ನು ತಾನೇ ರೂಪಿಸಿಕೊಳ್ಳುವಂತೆ ಬಿಡಬಯಸಲಿಲ್ಲ.

ಮಾರ್ಕ್ಸ್‌ನ ನಂತರ ಈ ಆಂದೋಲನವನ್ನು ಮುಂದುವರೆಸಲು ಫ್ರೆಡರಿಕ್ ಎಂಗೆಲ್ಸ್ ನೆರವಾದರು. ಅವರು ಮೇ ದಿನ ಅಂತರ್ರಾಷ್ಟ್ರೀಯ ದುಡಿಯುವ ಜನರ ಸೌಹಾರ್ದದಿನ ಎಂಬ ಪರಿಕಲ್ಪನೆಗೆ ಸಾಂಸ್ಥಿಕ ಸ್ವರೂಪ ನೀಡಿದರು.

ಕ್ರಾಂತಿಕಾರಿ ಪರಂಪರೆ

ಮೇ ದಿನದ ಕ್ರಾಂತಿಕಾರಿ ಪರಂಪರೆಯನ್ನು ನಿರ್ಮಿಸಿದ ಖ್ಯಾತಿ ಲೆನಿನ್‌ರಿಗೆ ಸಲ್ಲಬೇಕು. ರೋಸ್ತೋವ್ ನಗರದಲ್ಲಿ ಅವರು ಸಮಸ್ತ ಕಾರ್ಮಿಕರ ಒಂದು ಬೇಡಿಕೆಯನ್ನು ಮುಂದಿಡುವಂತೆ ಕಾರ್ಮಿಕವರ್ಗಕ್ಕೆ ಪ್ರೋತ್ಸಾಹ ನೀಡಿದರು. ಈ ಬೇಡಿಕೆ ರೋಸ್ತೋವ್‌ನ ಎಲ್ಲಾ ಕಾರ್ಮಿಕರ ಸಾಮಾನ್ಯ ಹಿತಾಸಕ್ತಿಯನ್ನು ಒಳಗೊಂಡಿತ್ತು. ನಂತರ ಅವರು ಆ ವರ್ಷ ಮೇ ದಿನದಂದು ಒಂದು ಮುಷ್ಕರ ಸಂಘಟಿಸಲು ಕರೆ ನೀಡಿದರು. ಬಂಡವಾಳಶಾಹಿಗಳು ತಮ್ಮ ಧಾಳಿಯನ್ನು ಆರಂಭಿಸಿದರು. ಹಲವಾರು ಕಾರ್ಖಾನೆಗಳಲ್ಲಿ ಮುಖಂಡರು ಮತ್ತು ಸಕ್ರಿಯ

ಪುಟ 8



ಮೇ ದಿನ 2004 ವಿಶ್ವಾದ್ಯಂತ ಒಂದು ಏಕೀಕೃತ ಕರೆ ನೀಡಿದೆ - "ನಮಗೆ ಎಲ್ಲರಿಗೂ ಕೆಲಸ ಬ... ಬದುಕು ಬೇಕು", ಇವುಗಳನ್ನು ನವ ಉದಾರವಾದ ಇದನ್ನೆಂದೂ ಒದಗಿಸದು. ಆದ್ದರಿಂದ... ಸಮಾಜವಾದಿ ಜಗತ್ತೇ ಆಗಿದೆ. ಈ ಇನ್ನೊಂದು ಜಗತ್ತನ್ನು ಸಾಧಿಸಲು ಸಾಧ್ಯವಿದೆ ಎಂಬ ವಿ... 2004ರ ಮೇ ದಿನ ಪ್ರಣಾಳಿಕೆ ಕಳೆದ ಮೇ ದಿನದಿಂದ ಒಂದು ವರ್ಷದ ಬೆಳವಣಿಗೆಗಳ... ಪ್ರವೃತ್ತಿಗಳನ್ನು ಗುರುತಿಸಿದೆ. ಇವುಗಳ ವಿಶ್ಲೇಷಣೆ ಮಾಡುತ್ತಾ ಈಗ ಅತ್ಯಗತ್ಯವಾಗಿರುವ ಎಲ್ಲರಿ... ಗೌರವಪೂರ್ಣ ಬದುಕನ್ನು 'ಇನ್ನೊಂದು ಜಗತ್ತಿ'ನಲ್ಲಿ ಪಡೆಯಲು ಈ ದಿನ...

ಸುಭದ್ರ ಕೆಲಸ ಮತ್ತು ಗೌರವಪೂ...
'ಇನ್ನೊಂದು ಜಗತ್ತು' ಪಡೆ...

ಸಿಐಟಿಯು ಮೇ ದಿನ 2004ರಂದು ವಿಶ್ವಾದ್ಯಂತ ಕಾರ್ಮಿಕವರ್ಗಕ್ಕೆ ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತದೆ.

ಸಿಐಟಿಯು ಸಮಾಜವಾದಿ ದೇಶಗಳಾದ ಚೀಣಾ, ಕ್ಯೂಬಾ, ವಿಯೆಟ್ನಾಂ, ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯದ ಕಾರ್ಮಿಕ ವರ್ಗ ಮತ್ತು ಜನತೆಗೆ ಅವರು ಸಾಮ್ರಾಜ್ಯಶಾಹಿ ಧಾಳಿಗಳನ್ನು, ಬುಡಮೇಲು ಕೃತ್ಯಗಳನ್ನು, ದಿಗ್ಬಂಧನಗಳನ್ನು ಎದುರಿಸಿ ಸಮಾಜವಾದವನ್ನು ಎತ್ತಿಹಿಡಿದಿರುವುದಕ್ಕಾಗಿ ಶುಭಾಶಯಗಳನ್ನು ಕೋರುತ್ತದೆ.

ಸಿಐಟಿಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕಾರ್ಮಿಕವರ್ಗಕ್ಕೆ ಅದು ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತೆಯ ಮೇಲೆ ಸಾಮ್ರಾಜ್ಯಶಾಹಿ ಧಾಳಿಗಳ ವಿರುದ್ಧ ಹಾಗೂ ಶ್ರಮಜೀವಿ ವರ್ಗಗಳ ಮೇಲೆ ಆಳುವ ವರ್ಗಗಳ ಧಾಳಿಗಳ ವಿರುದ್ಧ ಹೋರಾಡುತ್ತಾ ನಡೆಸಿರುವ ಸರ್ವರನ್ನೊಳಗೊಂಡ ಹೋರಾಟಗಳಿಗಾಗಿ ಶುಭಾಶಯ ಕೋರುತ್ತದೆ.

ಸಿಐಟಿಯು ಭಾರತದ ಕಾರ್ಮಿಕವರ್ಗ, ಶ್ರಮಜೀವಿ ಜನತೆ ಮತ್ತು ಪ್ರಜಾಪ್ರಭುತ್ವವಾದಿ ಜನಸಮೂಹಗಳು ಸರ್ಕಾರದ ಪ್ರತಿಗಾಮಿ ಆರ್ಥಿಕ ನೀತಿಗಳು, ನ್ಯಾಯಾಂಗವೂ ಸೇರಿದಂತೆ ಪ್ರಭುತ್ವದ ಎಲ್ಲಾ ಅಂಗಗಳು ನಮ್ಮ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಸಿರುವ ಧಾಳಿಗಳ ವಿರುದ್ಧ ಪ್ರತಿರೋಧದ ಆಂದೋಲನಗಳ ಮಾದರಿಯನ್ನು ದಾಖಲು ಮಾಡಿದ್ದಕ್ಕಾಗಿ ಅವರಿಗೆಲ್ಲಾ ವಿಶೇಷವಾಗಿ ಶುಭಾಶಯ ಕೋರುತ್ತದೆ. ಮೇಲಿನಿಂದಲ್ಲದೆ, ಕೆಳಗಿನಿಂದಲೇ ಐಕ್ಯತೆ ಬೆಳೆಯುತ್ತಿರುವ ತೀವ್ರತರವಾದ ಸಾಮೂಹಿಕ ಆಂದೋಲನಗಳ ಒಂದು ಹೊಸ ಯುಗ ಆರಂಭವಾಗಿದೆ.


◆ ◆ ◆ ◆ ◆

ಕಳೆದ ಮೇ ದಿನದ ನಂತರದ ಒಂದು ವರ್ಷ ಎರಡು ವಿಭಿನ್ನ ಪ್ರವೃತ್ತಿಗಳನ್ನು ಕಂಡಿದೆ. ಇದನ್ನು ನಾವು ಗಮನಿಸಲೇ ಬೇಕು. ಒಂದು, ಜನಗಳ ವಿರುದ್ಧ, ನಿರ್ದಿಷ್ಟವಾಗಿ ಕಾರ್ಮಿಕ ವರ್ಗದ ವಿರುದ್ಧ, ಅವರ ದೇಶಗಳ ವಿರುದ್ಧ, ಅವರ ಜೀವ ಮತ್ತು ಬದುಕಿನ ವಿರುದ್ಧ ಸುಮಾರಾಗಿ ಪ್ರತಿಯೊಂದು ಕಡೆ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಮತ್ತು ಬಂಡವಾಳಶಾಹೀ ವರ್ಗಗಳಿಂದ ಧಾಳಿಗಳು ಹಲವು ಪಟ್ಟು ತೀವ್ರಗೊಂಡಿವೆ. ಇನ್ನೊಂದು, ಒಂದು ಸಕಾರಾತ್ಮಕ ಬೆಳವಣಿಗೆಯಾಗಿ, ಜನಗಳ ಪ್ರತಿರೋಧ, ವಿಶ್ವದಾದ್ಯಂತ ಹೆಚ್ಚುತ್ತಲೇ ಇದೆ. ಮತಿ ಹೀನ ಜಾಗತೀಕರಣ ಮತ್ತು ಸಾಮ್ರಾಜ್ಯಶಾಹಿ ಅತಿಕ್ರಮಣದ ಬಗ್ಗೆ ಅಸಮ್ಮತಿ ಹೆಚ್ಚೆಚ್ಚು ಗಟ್ಟಿಯಾಗಿ ಕೇಳಬರುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೂ ರಾಜಕೀಯ ಮತ್ತು ಆರ್ಥಿಕ ಜೀವನದ ಮೇಲೆ ಒಂದು ಆಳವಾದ ಗಂಭೀರ ಪ್ರಭಾವ ಬೀರುತ್ತಿದೆ.



ತ್ಯಾಗಬಲಿದಾನದ ಕ್ರಾಂತಿಕಾರಿ ವೀರಪರಂಪರೆಯನ್ನೂ ಎತ್ತಿ ಹಿಡಿದು ಮುನ್ನಡೆ...

ಇರಾಕಿನಲ್ಲಿ ವಿಶ್ವ ಜನಾಭಿಪ್ರಾಯವನ್ನು, ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮತ್ತು ಸೂಕ್ತತೆಯನ್ನು ಉಲ್ಲಂಘಿಸಿ ನಡೆದ ನಗ್ನ ಆಕ್ರಮಣ ಸಂಪೂರ್ಣವಾಗಿ ಸುಳ್ಳುಗಳು ಮತ್ತು ತಪ್ಪು ಮಾಹಿತಿಗಳ ಮೇಲೆ ನಿಂತಿತ್ತು ಎಂಬುದೀಗ ಸಂಶಯಕ್ಕೆಡೆಯಿಲ್ಲದಂತೆ ಸಾಬೀತಾಗಿದೆ. ಸ್ವಯಂ ನೇಮಿತ ಜಾಗತಿಕ ಮುಖಂಡರು ಈಗ ಬಟ್ಟ ಬಯಲಾಗಿದ್ದಾರೆ. ಏಕೆಂದರೆ ಅತಿಕ್ರಮಣದ ಒಂದು ವರ್ಷದ ನಂತರವೂ ಸಾಮೂಹಿಕ ವಿನಾಶದ ಅಸ್ತ್ರಗಳು ಸಿಕ್ಕಿಲ್ಲ ಅಥವಾ ಭಯೋತ್ಪಾದಕರೊಂದಿಗೆ ಸಂಪರ್ಕವಿತ್ತೆಂದು ಸಾಬೀತು ಪಡಿಸಲಾಗಿಲ್ಲ. ಕೇವಲ ತೈಲದಾಹಕ್ಕಾಗಿ ಸಾವಿರಾರು ಮುಗ್ಧ ಗಂಡಸರು, ಹೆಂಗಸರು ಮತ್ತು ಮಕ್ಕಳು ಪ್ರಾಣ ಕಳೆದುಕೊಂಡರು; ಆ ದೇಶ ಧ್ವಂಸಗೊಂಡಿತು. ಬದುಕುಳಿದವರು ಸಂಪೂರ್ಣ ಅರಾಜಕತೆ, ಹೇಳತೀರದ ಸಂಕಟ, ಕಷ್ಟನಷ್ಟಗಳಿಂದ ಬದುಕುತ್ತಿದ್ದಾರೆ. "ಭಯೋತ್ಪಾದಕತೆಯ ವಿರುದ್ಧ ಯುದ್ಧ"ದ ಕುರಿತ ಸತ್ಯ ಈ ಯುದ್ಧವನ್ನು ಪ್ರತಿಪಾದಿಸಿದ ಕೂಟದೊಳಗಿಂದಲೇ ಹೊರಬರುತ್ತಿದೆ. ಜಾರ್ಜ್ ಡಬ್ಲ್ಯು ಬುಷ್ ತನ್ನ ಯುದ್ಧ ಯಂತ್ರಗಳನ್ನು ಹೊರತರಲು, ತನ್ನ ಉನ್ನತ ಮಿಲಿಟರಿ ಶಕ್ತಿಯಿಂದ ವಿಶ್ವವನ್ನು ಅಡಿಯಾಳಾಗಿಸುವ ತನ್ನ ವೈಭವೋಪೇತ ಯೋಜನೆಯನ್ನು ಜಾರಿಗೆ ತರಲು ಸೆಪ್ಟೆಂಬರ್ 11 ಸಂಭವಿಸಲು ಕಾಯುತ್ತಿದ್ದರಷ್ಟೇ ಎಂಬುದೀಗ ಸ್ಪಷ್ಟವಾಗಿದೆ. ಅಫ್ಘಾನಿಸ್ತಾನ್, ಇರಾಕಿನ ನಂತರ ಇರಾನ್ ಮತ್ತು ಉತ್ತರ ಕೊರಿಯಾ ತಮ್ಮ ಗುರಿ ಎಂಬುದನ್ನು ಎಂದೂ ಮರೆಮಾಚಿಲ್ಲ. ಇದಲ್ಲದೆ ವಿಶ್ವ ಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿ, ವಿಶ್ವವ್ಯಾಪಿ ಪ್ರತಿಭಟನೆಗಳನ್ನು ಹಾಗೂ ಖಂಡನೆಗಳನ್ನು ನಿರ್ಲಕ್ಷಿಸಿ ಇಸ್ರೇಲಿ ಪಡೆಗಳು ಪ್ಯಾಲೆಸ್ಟೀನ್ ಜನತೆಯ ಮೇಲೆ ಅಮೆರಿಕನ್ ಆಡಳಿತದ ಸಕ್ರಿಯ ಬೆಂಬಲದಿಂದ ಸತತವಾಗಿ ನಡೆಸುತ್ತಿರುವ ಸಾಮೂಹಿಕ ಹತ್ಯಾಕಾಂಡ ಮತ್ತು ಧ್ವಂಸ ಕಾರ್ಯ ಕೂಡಾ ಅವ್ಯಾಹತವಾಗಿ ನಡೆದಿದೆ.



ದುರಂತವೆಂದರೆ ಹೆಚ್ಚಿನ ರಾಷ್ಟ್ರೀಯ ಸರ್ಕಾರಗಳು ಈ ಅಂತರ್ರಾಷ್ಟ್ರೀಯ ಗೂಂಡಾಗಿರಿಯ ಮೂಕ ಪ್ರೇಕ್ಷಕರಾಗಿಯೇ ಉಳಿದಿದ್ದಾರೆ. ಕೆಲವು ಸರ್ಕಾರಗಳು ಕೆಲವು ನಿಷ್ಪ್ರಯೋಜಕ ಸದ್ದುಗಳನ್ನು ಮಾಡಿವೆ. ಭಾರತದಲ್ಲಿ ಕಂಪನಿವಲಯದ ಮುಖಂಡತ್ವ ಮತ್ತು ಎನ್‌ಡಿಎ ಸರ್ಕಾರ ಈ ಅಪರಾದಕ್ಕೆ ಒಪ್ಪಿಗೆ ನೀಡಿದ್ದಷ್ಟೇ ಅಲ್ಲ, ಗಾಡ್‌ಫಾದರ್ ಅಮೆರಿಕಾ ಇರಾಕಿನ ಪುನರ್‌ನಿರ್ಮಾಣದ ಕಾಂಟ್ರಾಕ್ಟುಗಳ ಹೆಸರಲ್ಲಿ ತಮಗೂ ಕೆಲವು ತುಣುಕುಗಳನ್ನು ಎಸೆಯಬಹುದು ಎಂದು ಜೊಲ್ಲು ಸುರಿಸಿಕೊಂಡಿದ್ದಾರೆ.

ಆದರೆ ವಿಶ್ವಾದ್ಯಂತ ಜನಗಳನ್ನು ಈ ಎಲ್ಲಾ ಅಬ್ಬರದ ಮತ್ತು ಖೋಟಾ ಪ್ರಚಾರದಿಂದ ಮರುಳು ಮಾಡಲಾಗಿಲ್ಲ. ಇರಾಕಿನ ವಿರುದ್ಧ ಆಕ್ರಮಣದ ಕ್ರಿಮಿನಲ್ ಕೃತ್ಯದ ಬಗ್ಗೆ ಇಂತಹ ಸಮಾನಾಭಿಪ್ರಾಯ ವಿಶ್ವದ ಉದ್ದಗಲದಲ್ಲಿ ಹಿಂದೆಂದೂ ಕಂಡು ಬಂದಿರಲಿಲ್ಲ. ಬಹಳ ಮುಖ್ಯವೆಂದರೆ, ಬಹುಶಃ ಮೊದಲ ಬಾರಿಗೆ, ಜನತೆ ತಮ್ಮ ಅಭಿಮತವನ್ನು ಎತ್ತಿ ಹೇಳಲಾರಂಭಿಸಿದ್ದಾರೆ. ಸಂಕುಚಿತವಾದದಿಂದ ಮೇಲೆದ್ದು ಬಂದಿದ್ದಾರೆ. ಗೂಂಡಾಗಳ ಮೈತ್ರಿಕೂಟವನ್ನು ಸೇರಿಕೊಂಡ ರಾಷ್ಟ್ರೀಯ ಸರ್ಕಾರಗಳಲ್ಲಿನ ರಾಜಕೀಯ ಕೂಟಗಳನ್ನು ಸೋಲಿಸಿದ್ದಾರೆ. ಈ ಅಪರಾದದಲ್ಲಿ ಭಾಗಿಗಳಾಗಲು ಜನತೆ ನಿರಾಕರಿಸುತ್ತಿದ್ದಾರೆ. ಸ್ಪೇನಿನಲ್ಲಿ ಆರಂಭವಾದ ಪ್ರವೃತ್ತಿ ನಮ್ಮ ಮುಂದಿನ 2005ರ ಮೇ ದಿನದ ಮೊದಲು ಬುಶ್, ಬ್ಲೇರ್, ಹೊವರ್ಡ್‌ಗಳಂತಹ ದೊಡ್ಡ ಬಂದೂಕಗಳನ್ನು ಮೌನವಾಗಿಸಬಹುದು. "ನೀವು ಸುಳ್ಳುಗಳ ಮೇಲೆ ಒಂದು ಯುದ್ಧ ಆರಂಭಿಸಲು ಸಾಧ್ಯವಿಲ್ಲ" ಎಂದು ಝಪಾತೆರೋ ಸಾರಿದ್ದಾರೆ. ಇದು ಬುಶ್, ಬ್ಲೇರ್, ಅಜ್ನಾರ್‌ಗಳು ಸುಳ್ಳುಗಾರರು ಎಂಬ ಮುಚ್ಚುಮರೆಯಿಲ್ಲದ ಆರೋಪ. ಇದು ಸ್ಪೇನಿನ ಜನತೆಯ, ವಿಶ್ವದ ಜನತೆಯ ದನಿ. ಅಮೆರಿಕಾ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದ ಕಾರ್ಮಿಕವರ್ಗ ಮತ್ತು ಜನತೆ ಕೂಡಾ ಇದುವರೆಗೆ ಜಗತ್ತು ತಾವು ಹೇಳಿದ್ದಕ್ಕೆಲ್ಲಾ ತಲೆಯಾಡಿಸುತ್ತದೆಂದು ಭಾವಿಸಿರುವ ಅವರ ಆಳುವ ವರ್ಗಗಳಿಗೆ ಇಂತಹುದೇ ಪ್ರತ್ಯುತ್ತರ ನೀಡುತ್ತಾರೆ ಎಂದು ಸಿಐಟಿಯು ನಿರೀಕ್ಷಿಸುತ್ತದೆ.

◆ ◆ ◆ ◆ ◆

ಆರ್ಥಿಕ ರಂಗದಲ್ಲಿ ಕೂಡಾ ನವ ಉದಾರೀಕರಣವಾದಿ ಜಾಗತೀಕರಣ ಜನತೆಗೆ ಕನಿಷ್ಟ ಪರಿಹಾರ ನೀಡುವಲ್ಲಿಯೂ ವಿಫಲವಾಗಿದೆ. ಜನತೆ ಸಿಡಿಮಿಡಿಕೊಳ್ಳುತ್ತಿದ್ದಾರೆ, ತಮ್ಮ ಪ್ರತಿಭಟನೆಯ ದನಿಗಳನ್ನು ಎತ್ತುತ್ತಿದ್ದಾರೆ. ಏಕೆಂದರೆ ಈ ಬ್ರಾಂಡಿನ ಜಾಗತೀಕರಣ ಅವರ ಬದುಕಿನಲ್ಲಿ ಕಷ್ಟ-ಸಂಕಟಗಳನ್ನೇ ತಂದಿದೆ. ನವ ಉದಾರೀಕರಣವಾದಿ ಜಾಗತೀಕರಣದ ಪರವಾಗಿ ನಿಲ್ಲುವವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಅಮೆರಿಕನ್ ಸರ್ಕಾರದ ನೇತೃತ್ವದಲ್ಲಿ ಅಂತರ್ರಾಷ್ಟ್ರೀಯ ಕಂಪನಿ ವಲಯದ ದೈತ್ಯರು ಮತ್ತು ಅವರ ಬಾಲಬಡುಕರು ಇಡೀ ವಿಶ್ವದ ಆರ್ಥಿಕದ ಮೇಲೆ ತಮ್ಮ ಪ್ರಯೋಜನಕ್ಕಾಗಿ ಪ್ರಾಬಲ್ಯ ಹೆಚ್ಚಿಸುವತ್ತ ಆಕ್ರಮಣಕಾರಿಯಾಗುತ್ತಿದ್ದಾರೆ, ಹಿಂಸಾಚಾರಿಗಳಾಗುತ್ತಿದ್ದಾರೆ. **ನವ-ಉದಾರವಾದಿ ಸಾಮ್ರಾಜ್ಯಶಾಹಿ ಜಾಗತೀಕರಣದ ಮೂಲತಃ ಜನವಿರೋಧಿ ಎಂದು ಸಿಐಟಿಯು ಸದಾ ಹೇಳಿಕೊಂಡು ಬಂದಿದೆ. ಆ ಸತ್ಯ ಹಿಂದೆಂದಿಗಿಂತಲೂ ಹೆಚ್ಚು ಪ್ರಖರವಾಗಿ ಈಗ ಕಾಣುತ್ತಿದೆ.**

ಆದುದರಿಂದಲೇ ಜಾಗತೀಕರಣಕ್ಕೆ ಜನತೆಯ ಪ್ರತಿರೋಧದ ಮತ್ತೊಂದು ಪ್ರವೃತ್ತಿಯೂ ದಿನೇ ದಿನೇ ಬಲಿಷ್ಠಗೊಳ್ಳುತ್ತಿದೆ. ಅಮೆರಿಕಾವೂ ಸೇರಿದಂತೆ ಒಂದಾದ ಮೇಲೊಂದರಂತೆ ಹಲವು ರಾಷ್ಟ್ರಗಳಲ್ಲಿ ಜನತೆ ಬಂಡೇಳುತ್ತಿದ್ದಾರೆ, ಏಕೆಂದರೆ ಅವರ ಉದ್ಯೋಗಗಳು ಮಾಯವಾಗುತ್ತಿವೆ, ಜೀವನ ಮಟ್ಟ ಇಳಿಯುತ್ತಿದೆ, ಅಪರಾಧಗಳು, ಆತ್ಮಹತ್ಯೆಗಳು ಹೆಚ್ಚುತ್ತಿವೆ ಮತ್ತು ಸಾಮಾಜಿಕ ಅಸಂತೃಪ್ತಿ ಹೆಚ್ಚುತ್ತಿದೆ. ಕಳೆದ ಐದಾರು ವರ್ಷಗಳಲ್ಲಿ ಜನತೆ ಹಲವು ದೇಶಗಳಲ್ಲಿ, ಹಲವು ರೀತಿಗಳಲ್ಲಿ ನವಉದಾರವಾದಿ ಜಾಗತೀಕರಣದ ವಿರುದ್ಧ ತಮ್ಮ ತೀರ್ಪು ನೀಡುತ್ತಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಡಬ್ಲ್ಯುಟಿಓದ ಕಾನ್ಕುನ್ ಮಂತ್ರಿಮಟ್ಟದ ಸಭೆಯ ವಿಫಲತೆ, ಡಬ್ಲ್ಯುಟಿಓ ವೇದಿಕೆಯ ಒಳಗೆ ಮತ್ತು ಹೊರಗೆ ನಡೆದ ಘಟನೆಗಳು, ಡಬ್ಲ್ಯುಟಿಓ ವ್ಯವಸ್ಥೆಯಲ್ಲೇ ಅಡಕವಾಗಿರುವ ವಿಶ್ವ ಗುತ್ತೇದಾರಿ ಬಂಡವಾಳದ ಹುಚ್ಚು ತಂತ್ರಗಾರಿಕೆ ಮತ್ತು ಪಕ್ಷಪಾತದ ವ್ಯವಸ್ಥೆಯ ಮುಂದೆ, ಮೊಣಕಾಲೂರದ ಜನತೆಯ ದೃಢ ನಿರ್ಧಾರವನ್ನು ತೋರಿವೆ. ಇಂತಹ ವ್ಯಾಪಕವಾದ ಜನತೆಯ ಕ್ರೋಧದ ಅಭಿವ್ಯಕ್ತಿಯಿಂದಲೇ ಕ್ಯಾನ್ಕುನ್ ಡಬ್ಲ್ಯುಟಿಓ ಸಭೆಯಲ್ಲಿ ಬ್ರೆಝಿಲ್, ದಕ್ಷಿಣ



ಲ್ಲರಿಗೂ ಒಂದು ಗೌರವ ಪೂರ್ಣ
ದು ಜಗತ್ತಿನ ಘೋಷಣೆ. ಅದು
ದೆ ಎಂದು ಸಾರುವ ಸಿಐಟಿಯು
ೀಕನ ಮಾಡುತ್ತಾ ಎರಡು ಸ್ಪಷ್ಟ
ಸುಭದ್ರ ಕೆಲಸ ಮತ್ತು ಎಲ್ಲರಿಗೂ
ತಿಜ್ಞಗೈಯಬೇಕು ಎಂದಿದೆ.

ಬದುಕಿಗಾಗಿ

...ಲು ಪಣ

ಮತ್ತು ಚೀಣಾದ ನೇತೃತ್ವದ ಅಭಿವೃದ್ಧಿಶೀಲ
ಒಂದು ಗುಂಪು ಕಟ್ಟಿ ಬೆಳೆಸಿದ ತಡೆಯು
ತೆಯಿತು.

**...ಟೀನ್ ಅಮೆರಿಕಾ, ಏಷ್ಯಾ ಮತ್ತು
...ೋಪ್‌ನ ಹಲವು ದೇಶಗಳಲ್ಲಿ ನವ
...ರವಾದೀ ಜಾಗತೀಕರಣವನ್ನು ತಂದ
ಸರ್ಕಾರಗಳನ್ನು ತಿಪ್ಪೆಗೆಸೆದಿರುವುದನ್ನು
...ಡಿದ್ದೇವೆ.** ವೆನೆಜುವೆಲಾ, ಬ್ರೆಝಿಲ್,
...ೇರ್ ಮತ್ತು ಇತ್ತೀಚೆಗೆ ಸ್ಪೇನ್‌ನಲ್ಲಿ ಆಡಳಿತ
...ವಣೆ ಇದಕ್ಕೆ ಉದಾಹರಣೆಗಳು. ಆದರೆ
...ರದಿಂದಲೂ ನೀತಿಗಳನ್ನು ಮೂಲಭೂತವಾಗಿ
...ಿಸಲಾಗಿಲ್ಲ. ಅವುಗಳ ದಿಕ್ಕನ್ನು
...ಸಲಾಗಿಲ್ಲ. ಇಂತಹ ಬೆಳವಣಿಗೆಗಳು
...ವಕುಲಗಳ ಮೂಲಭೂತ ಸಮಸ್ಯೆಗಳನ್ನು
...ರಿಸುವಲ್ಲಿ ಕೂಡಾ ಬಂಡವಾಳಶಾಹಿ
...ಯ ಅಸಮರ್ಥತೆಯನ್ನು, ಅದಕ್ಕಿಂತ ಹೆಚ್ಚಾಗಿ
...ಿಕೋರತನವನ್ನು ಕ್ರಮೇಣ ಮುಂಚೂಣಿಗೆ
...ವೆ. ಈ ಹಿನ್ನೆಲೆಯಲ್ಲಿಯೇ 'ವಿಶ್ವ ಸಾಮಾಜಿಕ
...ೆ'ಯ ಮೂರು ಸಮ್ಮೇಳನಗಳಲ್ಲಿ ಸತತವಾಗಿ
'ಇನ್ನೊಂದು ವಿಶ್ವ ಸಾಧ್ಯವಿದೆ' ಎಂಬ
...ಷಣೆಯ ಜನಪ್ರಿಯತೆ ಬಂಡವಾಳಶಾಹಿ
...ಯ ದುಷ್ಟ ಅಮಾನವೀಯ ಮುಖಕ್ಕೆ ಒಂದು
...ರ್ಯಯ ವನ್ನು ಕಂಡು ಹಿಡಿಯುವ
...ಕಾಟದ ಆರಂಭವನ್ನು ಸಂಕೇತಿಸುತ್ತದೆ.
...ರಿ 2004ರಲ್ಲಿ ಮುಂಬೈನಲ್ಲಿ ನಡೆದ ವಿಶ್ವ
...ಾಜಿಕ ವೇದಿಕೆ ಈ ಹೋರಾಟವನ್ನು ಇನ್ನಷ್ಟು
...ರ್ಧಾರದಿಂದ ಮುಂದೊಯ್ಯುವ ಗಟ್ಟಿಯಾದ
...ಷಣೆಯನ್ನು ಮಾಡಿದೆ.

...ನಗಳ ಹಕ್ಕುಗಳು ಮತ್ತು ಕೆಲಸಗಳನ್ನು
...ತ್ರವಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಗಳನ್ನು
...ಮೇಲು ಮಾಡಲು ಧಾಳಿಗಳನ್ನು
...ಗೊಳಿಸಲಾಗುವುದು ಎಂಬ ಶಂಕೆ
...ಯುವಿಗಿದೆ. ವಿಶ್ವ ಗುತ್ತೇದಾರಿ ಬಂಡವಾಳ
...ುದೇ ಬೆಳವಣಿಗೆಯಿಲ್ಲದ, ಜನಗಳಿಗೆ ಕೆಲಸ
...ಾ ಆದಾಯದ ಬೆಳವಣಿಗೆ ಇಲ್ಲದ ಮತ್ತು
...ನ ಸ್ಥಳಗಳಲ್ಲಿ ಗುತ್ತೇದಾರಿ-ಪರ ಮತ್ತು
...ೀಯವಾದಿ-ಪರ ಪರಸ್ಪರ ವಿರೋಧಿ ಶಕ್ತಿಗಳು
...ಸ್ಥೆಯನ್ನು ಚಿಂದಿ ಮಾಡಿ ಅರಾಜಕತೆ
...ಸುವುದರಿಂದಾಗಿ ರಾಜಕೀಯ ಸ್ಥಿರತೆಯೂ
...ಒಂದು ಬಗೆಹರಿಯಲಾರದ ಪರಿಸ್ಥಿತಿಯತ್ತ
...ದೆ. ಲಕ್ಷಣಗಳು ಆಗಲೇ ಇವೆ. **ಕಾರ್ಮಿಕ
...ದ ಆಂದೋಲನ ವಿಶ್ವಾದ್ಯಂತ ಮುನ್ನುಗ್ಗಿ
ಉದಾರವಾದಿ ಸಾಮ್ರಾಜ್ಯಶಾಹಿ
ಜಾಗತೀಕರಣದ ಎಲ್ಲಾ ಮುಖಗಳ ವಿರುದ್ಧ, ಆರ್ಥಿಕ ಮತ್ತು ರಾಜಕೀಯ ವೇದಿಕೆಗಳೆರಡರಲ್ಲೂ, ಅದರ ಎಲ್ಲಾ ಅಜೆಂಡಾಗಳ ವಿರುದ್ಧ ಪ್ರತಿರೋಧವನ್ನು ಎತ್ತರಿಸಬೇಕು, ಎಲ್ಲಾ ವಿಭಾಗಗಳಲ್ಲಿನ ಜನರನ್ನು ಜಾಗತೀಕರಣದ ವಿರುದ್ಧ ಒಂದು ಜಾಗತಿಕ ಐಕ್ಯತೆಗಾಗಿ ಅಣಿನೆರೆಸಬೇಕು ಹಾಗೂ ಬಂಡವಾಳಶಾಹಿಗೆ ಒಂದು ಸಮರ್ಥ ಪರ್ಯಾಯವಾಗಿರುವ ಸಮಾಜವಾದಕ್ಕಾಗಿ ಹೋರಾಡಲು ಹೆಚ್ಚಿನ ಪ್ರಜ್ಞಾಪೂರ್ವಕವಾಗಿ ಅಣಿನೆರೆಸಲು ಮುಂದಾಗಬೇಕು.**

♦ ♦ ♦ ♦ ♦

ದೇಶದೊಳಗೆ ಕೂಡಾ ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿನ ಬೆಳವಣಿಗೆಗಳು ಅಂತರ್ರಾಷ್ಟ್ರೀಯ ರಂಗದಲ್ಲಿನ ಪ್ರವೃತ್ತಿಗಳ ರೀತಿಯಲ್ಲೇ ಇವೆ. ಭಾರತದಲ್ಲಿ ಶ್ರಮಜೀವಿ ಜನತೆ ತಮ್ಮ ಹಕ್ಕುಗಳು, ಜೀವ ಮತ್ತು ಬದುಕಿನ ಮೇಲೆ ಅಮಾನುಷ ಧಾಳಿಗಳನ್ನು ಎದುರಿಸುತ್ತಾ ಬಂದಿದೆ. ಆಳುವ ರಾಜಕಾರಣಗಳು ಮತ್ತು ಮಾಲೀಕರ ವರ್ಗ ಕೂಟ- ವಿಶ್ವ ಹಣಕಾಸು ಬಂಡವಾಳ ಮತ್ತು ಭಾರತೀಯ ಗುತ್ತೇದಾರಿ ಬಂಡವಾಳದ ಹಿತಾಸಕ್ತಿಗಾಗಿ ಹಾಗೂ ಅವುಗಳ ಆದೇಶದಂತೆ ನವಉದಾರವಾದಿ ಆರ್ಥಿಕ ನೀತಿಗಳನ್ನು ಉಗ್ರ ರೀತಿಯಲ್ಲಿ ಅನುಸರಿಸುತ್ತಿದೆ. ದುರದೃಷ್ಟವೆಂದರೆ ದೇಶದ ಪ್ರಮುಖ ಪ್ರತಿಪಕ್ಷವೂ ಹೆಚ್ಚಿನ ವಿಷಯಗಳ ಮೇಲೆ ಅದೇ ಆರ್ಥಿಕ ನೀತಿ ವ್ಯವಸ್ಥೆಯನ್ನು ಬೆಂಬಲಿಸುತ್ತಿದೆ. ಅದೇ ವೇಳೆಗೆ, ಜನಗಳ ಅಸಂತೃಪ್ತಿಯ ದಾರಿತಪ್ಪಿಸಲು ಮತ್ತು ಜನ-ವಿರೋಧಿ ಆರ್ಥಿಕ ಆಳ್ವಿಕೆಯ ವಿರುದ್ಧ ಐಕ್ಯ ಪ್ರತಿರೋಧವನ್ನು ದುರ್ಬಲಗೊಳಿಸಲು ಬಿಜೆಪಿ ನೇತೃತ್ವದ ಆಳುವ ರಾಜಕೀಯ ಕೂಟ ಜನಗಳ ಐಕ್ಯತೆಯನ್ನು ಒಡೆದು, ಅಸ್ತವ್ಯಸ್ತಗೊಳಿಸಲು ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸ ಹೊರಟಿದೆ. ಆದರೆ ಕಾರ್ಮಿಕವರ್ಗದ ಐಕ್ಯ ಮತ್ತು ಸಂಘಟಿತ ದನಿ ಈ ಜನವಿರೋಧಿ ವ್ಯವಸ್ಥೆಗೆ ವಿರೋಧದ ದನಿಯನ್ನು ದೇಶಾದ್ಯಂತ ಇನ್ನಷ್ಟು ಗಟ್ಟಿಯಾಗಿ ಕೇಳುವಂತೆ ಮಾಡಿದೆ. ನಾಲ್ಕೋ ಕಾರ್ಮಿಕರು ಖಾಸಗೀಕರಣದ ವಿರುದ್ಧ ಎಲ್ಲಾ ವಿಭಾಗಗಳ ಜನಗಳೊಂದಿಗೆ ಸೇರಿ ನಡೆಸಿದ ದೃಢ ಹೋರಾಟ ಖಾಸಗೀಕರಣವನ್ನು ಕಾರ್ಮಿಕವರ್ಗದ ಐಕ್ಯ ಆಂದೋಲನದಿಂದ ನಿಲ್ಲಿಸಲು ಸಾಧ್ಯ ಎಂಬುದನ್ನು ಸಾಬೀತು ಮಾಡಿದೆ.

ಮೇ ದಿನ 2003ರ ನಂತರದ ಒಂದು ವರ್ಷದಲ್ಲಿ ದುಡಿಯುವ ಜನಗಳಿಂದ ಎರಡು ಬೃಹತ್ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳು ನಡೆದಿವೆ. ಒಂದು ಮೇ 21, 2003ರಂದು ಮತ್ತು ಇನ್ನೊಂದು ಫೆಬ್ರವರಿ 24, 2004ರಂದು. ಇವಲ್ಲದೆ ವಿವಿಧ ವಿಭಾಗಗಳ ಕಾರ್ಮಿಕರ ಹಲವಾರು ಹೋರಾಟಗಳು ನಡೆದಿವೆ. ಇವೆಲ್ಲಾ ಈ ಜನ-ವಿರೋಧಿ ನೀತಿಗಳ ವಿರುದ್ಧ, ಎಲ್ಲಾ ವಿಭಜನಕಾರೀ ತಂತ್ರಗಳನ್ನು ಸೋಲಿಸಿ, ಹೋರಾಟವನ್ನು ಮುಂದುವರೆಸುವ ದುಡಿಯುವ ಜನಗಳ ದೃಢ ನಿರ್ಧಾರವನ್ನು ಬಿಂಬಿಸುತ್ತವೆ. **ಸಿಐಟಿಯು ಈ ರಾಷ್ಟ್ರ-ವಿರೋಧಿ, ಜನ-ವಿರೋಧಿ ಆಳ್ವಿಕೆಗೆ ಸವಾಲು ಹಾಕುವಲ್ಲಿ ನೇತೃತ್ವದ ಪಾತ್ರವಹಿಸಿದ್ದಕ್ಕಾಗಿ ಕಾರ್ಮಿಕ ವರ್ಗವನ್ನು ಅಭಿನಂದಿಸುತ್ತದೆ.**

ವಾಜಪೇಯಿ ಸರ್ಕಾರ ನವಉದಾರವಾದಿ ಆರ್ಥಿಕ ನೀತಿಗಳನ್ನು ಅನುಸರಿಸುವ ಮೂಲಕ ದೇಶದ ಆರ್ಥಿಕವನ್ನು ವಿಪತ್ತು ಮತ್ತು ವಿನಾಶದ ದಾರಿಗೆ ತಳ್ಳಿದೆ. ಈ ಆರ್ಥಿಕ ನೀತಿಗಳು ಆರ್ಥಿಕದ ವಿಕೈಗಾರೀಕರಣ ನಡೆಸುತ್ತಿವೆ, ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ಒತ್ತೆಯಿಡುತ್ತಿವೆ. ಹೆಚ್ಚುತ್ತಿರುವ ಉದ್ಯೋಗ ಹೀನತೆ, ನಿರುದ್ಯೋಗ, ಬಡತನದ ಉಲ್ಬಣ, ವ್ಯಾಪಕವಾದ ಕೈಗಾರಿಕಾ ರೋಗಗ್ರಸ್ತತೆ, ಕ್ಲೋಶರ್‌ಗಳು, ಕಾಂಟ್ರಾಕ್ಟ್‌ಗಳು ಮತ್ತು ಖರೀದಿಗಳಲ್ಲಿ ಮುಗಿಯದ ಭ್ರಷ್ಟಾಚಾರ ಮತ್ತು ಅದಕ್ಕಿಂತಲೂ ದೊಡ್ಡದಾದ ಖಾಸಗೀಕರಣದ ಹಗರಣಗಳು ಬಿಜೆಪಿ ನೇತೃತ್ವದ ದುರಾಡಳಿತದ ಮುಖ್ಯಾಂಶಗಳು. ಸರ್ಕಾರದ 'ಹಿತಾನುಭವ', 'ಭಾರತ ಉದಯ' ಪ್ರಚಾರಗಳು ಇವನ್ನು ಮರೆ ಮಾಚಲು ಸಾಧ್ಯವಿಲ್ಲ. ಸುಳ್ಳು ಪ್ರಚಾರಗಳೇನೇ ಇದ್ದರೂ ಆರ್ಥಿಕದ ವಿನಾಶಕಾರಿ ಅವನತಿಯನ್ನು ದಬಾಯಿಸಿಡಲು ಸಾಧ್ಯವಿಲ್ಲ. ಆರ್ಥಿಕ ಬೆಳವಣಿಗೆ ದರ ಇಡೀ ಉದಾರೀಕರಣದ ಅವಧಿಯಲ್ಲಿ ಅದರ ಹಿಂದಿನ ಅವಧಿಗಿಂತ ಸತತವಾಗಿ ಇಳಿಮುಖವಾಗಿತ್ತು. ವಾಜಪೇಯಿ ಆಡಳಿತದ ಅವಧಿಯಲ್ಲಿ ಈ ನಿಧಾನಗತಿ ಇನ್ನಷ್ಟು ತೀವ್ರಗೊಂಡಿತು. ನಗರಗಳಲ್ಲೂ, ಹಳ್ಳಿಗಳಲ್ಲೂ ನಿರುದ್ಯೋಗ ವಿಪರೀತವಾಗಿ ಬೆಳೆಯಿತು. ಗೋದಾಮುಗಳು ತುಂಬಿದ್ದರೂ ಹಸಿವಿನಿಂದ ಸಾವುಗಳು, ಆತ್ಮಹತ್ಯೆಗಳು ಹೆಚ್ಚುತ್ತಿವೆ. ಹಿಂದೆಂದೂ ರೈತಾಪಿ ಜನ ಇಂದಿನಷ್ಟು ಅಪಾಯಕ್ಕೆ ಸಿಲುಕಿರಲಿಲ್ಲ, ದಿವಾಳಿ ಹೊಂದಿರಲಿಲ್ಲ. **ಬೆಳೆ ವಿಫಲವಾದಾಗಲೂ ಅವರು ಸಾಯುತ್ತಾರೆ, ಬಂಪರ್ ಬೆಳೆ ಬಂದು ಬೆಲೆಗಳು ಕುಸಿದಾಗಲೂ ಅವರು ಸಾಯುತ್ತಾರೆ. ಬ್ಯಾಂಕುಗಳಲ್ಲಿ ಹಣ ತುಂಬಿ ತುಳುಕುತ್ತಿದೆ. ಆದರೆ ಹಣ ಹೂಡಿಕೆದರ ಇಳಿಯುತ್ತಿದೆ. ಜೊತೆಗೆ ತೆರಿಗೆ-ವಂಚಕರು, ಮೋಸಗಾರರು, ವಂಚಕರು, ಕ್ರಿಮಿನಲ್‌ಗಳಿಗೆಲ್ಲಾ 'ಹಿತಾನುಭವ' ಆಗುತ್ತಿದೆ. ಅದನ್ನು ಒಂದು ಅಬ್ಬರದ ಪ್ರಚಾರದ ಮೂಲಕ ಭಾರತದ ಇತರರನ್ನು ನಂಬಿಸಲು ಪ್ರಯತ್ನಿಸುತ್ತಿದ್ದಾರೆ.**

ಇವೆಲ್ಲವುಗಳ ನಡುವೆ, ದುಡಿಯುವ ಜನತೆ ತಮ್ಮ ಹಕ್ಕುಗಳು ಮತ್ತು ಬದುಕಿನ ಮೇಲೆ ಅತ್ಯಂತ ದುಷ್ಟ ಆಕ್ರಮಣವನ್ನು ಎದುರಿಸುತ್ತಿದ್ದಾರೆ. ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡದೆ ಅಥವಾ ಉದಾರವಾಗಿ ರಿಯಾಯಿತಿ ನೀಡಿ ಕೇಂದ್ರದಲ್ಲಿರುವ



ಹಾಗೂ ಹೆಚ್ಚಿನ ರಾಜ್ಯಗಳ ಸರ್ಕಾರಗಳೇ ಮಾಲೀಕರಲ್ಲಿ 'ಸಮರಶೀಲತೆ'ಯನ್ನು ಪ್ರೋತ್ಸಾಹಿಸುತ್ತಿವೆ. ಜೊತೆಗೆ ಲಾಕೌಟ್‌ಗಳು, ಕ್ಲೋಶರ್‌ಗಳು, ಶಟ್‌ಡೌನ್‌ಗಳು ಮತ್ತು ಮಾಲಿಕರು ಕಾರ್ಮಿಕರಿಗೆ ಕೊಡಬೇಕಾದ ಪರಿಹಾರಗಳನ್ನು ನುಂಗಿ ಹಾಕುವ ಪ್ರವೃತ್ತಿ ವಿಪರೀತವಾಗಿ ಹೆಚ್ಚುತ್ತಿದೆ. ಇದು ಕಾರ್ಮಿಕ ಕಾನೂನುಗಳಲ್ಲಿ ತೀವ್ರ ಬದಲಾವಣೆಗಳಿಗೆ ಮತ್ತು ಶ್ರಮಜೀವಿಗಳ ಮೇಲೆ ಗುಲಾಮಿಕೆಯ ಪರಿಸ್ಥಿತಿಗಳನ್ನು ಹೇರುವುದಕ್ಕೆ ಆಧಾರ ಕಲ್ಪಿಸಿದೆ. ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಈಗಾಗಲೇ ಅದಕ್ಕೆ ನೀಲನಕ್ಷೆ ತಯಾರಿಸಿದೆ. ಕೆಲಸದ ಸ್ಥಳಗಳಲ್ಲಿ ಖಾಯಂ ಕೆಲಸದ ಪರಿಕಲ್ಪನೆಯನ್ನೇ ಮಾಯ ಮಾಡುವ ಕುತಂತ್ರದಿಂದ 'ನಿಗದಿತ ಅವಧಿ ಉದ್ಯೋಗ' ಎಂಬುದನ್ನು ಆರಂಭಿಸಿ ಈ ಬದಲಾವಣೆಯನ್ನು ಆಗಲೇ ಆರಂಭಿಸಲಾಗಿದೆ.

ಪ್ರಭುತ್ವ ಯಂತ್ರದ ಎಲ್ಲಾ ಅಂಗಗಳು, ನ್ಯಾಯಾಂಗ ಕೂಡಾ, ಕಾರ್ಮಿಕರ ಸಾಮೂಹಿಕವಾಗಿ ದನಿಯೆತ್ತುವ ಹಕ್ಕುಗಳ ಮೇಲೆ ಎರಗಲು ರೆಕ್ಕೆ ಬಿಚ್ಚಿವೆ. ತಮಿಳುನಾಡು ಸರ್ಕಾರ



ಶೋಷಣೆ,ದಬ್ಬಾಳಿಕೆಯ ವ್ಯವಸ್ಥೆಯ ಕುಟ್ಟಿ ಕೆಡಹುವೆವು

ತನ್ನ ನೌಕರರ ಬಗ್ಗೆ ಪ್ರದರ್ಶಿಸಿದ ಮೂರ್ಖ ಪ್ರತೀಕಾರ ಭಾವನೆ, ದೇಶದ ಸರ್ವೋಚ್ಚ ನ್ಯಾಯಾಲಯ 'ಮುಷ್ಕರದ ಹಕ್ಕಿ'ನ ಮೇಲೆ ನಿಷೇಧ ಹೇರಿದ್ದು ಮತ್ತು ವಾಜಪೇಯಿ ಸರ್ಕಾರ ಹಿಂದೆ ಮುಂದೆ ನೋಡದೆ ಈ ಎಲ್ಲಾ ದುಷ್ಕೃತ್ಯಗಳನ್ನು ಅನುಮೋದಿಸಿದ್ದು ಕಾರ್ಮಿಕರ ಸಂಘಟಿತ ಅಭಿವ್ಯಕ್ತಿಯ ಹಕ್ಕಿನ ಬಗ್ಗೆ ಆಳುವವರ್ಗದ ಫ್ಯಾಸಿಸ್ಟ್ ಮಾದರಿಯ ಅಸಹನೆಯ ಒಂದು ನಗ್ನ ಅಭಿವ್ಯಕ್ತಿ.

ಇವೆಲ್ಲವುಗಳ ನಡುವೆಯೂ ದೇಶದ ಕಾರ್ಮಿಕ ಆಂದೋಲನ ನಿಷೇಧಾಜ್ಞೆಗಳನ್ನು ಧಿಕ್ಕರಿಸಿ ಒಂದು ದೇಶವ್ಯಾಪಿ ಕಾರ್ಯಾಚರಣೆಯನ್ನು ನಡೆಸುವ ಧೈರ್ಯ ತೋರಿತು. 24 ಫೆಬ್ರವರಿ ಮುಷ್ಕರ ಸಮರಶೀಲ ದೇಶವ್ಯಾಪಿ ವರ್ಗ ಕಾರ್ಯಾಚರಣೆಗಳ ಮೂಲಕ ಈ ಘಟ್ಟದ ಆರಂಭವನ್ನು ಸಂಕೇತಿಸಿತು. ಈ ವರ್ಗ ಕಾರ್ಯಾಚರಣೆಗಳು ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿಯಷ್ಟೇ ಅಲ್ಲ, ಜನತೆಯ ಪ್ರಜಾಪ್ರಭುತ್ವದ ಹಕ್ಕುಗಳ ರಕ್ಷಣೆಗಾಗಿ. ಏಕೆಂದರೆ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ಪ್ರಜಾಪ್ರಭುತ್ವದ ಮೇಲೆ ಧಾಳಿಗೆ ಒಂದು ಪೀಠಿಕೆ. ಈ ಹಕ್ಕುಗಳನ್ನು ಇನ್ನೂ ಸಮರಶೀಲವಾಗಿ, ಸಂಘಟಿತವಾಗಿ ಇವುಗಳ ಬಗ್ಗೆ ದನಿಯೆಬ್ಬಿಸಿ ರಕ್ಷಿಸಿಕೊಳ್ಳಬೇಕಾಗಿದೆ. ಅದು ಇತಿಹಾಸದ ಪಾಠ. ಅಲ್ಲದೆ ಈ ಸಂಪೂರ್ಣ ಬೆಳವಣಿಗೆಗಳು ಶ್ರಮಜೀವಿಗಳ ಹಕ್ಕುಗಳನ್ನು, ಹಿತಾಸಕ್ತಿಗಳನ್ನು ತ್ಯಜಿಸಿ, ಕಾಲ ಕೆಳಗೆ ತುಳಿದು ಹಾಕಿ ಆರ್ಥಿಕವಾಗಲಿ, ಸಮಾಜವಾಗಲಿ ಮುನ್ನಡೆಯಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಒತ್ತಿ ಹೇಳುತ್ತವೆ. ಬಂಡವಾಳಶಾಹಿಗಳು ಮತ್ತು ಭೂಮಾಲಿಕರಿಗಷ್ಟೇ 'ಹಿತಾನುಭವ' ನೀಡುವ ಪಕ್ಷಪಾತಪೂರ್ಣ ಪ್ರಯತ್ನ ಯಾವುದೇ ರೀತಿಯಲ್ಲಿ ಉದ್ಯೋಗ ನಿರ್ಮಾಣಕ್ಕೆ ಹಾಗೂ ಸರ್ವತೋಮುಖ ತಾಳಿಕೆಯ ಅಭಿವೃದ್ಧಿಗೆ ದಾರಿ ಮಾಡಿಕೊಡುವುದಿಲ್ಲ. ಮೇ ದಿನ 2004 ಈ ಅರಿವನ್ನು ಶ್ರಮಜೀವಿಗಳ ಎಲ್ಲಾ ವಿಭಾಗಗಳಿಗೆ ತಲುಪಿಸಲಿ.

♦ ♦ ♦ ♦ ♦

ಈ ವರ್ಷ ಮೇ ದಿನವನ್ನು ಕಾರ್ಮಿಕವರ್ಗ ಒಂದು ಗಂಭೀರ ರಾಜಕೀಯ ಸಮರದ ನಡುವೆ- 14ನೇ ಲೋಕ ಸಭಾ ಚುನಾವಣೆಗಳ ನಡುವೆ-ಆಚರಿಸುತ್ತಿದೆ. ಜನಗಳನ್ನು ವಂಚಿಸಿ, ಕೋಮುವಾದಿ ವಿಭಜಕ ದಾರಿಯಿಂದ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ರಾಜಕೀಯ ಕೂಟ ಅದೇ ವಂಚನೆ ಮತ್ತು ಕೋಮುವಾದಿ ತಂತ್ರಗಳ ಮೂಲಕ ಐದು ವರ್ಷ ಅಧಿಕಾರ ನಡೆಸಲು ಸಾಧ್ಯವಾಗಿದೆ. ಈಗ ಮುಂಬರುವ ಚುನಾವಣೆಗಳಲ್ಲಿ ಅವರು ಮತ್ತೆ ರಾಜಕೀಯ ಅಧಿಕಾರಕ್ಕೆ ಮರಳಲು ಸುಳ್ಳು-ಪ್ರಚಾರಗಳು ಮತ್ತು ಕೋಮುಭಾವೋದ್ವೇಗಗಳನ್ನು ಬಡಿದೆಬ್ಬಿಸುವ ಮೂಲಕ ಜನಗಳನ್ನು ವಂಚಿಸಲು ಮತ್ತೊಮ್ಮೆ ಮುಂದಾಗಿದ್ದಾರೆ.

ಕಳೆದ ಐದು ವರ್ಷಗಳ ಬಿಜೆಪಿ ನೇತೃತ್ವದ ಆಳ್ವಿಕೆ ಸರ್ವತೋಮುಖ ಅವನತಿಯನ್ನು ಕಂಡಿದೆ. ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ

ಪುಟ 10 ಕ್ಕೆ

ಮೇ ದಿನ

ಪುಟ 5 ರಿಂದ

ಕಾರ್ಯಕರ್ತರನ್ನು ವಜಾ ಮಾಡಿದರು. ಮುಷ್ಕರ ಮುಂದುವರೆಯಿತು. ಆಗ ಮೂಲ ಬೇಡಿಕೆಯೊಂದಿಗೆ ವಜಾ ಆದ ಕಾರ್ಮಿಕರನ್ನು ಮತ್ತೆ ತೆಗೆದುಕೊಳ್ಳಬೇಕಾದ ಬೇಡಿಕೆಯೂ ಸೇರಿತು. ಈ ಚಳುವಳಿ ಹೊಸ ಪ್ರದೇಶಗಳಿಗೆ, ಪಟ್ಟಣಗಳಿಗೆ ಹರಡಿತು. ಇದೇ ಮುಂದುವರೆದು ಮುಂದಿನ ವರ್ಷಗಳಲ್ಲಿ ಒಂದು ಕಾರ್ಮಿಕ ಆಂದೋಲನ ಬೆಳೆದು ರಶ್ಯನ್ ಕ್ರಾಂತಿಗೆ ನೇತೃತ್ವ ನೀಡಲು ಸಾಧ್ಯವಾಯಿತು.

ಇಂಗ್ಲೇಂಡ್, ಫ್ರಾನ್ಸ್, ಜರ್ಮನಿ ಅಥವಾ ಅಮೆರಿಕಾದಂತೆ ಬೆಳೆದಿರದ ರಶ್ಯಾದಂತಹ ಒಂದು ದೇಶದಲ್ಲಿ ಕ್ರಾಂತಿ ಹೇಗೆ ಯಶಸ್ವಿಯಾಗಲು ಸಾಧ್ಯ ಎಂಬುದನ್ನು ಲೆನಿನ್ ತೋರಿಸಿಕೊಟ್ಟರು.

ಅಕ್ಟೋಬರ್ ಕ್ರಾಂತಿಯ ಮೊದಲ ದಿನವೇ ಲೆನಿನ್ ಹೊರಡಿಸಿದ ಡಿಕ್ರಿಗಳೆಂದರೆ ಶಾಂತಿಯನ್ನು ಕುರಿತಾದದ್ದು ಮತ್ತು ಉಳುವವನಿಗೆ ಭೂಮಿ ನೀಡುವುದನ್ನು ಕುರಿತಾದದ್ದು. ರಾಜಕೀಯ ಅಧಿಕಾರವನ್ನು ಸೋವಿಯತ್‌ಗಳಿಗೆ ಅಂದರೆ ಜನಗಳ ಸಂಘಟನೆಗಳಿಗೆ ವರ್ಗಾಯಿಸಲಾಯಿತು. ಪ್ರತಿಯೊಂದು ಸೋವಿಯತ್ ತನ್ನದೇ ಪ್ರತಿನಿಧಿ(ಡೆಪ್ಯೂಟಿ)ಗಳನ್ನು ಆರಿಸಿತು. ಅವರು ಸರ್ಕಾರ ರಚಿಸಿದರು. ಬಂಡವಾಳಶಾಹಿಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು ಈ ಮೂಲಕ ಸಮಾಜವಾದಕ್ಕೆ ತಳಪಾಯ ಹಾಕಲಾಯಿತು.

ಲೆನಿನ್ ಯುದ್ಧ ಮುಗಿಸಬಯಸಿದ್ದರು. ಆದರೆ ಸಾಮ್ರಾಜ್ಯಶಾಹಿ ದೇಶಗಳು ಅದನ್ನು ಮುಂದುವರೆಸಿ ರಶ್ಯಾದಲ್ಲಿ ಮಧ್ಯ ಪ್ರವೇಶಿಸಿದರು. ಕ್ರಾಂತಿಯಲ್ಲಿ ರಚನೆಗೊಂಡ ಕೆಂಪುಸೇನೆ ಅಂತಿಮವಾಗಿ ಮಧ್ಯ ಪ್ರವೇಶಿಸಿದವರನ್ನು ಸೋಲಿಸಿ ಸೋವಿಯತ್ ಒಕ್ಕೂಟವನ್ನು ಕಟ್ಟಿತು.

ಸೋವಿಯೆತ್ ಒಕ್ಕೂಟ ಸಮಾಜವಾದೀ ವ್ಯವಸ್ಥೆಗೆ ಒಂದು ದೃಢ ತಳಪಾಯವನ್ನು ಹಾಕಿದ್ದು ಜೆ.ವಿ.ಸ್ಟಾಲಿನ್‌ರ ಪ್ರಖ್ಯಾತ ನಾಯಕತ್ವದ ಅಡಿಯಲ್ಲಿ. ಅಲ್ಲಿನ ಉತ್ಪಾದನಾ ಶಕ್ತಿಗಳು ಎಷ್ಟೊಂದು ಬೆಳೆದವೆಂದರೆ ರಶ್ಯಾ ತನ್ನ ಹಿಂದುಳಿಕೆಯನ್ನು ನೀಗಿಸಿತಷ್ಟೇ ಅಲ್ಲ, ಅತ್ಯಂತ ಅಭಿವೃದ್ಧಿ ಹೊಂದಿದ ದೇಶವಾಗಿ ಮಾರ್ಪಟ್ಟಿತು.

ಫ್ಯಾಸಿಸಂ ವಿರುದ್ಧ ಸೆಣಸಾಟ

ಸಾಮ್ರಾಜ್ಯಶಾಹಿ ದೇಶಗಳು ಪಿತೂರಿ ನಡೆಸಿದವು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಫ್ಯಾಸಿಸಂ ಅನ್ನು ಸೃಷ್ಟಿಸಿದವು. ಅವರು ಜರ್ಮನಿಯ ಹಿಟ್ಲರ್ ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಒಕ್ಕೂಟದ ಮೇಲೆ ಧಾಳಿ ನಡೆಸಲು ಪ್ರೋತ್ಸಾಹಿಸಿದರು. ಆದರೆ ಸೋವಿಯತ್ ಒಕ್ಕೂಟ ತನ್ನ ಶಕ್ತಿ ಸಾಮರ್ಥ್ಯದಿಂದಾಗಿ ಇಂಗ್ಲೇಂಡ್, ಫ್ರಾನ್ಸ್, ಅಮೆರಿಕಾ ಇತ್ಯಾದಿ ಪಾಶ್ಚಿಮಾತ್ಯ ದೇಶಗಳೊಂದಿಗೆ ಮೈತ್ರಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಕೆಂಪು ಸೇನೆ ಅಂತಿಮವಾಗಿ 1945ರ ಮೇ ದಿನದಂದು ಬರ್ಲಿನ್ ನಗರವನ್ನು ವಶಪಡಿಸಿಕೊಂಡು ನಾಝಿ ಜರ್ಮನಿಯನ್ನು ಸೋಲಿಸಿತು.

ಸೋವಿಯತ್ ಒಕ್ಕೂಟ ಪೂರ್ವ ಯೂರೋಪ್ ಅನ್ನು ವಿಮೋಚನೆಗೊಳಿಸಿ ಪೂರ್ವ ಜರ್ಮನಿ, ಪೋಲಂಡ್, ಜೆಕೋಸ್ಲೋವಾಕಿಯಾ, ಹಂಗರಿ, ರುಮಾನಿಯಾ ಇತ್ಯಾದಿಗಳಲ್ಲಿ ಜನತಾ ಪ್ರಜಾಪ್ರಭುತ್ವಗಳನ್ನು ಸ್ಥಾಪಿಸಿತು. ಎರಡನೇ ಮಹಾಯುದ್ಧದ ನಂತರದ ಅವಧಿಯಲ್ಲಿ ಚೀನಾ, ಕೊರಿಯಾ ಮತ್ತು ವಿಯೆಟ್ನಾಂ ವಿಮೋಚನೆಗೊಂಡವು. ಹೀಗೆ ವಿಶ್ವದ ಜನಸಂಖ್ಯೆಯ ಮೂರನೇ ಒಂದರಷ್ಟು ಭಾಗವನ್ನು ಆವರಿಸಿದ ಸಮಾಜವಾದೀ ಬಣ ಬಂತು. ಅದೊಂದು ಬೃಹತ್ ಶಕ್ತಿಯಾಯಿತು.

ವಸಾಹತುಗಳ ವಿಮೋಚನೆ

ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ಬಣ ವಸಾಹತುಗಳ ವಿಮೋಚನಾ ಪ್ರಕ್ರಿಯೆಗೆ ನೆರವಾದವು. ಹೀಗೆ ಭಾರತ ಮತ್ತು ಇನ್ನೂ ಹಲವು ವಸಾಹತುಗಳು ಸ್ವತಂತ್ರವಾದವು. ಸಾಮ್ರಾಜ್ಯಶಾಹಿ - ವಿರೋಧಿ ಆಂದೋಲನ ನಂತರ ಅಲಿಪ್ತ ಆಂದೋಲನವಾಯಿತು.

ಅಲಿಪ್ತ ಆಂದೋಲನವ್ವನಾಟೋ, ಸೀಟೋ, ಸೆಂಟೋ ಮುಂತಾದ ಮಿಲಿಟರಿ ಬಣಗಳನ್ನು ಸೇರಲು ನಿರಾಕರಿಸಿ ಸಾಮ್ರಾಜ್ಯ ಶಾಹಿಗಳಿಗೆ ಪ್ರತಿರೋಧ ಒಡ್ಡಿದವು. ಅವರು ಸಮಾಜವಾದೀ ಬಣದ ವಾರ್ಸಾಸಂಧಿ ಬಣವನ್ನೂ ಸೇರಲಿಲ್ಲ.

ಆದರೂ ಸೋವಿಯತ್ ಒಕ್ಕೂಟ ಮತ್ತು ಸಮಾಜವಾದೀ ಬಣವು ಹೊಸದಾಗಿ ಸ್ವತಂತ್ರಗೊಂಡ ದೇಶಗಳು ತಮ್ಮ ಆರ್ಥಿಕವನ್ನು ಕಟ್ಟಲು ನೆರವಾದರು. ಉದ್ದಿಮೆಗಳನ್ನು ಸ್ಥಾಪಿಸಿ, ಅವರ ಸಿಬ್ಬಂದಿಗೆ ತರಬೇತು ನೀಡಿ ಮತ್ತು ಸಮಾಜವಾದಿ ಬಣದೊಂದಿಗೆ ತಮ್ಮದೇ ನಾಣ್ಯವನ್ನು ಬಳಸಿ ವ್ಯಾಪಾರ ನಡೆಸಲು ಪ್ರೋತ್ಸಾಹ ನೀಡಿದವು.

ವೈಜ್ಞಾನಿಕ ಮತ್ತು ತಂತ್ರಜ್ಞಾನದ ಕ್ರಾಂತಿ

ಎರಡನೇ ಮಹಾಯುದ್ಧದ ನಂತರದ ಅವಧಿಯಲ್ಲಿ ಸಾಮ್ರಾಜ್ಯಶಾಹಿ ದೇಶಗಳು ತಮ್ಮ ಸ್ವಂತ ಆರ್ಥಿಕಗಳನ್ನು ಅಭಿವೃದ್ಧಿಪಡಿಸಲು ಒಂದು ಒತ್ತು ನೀಡಿದವು. ಅಮೇರಿಕ, ಯುರೋಪು ಮತ್ತು ಜಪಾನ್ ತಮ್ಮ ಆರ್ಥಿಕಸಂಪತ್ತನ್ನು ಬೆಳೆಸುವುದರ ಜೊತೆಗೆ ಜಗತ್ತಿನ ಇತರ ಎಲ್ಲಾ ದೇಶಗಳನ್ನು ವ್ಯಾಪಾರದ ಮೂಲಕ ಶೋಷಣೆಗೊಳಪಡಿಸಿದವು.

ಅಭಿವೃದ್ಧಿ ಹೊಂದಿದ ಬಂಡವಾಳಶಾಹೀ ಆರ್ಥಿಕಗಳು ವೈಜ್ಞಾನಿಕ ಮತ್ತು ತಂತ್ರಜ್ಞಾನದ ಕ್ರಾಂತಿ ಸಾಧಿಸಿದವು ಎಂಬುದನ್ನು ನಿರಾಕರಿಸಲಾಗದು. ಸೋವಿಯೆಟ್ ಒಕ್ಕೂಟ ಕೂಡಾ ಮನುಷ್ಯನನ್ನು ಬಾಹ್ಯಾಕಾಶಕ್ಕೆ ಕಳಿಸುವವರೆಗೆ ಚಂದ್ರನನ್ನು ಸುತ್ತು ಹಾಕಿ ಬರುವವರೆಗೆ ತಂತ್ರಜ್ಞಾನದ ಕ್ರಾಂತಿಯ ಮುಂಚೂಣಿಯಲ್ಲಿ ಇತ್ತು. ನಂತರ ಅದು ನಿಧಾನಗೊಂಡು ಇಪ್ಪತ್ತನೇ ಶತಮಾನದ ಕೊನೆಯ ದಶಕದಲ್ಲಿ ತಂತ್ರಜ್ಞಾನದೊಡನೆ ಹೆಜ್ಜೆಯಿಡಲಾರದಾಯಿತು ಎಂಬುದನ್ನು ನಿರಾಕರಿಸುವಂತಿಲ್ಲ.

ಇದರಿಂದಾಗಿ ಚೀನಾ ತನ್ನನ್ನು ಹೊರಜಗತ್ತಿಗೆ ತೆರೆಯಲು ನಿರ್ಧರಿಸಿದಾಗ ತನ್ನ ಉತ್ಪಾದನಾ ಶಕ್ತಿಗಳನ್ನು ಅಭಿವೃದ್ಧಿ ಪಡಿಸಲು ಪಾಶ್ಚಿಮಾತ್ಯರನ್ನು ಅವಲಂಬಿಸುವಂತಾಯಿತು. ಕ್ರಮೇಣ ವಿಯೆಟ್ನಾಂ ಕೂಡಾ ಇದೇ ದಾರಿ ಹಿಡಿಯಿತು.

ಸೋವಿಯತ್ ಒಕ್ಕೂಟ ಗೋರ್ಬಚೆವ್ ಅಡಿಯಲ್ಲಿ ನ್ಯೂನತೆಗಳನ್ನು ಸರಿಪಡಿಸಲೆಂದು ಪೆರೆಸ್ಟ್ರೋಯಿಕಾ ಮತ್ತು ಗ್ಲಾಸ್‌ನೋಸ್ಟ್ ಆರಂಭಿಸಿತು. ಆದರೆ ಸಮಾಜವಾದಿ ಸಮಾಜದ ಪುನರ್‌ರಚನೆಯ ಬದಲು ರಶ್ಯನ್‌ರು ಅಂತಿಮವಾಗಿ ಸಮಾಜವಾದಿ ವ್ಯವಸ್ಥೆಯನ್ನೇ ಕಳಚಿ ಹಾಕಿದರು. ಮೊದಲ ಬಿರುಕು ಪೋಲೆಂಡಿನಲ್ಲಿ ಕಂಡು ಬಂತು. ನಂತರ ಪೂರ್ವ ಜರ್ಮನಿ, ಹಂಗೆರಿ, ಜೆಕೊಸ್ಲೋವಾಕಿಯಾ ಮತ್ತು ರುಮಾನಿಯಾದಲ್ಲಿ ಕಂಡು ಬಂತು.

1991ರ ವೇಳೆಗೆ ಸೋವಿಯತ್ ಒಕ್ಕೂಟ ಕುಸಿಯಿತು ಮತ್ತು ಬಂಡವಾಳಶಾಹಿಯ ಮರುಸ್ಥಾಪನೆ ನಡೆಯಿತು.

ಸಮಾಜವಾದೀ ಬಣದ ಕುಸಿತದ ನಂತರ..

ಸೋವಿಯತ್ ಒಕ್ಕೂಟದ ಕುಸಿತದ ನಂತರ ಸಾಮ್ರಾಜ್ಯ ಶಾಹಿಗಳು ಭಂಡತನ ತೋರಲಾರಂಭಿಸಿದರು. ತಮ್ಮ ಕಣ್ಣೋಟವನ್ನು ಅವರು ಹೇರಲಾರಂಭಿಸಿದರು. ಜಾಗತೀಕರಣ ಎಂಬುದು ಈಗ ವಿಶ್ವಾದ್ಯಂತ ಬಂಡವಾಳಶಾಹಿ ಅಭಿವೃದ್ಧಿಗೆ ಒಂದು ಹೊಸ ಪದವಾಗಿಬಿಟ್ಟಿದೆ.

'ರಾಷ್ಟ್ರೀಯ' ಆಂದೋಲನಗಳ ಪ್ರತಿರೋಧವನ್ನು ಅವರು ಬಹಳ ತ್ವರಿತವಾಗಿ ಸೋಲಿಸಿ ನಿಂತಿದ್ದಾರೆ. ವಸಾಹತುಶಾಹಿಯ ವಿರುದ್ಧ ಎದ್ದು ಬಂದ ರಾಷ್ಟ್ರೀಯ ಆಂದೋಲನಗಳ ಫಲವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಅಧಿಕಾರಕ್ಕೆ ಪ್ರಭುತ್ವಗಳು ಒಡ್ಡಿದ ಪ್ರತಿರೋಧವನ್ನು ಜಾಗತೀಕರಣದ ಹೆಸರಿನಲ್ಲಿ ಹಿಮ್ಮೆಟ್ಟಿಸುತ್ತಿದ್ದಾರೆ. ಸಮಾಜವಾದಿ ಬಣದ ಶಕ್ತಿಯ ಬೆಂಬಲವಿಲ್ಲದೆ ಅಭಿವೃದ್ಧಿಶೀಲ ದೇಶಗಳ ಬಂಡವಾಳಶಾಹಿ ಭೂಮಾಲೀಕ ಪ್ರಭುತ್ವಗಳು ಒಂದೊಂದಾಗಿ ವಿಶ್ವಬಂಡವಾಳಶಾಹಿ ಶಕ್ತಿಗಳ ಮಿತ್ರಗುತ್ತಿದ್ದಾರೆ.

ಪ್ರತಿಯೊಂದು ದೇಶದಲ್ಲಿ ಅಲಿಪ್ತ ಆಂದೋಲನದ ಅವಧಿಯಲ್ಲಿ ಕಟ್ಟಿಬೆಳೆಸಿದ ಉತ್ಪಾದನಾ ಶಕ್ತಿಗಳನ್ನು ವಿಶ್ವ ಬಂಡವಾಳಶಾಹಿಗಳು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಧೋರಣೆಗಳ ಹೆಸರಲ್ಲಿ ವಹಿಸಿಕೊಳ್ಳುವ ನಿರಂತರ ಪ್ರಯತ್ನ ನಡೆಸಿದ್ದಾರೆ. ಕೆಲವು ಮಟ್ಟಿಗೆ ಯಶಸ್ಸು ಪಡೆದಿದ್ದಾರೆ. ಆದರೆ ಅದೇ ಸಮಯದಲ್ಲಿ ಜಾಗತೀಕರಣದ ವಿರುದ್ಧ ಚಳುವಳಿಯೂ ಪ್ರಬಲವಾಗಿ ಏಳುತ್ತಿದೆ.

ಕಾರ್ಮಿಕವರ್ಗ ತಂತಮ್ಮ ದೇಶಗಳಲ್ಲಿ ಕೆಲವು ರಿಯಾಯ್ತಿಗಳನ್ನು ಕಿತ್ತುಕೊಳ್ಳುವಲ್ಲಿ ಯಶಸ್ವಿಯಾಗಿದ್ದರೆ ಉದಾರೀಕರಣದ ಶಕ್ತಿಗಳು ಪ್ರತಿಯೊಂದು ಕಡೆಯೂ 'ಲೇಬರ್ ಫ್ಲೆಕ್ಸಿಬಿಲಿಟಿ'ಯ ಹೆಸರಲ್ಲಿ ಕಾರ್ಮಿಕ ಆಂದೋಲನಗಳ ಮೇಲೆ ಧಾಳಿ ನಡೆಸುತ್ತಿದೆ.

ಹೀಗೆ ಭಾರತದಲ್ಲಿ ಸಂಘಟಿತ ಕಾರ್ಮಿಕವರ್ಗ ಒಂದು ನಿರಂತರ ಧಾಳಿಗೆ ಒಳಗಾಗಿದೆ.

ಕಾರ್ಮಿಕವರ್ಗ ತನ್ನ ಆಂದೋಲನವನ್ನು ಸಮಗ್ರೀಕರಿಸಿ ಎಲ್ಲರ ಸರ್ವಸಮಾನ ಬೇಡಿಕೆಗಳಿಗೆ ಹೋರಾಡುವಲ್ಲಿ ಯಶಸ್ವಿಯಾಗದಿದ್ದರೆ ವಿಶ್ವ ಬಂಡವಾಳಶಾಹಿ ಶಕ್ತಿಗಳು ವಿಶ್ವ ಶ್ರಮಜೀವಿವರ್ಗದ ಆಂದೋಲನಕ್ಕೆ ಎಸೆದ ಸವಾಲನ್ನು ಎದುರಿಸಲು ಸಾಧ್ಯವಾಗುವುದಿಲ್ಲ.

ಮಾರ್ಕ್ಸ್ ಮತ್ತು ಎಂಗೆಲ್ಸ್ ತೋರಿಸಿಕೊ… ಬೆಳೆಯುತ್ತಿರುವ ವಿಶ್ವ ಮಾರುಕಟ್ಟೆಯಲ್ಲಿ ಸ… ಅಂಶಗಳೂ ಇವೆ, ನಕಾರಾತ್ಮಕ ಅಂಶಗಳೂ…


ವಿಶ್ವ ಬಂಡವಾಳ ಹಿಂದೆಂದೂ ಈ… ಒಗ್ಗಟ್ಟಿನಲ್ಲಿ ಇರಲಿಲ್ಲ. ಆದರೆ … ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯೂಟಿಒ)ಯ… ವೈರುಧ್ಯಗಳು ಅಡಕವಾಗಿವೆ. ಅವರು… ಆರ್ಥಿಕವನ್ನು ಸಮಗ್ರೀಕರಿಸುತ್ತಿರುವಂ… ತಮ್ಮದೇ ಶ್ರಮಶಕ್ತಿಯನ್ನು ರಕ್ಷಿಸಬೇಕ… ಸಾಮಾಜಿಕ ಶರತ್ತು ಎಂಬ ಹೆಸರಲ್ಲಿ ಅವರ… ಶ್ರಮಜೀವಿ ವರ್ಗದ ಬೇಡಿಕೆಯನ್ನು ಎತ್ತು… ಆಶ್ಚರ್ಯಪಡಬೇಕಿಲ್ಲ. ನಾವು ಅ… ವ್ಯಾಪಾರದೊಂದಿಗೆ ತಳಕು ಹಾಕುವುದನ್ನು… ವಿರೋಧಿಸುತ್ತೇವೆ.

ಸಾಮಾಜಿಕ ಶರತ್ತಿನಲ್ಲಿ ಸಂಘಟನಾ… ಸಾಮೂಹಿಕ ಚೌಕಾಶಿಯ ಹಕ್ಕು, ಬಲ… ದುಡಿಮೆಯ ವಿರುದ್ಧ ಹಕ್ಕು, ಸಮರೂಪದ ಮಾನದಂಡಗಳ ಹಕ್ಕು (Uniform La… Standards) ಇವೆಲ್ಲಾ ಸೇರಿವೆ.

ಪ್ರತಿಯೊಂದೆಡೆಯೂ ಕಾರ್ಮಿಕ… ಸಮರೂಪದ ಶ್ರಮಿಕ ಮಾನದಂಡ…ಗಾಗಿ ಕಾರ್ಮಿಕ ಹಕ್ಕುಗಳಿಗಾಗಿ ಹೋರಾಡಬೇಕು…

ಹೊಸ ಸನ್ನಿವೇಶದಲ್ಲಿ ಸಮರೂಪದ ಮಾನದಂಡಗಳ ಜಾರಿಗಾಗಿ ವಿಶ್ವ ಕಾ… ಆಂದೋಲನವನ್ನು ಮುಂದುವರೆಸಿದರೆ ಆ… ಸಮಾಜವಾದಕ್ಕೆ ಅಡಿಗಲ್ಲು ಹಾಕ… ಆಂದೋಲನವನ್ನು ಮುನ್ನಡೆಸಲು ಸಾಧ್ಯವಾ…

ಈ ದಿಕ್ಕಿನಲ್ಲಿ ಒಂದು ಹೊಸ ಮ… ಆಂದೋಲನ ಆರಂಭವಾಗಬೇಕಿದೆ.



ಬೆಂಗಳೂರಿನಲ್ಲಿ ಮೇ ದಿನ ಸಂದರ್ಭದಲ್ಲಿ ಭಾಗವಹಿಸಿ ಕಾರ್ಮಿಕ ವರ್ಗ…

ಮೇ ದಿನದ ಕ್ರಾಂತಿಕಾರಿ ಶುಭಾಷಯಗಳು

'ನರರ ನಡುವಿನಡ್ಡ ಗೋಡೆಗಳ ಕುಟ್ಟಿ
ಕೆಡಹುವೆವು' ಎಂದು ಜಗತ್ತಿಗೆ ದುಡಿವ
ವರ್ಗದ ಅಂತರ್‌ರಾಷ್ಟ್ರೀಯತೆಯ
ಭಾತೃತ್ವ-ಸೌಹಾರ್ದತೆ ಸಾರಿದ,
ದುಡಿವವರ್ಗದ ಹಕ್ಕುಗಳಿಗಾಗಿ, ಮಾಲೀಕರ
ಪ್ರಭುತ್ವದ ದಬ್ಬಾಳಿಕೆಗೆದುರು ಸೆಟೆದು ನಿಂತು
ಸಮರ ಹೂಡಿದ ಮಹಾನ್ ಮೇ ದಿನ ಮತ್ತೆ
ಬಂದಿದೆ. ಜಗತ್ತಿನೆಲ್ಲೆಡೆಯ ಅಸಮಾನತೆ,
ಸುಲಿಗೆ, ಶೋಷಣೆ, ದಮನ, ತಾರತಮ್ಯಗಳ
ನಿರ್ಮೂಲನವಾಗಲು ಕಾರ್ಮಿಕವರ್ಗದ
ನೇತೃತ್ವದಲ್ಲಿನ ವರ್ಗ ಸಂಘರ್ಷವೊಂದೇ
ಪರಿಹಾರ ಎಂದು ಬದಲಾವಣೆಗಳ
ಹೋರಾಟ ನಿತ್ಯ ನಿರಂತರಗೊಳಿಸಿದ ತ್ಯಾಗ
ಬಲಿದಾನಗಳ ಪರಂಪರೆ ಎತ್ತಿ ಹಿಡಿದ …
ದಿನ ಎಲ್ಲರಿಗೂ ಸ್ಫೂರ್ತಿ ಸಂಭ್ರಮದ …
ಸಾಮ್ರಾಜ್ಯಶಾಹಿಗಳ
ಜಾಗತೀಕರಣ-ಉದಾರೀಕರಣ, ಇದರ…
ಭಾಗವೇ ಆದ ಕೋಮುವಾದ, ಫ್ಯಾಸಿಸ…
ಮಾದರಿ ಆಕ್ರಮಣಗಳನ್ನು ಎದುರಿಸಿ
ಹಿಮ್ಮೆಟ್ಟಿ, ಪುಡಿಗುಟ್ಟುವ ಸಂಕಲ್ಪ, ಅದ…
ರಾಜಿ ಇಲ್ಲದ, ಧಣಿವರಿಯದ ಪ್ರಬಲ
ಆಂದೋಲನ ನಡೆಸುವ ನಡೆಸುವ ಶ…
ನಮ್ಮೆಲ್ಲದರಾಗಲಿ ಎಂಬುದು ದುಡಿವ
ಜನರ ಪ್ರಾಣ ಮಿತ್ರ 'ಐಕ್ಯರಂಗ' ಪತ್ರಿಕ…
ಆಶಯ.

ಕೆಂಪು ಶುಭಾಷಯಗಳು

ಅಂತಿಮ ಪ್ರಹಾರಕ್ಕೆ ಇದೊಂದೇ ಅವಕಾಶ!

— ಸೀತಾರಾಂ ಯೆಚೂರಿ

1999 ರಲ್ಲಿ ಗೆದ್ದ ಸ್ಥಾನಗಳನ್ನೂ ಬಿಜೆಪಿ-ಎನ್‌ಡಿಎ ಉಳಿಸಿಕೊಳ್ಳುವುದಿಲ್ಲ ಎಂಬುದು ಎರಡು ಹಂತಗಳ ಚುನಾವಣೆಗಳು ಮುಗಿದ ಬಳಿಕ ಕಂಡಬಂದ ಸತ್ಯ ಸಂಗತಿ. 300 ಕ್ಕೂ ಅಧಿಕ ಸ್ಥಾನ ತಾವೇ ಗೆದ್ದು ಬಿಡುವುದಾಗಿ ಅಬ್ಬರ ಮಾಡುತ್ತಿದ್ದ ಬಿಜೆಪಿಗೆ ನಡುಕ! ಇದು ದೇಶದ ಜನತೆ ನೀಡಲಿರುವ ಫಲಿತಾಂಶದ ಸೂಚಕ. ಇನ್ನು ಉಳಿದ ಎರಡು ಹಂತದ ಚುನಾವಣೆಗಳಲ್ಲಿಯೂ ಈ 'ದೇಶದ್ರೋಹಿ' ಕೂಟವನ್ನು ಸೋಲಿಸಿ ಧೂಳೀಪಟ ಮಾಡಬೇಕು. ಅದಕ್ಕಾಗಿ 'ಅಂತಿಮ ಪ್ರಹಾರ' ನೀಡಿ ಎನ್ನುತ್ತಾರೆ ಸಿಪಿಐ(ಎಂ) ನಾಯಕ ಸೀತಾರಾಂ ಯೆಚೂರಿ

ಎರಡು ಸುತ್ತಿನ ಚುನಾವಣೆಗಳ ನಂತರ ಕೆಳಹಂತದಿಂದ ಬಂದಿರುವ ವರದಿಗಳು ಇದನ್ನು ಖಾತ್ರಿಗೊಳಿಸುತ್ತಿವೆ.

ಒಂದು ಸ್ಪಷ್ಟ ಮತ್ತು ಬಲವಾದ ಆಡಳಿತ ವಿರೋಧಿ ಭಾವನೆ ಕೆಲಸ ಮಾಡುತ್ತಿದೆ. ಇಂತಹದ್ದೇ ಒಂದು ಆಡಳಿತ ವಿರೋದಿ ಭಾವನೆ ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸ್‌ಘಟದ ಕಾಂಗ್ರೆಸ್ ರಾಜ್ಯ ಸರ್ಕಾರಗಳ ವಿರುದ್ಧ ಕೂಡ ಕೆಲಸ ಮಾಡಿ ಬಿಜೆಪಿಯ ಜಯವನ್ನು ಖಾತ್ರಿಗೊಳಿಸಿದ್ದವು. ಈಗ ಅದೇ ಆಡಳಿತ ವಿರೋಧಿ ಭಾವನೆ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕೆಲಸ ಮಾಡುತ್ತಿದೆ. ಸಾವಿರಾರು ಕೋಟಿ ರೂ. ಸಾರ್ವಜನಿಕ ಹಣವನ್ನು ಖರ್ಚು ಮಾಡಿ "ಭಾರತ ಪ್ರಕಾಶಿಸುತ್ತಿದೆ" ಹಿತಾನುಭವವಾಗುತ್ತಿದೆ ಎಂದು ಸೃಷ್ಟಿ ಮಾಡಿದ್ದ ಪ್ರಚಾರ ಕೆಲಸ ಮಾಡಲಿಲ್ಲ ಮಾತ್ರವಲ್ಲ ಅದೇ ಅವರಿಗೆ ತಿರುಗುಬಾಣವಾಗಿದೆ.

ಆಡಳಿತ ವಿರೋಧಿ ಭಾವನೆಯ ಜೊತೆಗೆ, ಮತದಾರರಲ್ಲಿ ಅತ್ಯಂತ ಸ್ಪಷ್ಟವಾಗಿರುವ ಅಂಶವೇನೆಂದರೆ ಎನ್‌ಡಿಎ ಮತ್ತೈದು ವರ್ಷ ಅಧಿಕಾರದಲ್ಲಿದ್ದರೆ ಜನತೆ ಮತ್ತು ದೇಶಕ್ಕೆ ವಿಪತ್ತು ಕಾದಿದೆ ಎಂಬುದು ನಾವು ಈಗಾಗಲೇ ಹಲವಾರು ಬಾರಿ ಹೇಳಿರುವಂತೆ, ಎನ್‌ಡಿಎಯು ಬಿಜೆಪಿಯ ಕೋಮುವಾದೀ ಕಾರ್ಯಕ್ರಮಗಳನ್ನು ಜಾರಿ ಮಾಡುವ ಮುಖವಾಡಮಾತ್ರ. ಅದರಂತೆಯೇ ಬಿಜೆಪಿಯು ಆರ್‌ಎಸ್‌ಎಸ್‌ನ ವಕ್ತಾರನಲ್ಲದೆ ಬೇರೇನೂ ಅಲ್ಲ. ಭಾರತವು ಒಂದು ಧರ್ಮನಿರಪೇಕ್ಷ ಗಣರಾಜ್ಯವಾಗಿ ಉಳಿಯಬೇಕೆಂದರೆ ಈ ಶಕ್ತಿಗಳನ್ನು ಅಧಿಕಾರದಿಂದ ದೂರವಿಡಬೇಕಾದುದು ಅನಿವಾರ್ಯ.

ಈ ಸಂದಭಶದಲ್ಲಿ ಮೇ 5 ಮತ್ತು 10 ರಂದು ನಡೆಯುವ ಉಳಿದಿರುವ ಎರಡು ಹಂತದ ಚುನಾವಣೆಗಳಿಗೆ ಅಪಾರ ಮಹತ್ವ ಪಡೆದುಕೊಳ್ಳುತ್ತವೆ. 265 ಕ್ಷೇತ್ರಗಳಲ್ಲಿನ್ನೂ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗಿದೆ. ಇವುಗಳಲ್ಲಿ ಈಗ ಬಿಜೆಪಿ ನೇತೃತ್ವದ ಎನ್‌ಡಿಎಗೆ 127 ಸ್ಥಾನಗಳಿವೆ. ಪಂಜಾಬ್, ರಾಜಸ್ಥಾನ, ಮಧ್ಯಪ್ರದೇಶವನ್ನು ಹೊರತುಪಡಿಸಿ ಬೇರೆಲ್ಲೂ ಬಿಜೆಪಿ/ ಎನ್‌ಡಿಎ ತನ್ನ ಸ್ಥಾನಗಳನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. 1999 ರಲ್ಲಿ ಎನ್‌ಡಿಎಯು ಹರ‍್ಯಾಣದ 10 ರಲ್ಲಿ 10, ದೆಹಲಿಯ 7 ರಲ್ಲಿ 7, ಹಿಮಾಚಲಪ್ರದೇಶದ 4 ರಲ್ಲಿ 4 ಸ್ಥಾನಗಳನ್ನು ಗೆದ್ದಿತ್ತು. ಇದನ್ನು ಪುನರಾವರ್ತಿಸಲಂತೂ ಯಾವ ಕಾರಣಕ್ಕೂ ಸಾಧ್ಯವಿಲ್ಲ. ತಮಿಳುನಾಡು ಮತ್ತು ಪಾಂಡಿಚೇರಿಗಳಲ್ಲಿ 40 ಸೀಟುಗಳ ಪೈಕಿ 26ರಲ್ಲಿ ಎನ್‌ಡಿಎ ಗೆದ್ದಿತ್ತು. ಈಗದನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಬಿಹಾರದಲ್ಲಿ ಉಳಿದಿರುವ 11 ಸ್ಥಾನಗಳ ಪೈಕಿ ಬಿಜೆಪಿ 9 ಸ್ಥಾನಗಳನ್ನು ಹೊಂದಿತ್ತು. ಇದನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಅಂದರೆ 1999 ರಲ್ಲಿ ಗೆದ್ದಿದ್ದ ಸ್ಥಾನಗಳ ಹತ್ತಿರಕ್ಕೂ ಬಿಜೆಪಿ/ ಎನ್‌ಡಿಎ ಬರಲು ಸಾಧ್ಯವಿಲ್ಲ ಎಂಬುದು ಸುಸ್ಪಷ್ಟ.

ಬಹುತೇಕ ಮತದಾರರ ಅಭಿಪ್ರಾಯವೆಂದರೆ ಎನ್‌ಡಿಎ ಸರ್ಕಾರವನ್ನು ಸೋಲಿಸುವುದು ಮುಂಬರುವ ಎರಡು ಹಂತದ ಚುನಾವಣೆಗಳಲ್ಲಿ ನಾವಿದನ್ನು ಸ್ಪಷ್ಟೀಕರಿಸಿಕೊಳ್ಳಬೇಕಾಗಿದೆ. ಎನ್‌ಡಿಎಯನ್ನು ಅಧಿಕಾರದಿಂದ ತೊಲಗಿಸಲು ಎಲ್ಲಾ ಸಂಪನ್ಮೂಲಗಳು, ಅವಕಾಶಗಳನ್ನು ಬಳಸಿಕೊಳ್ಳಬೇಕಾಗಿದೆ. ಬಿಜೆಪಿ/ ಆರ್‌ಎಸ್‌ಎಸ್/ ಎನ್‌ಡಿಎ ಪ್ರದರ್ಶಿಸುತ್ತಿರುವ ಹತಾಶೆಯನ್ನು ನೋಡಿದರೆ ಅವರ ಸೋಲು ಬಹಳ ಪ್ರಾಮುಖ್ಯವಾದುದು. ಜನತೆಯ ತೀರ್ಪನ್ನು ತಿರುಚಲು ಅವರು ಎಲ್ಲಾ ಷಡ್ಯಂತ್ರಗಳನ್ನು ಮಾಡುತ್ತಾರೆ. ಈಗಾಗಲೇ ಸಾಕಷ್ಟು ತೋಳ್ಬಲ ಮತ್ತು ಹಣಬಲವನ್ನು ಬಳಸುತ್ತಿರುವ ಸುದ್ದಿಗಳು ಬರುತ್ತಿವೆ. ಈ ಮೇಲಿನ ಎಲ್ಲಾ ಕಾರಣಗಳಿಗಾಗಿ ಅವರ ನಿರ್ಣಾಯಕ ಸೋಲು ಅನಿವಾರ್ಯವಾದುದು.

ಬಿಜೆಪಿಯೇನಾದರೂ 272 ಸಂಖ್ಯೆಯ ಹತ್ತಿರ ಬಂದರೆ ಬಹುಮತವನ್ನು ಸಾಬೀತುಪಡಿಸಲು ಅವರ ಎಂಥಹ ಹೇಸಿಗೆ ಕೆಲಸಕ್ಕೂ ಕೈಹಾಕುತ್ತಾರೆ. ಆದರೆ ಈ ಯಾವುದೇ ಕೆಲಸಕ್ಕೂ ಅವಕಾಶವಿಲ್ಲದಂತೆ ಎನ್‌ಡಿಎಯನ್ನು ಸದೆಬಡಿಯಬೇಕು.

ಆದ್ದರಿಂದ ತಕ್ಷಣದ ಅವಶ್ಯಕತೆಯೆಂದರೆ ಎನ್‌ಡಿಎಗೆ ಮಾರಕ ಹೊಡೆತ ನೀಡುವುದು. ನಾವೆಲ್ಲರೂ ಸೇರಿ ಭಾರತವನ್ನು ಇಂದು ಉಳಿಸಿದರೆ ನಾಳೆಗೆ ಅದನ್ನು ಉತ್ತಮವಾಗಿ ಬದಲಾಯಿಸಬಹುದು. ಹಾಗಾಹಿ ಮುಂದಿನ ಎರಡು ಹಂತದಲ್ಲಿ ಎನ್‌ಡಿಎಗೆ ನಿರ್ಣಾಯಕ ಸೋಲಾಗಬೇಕು.

ಕೇಂದ್ರದಲ್ಲಿ ಜಾತ್ಯತೀತ ಸರಕಾರ ಅಧಿಕಾರಕ್ಕೆ - ಕಾ। ಸುರ್ಜಿತ್

ಕೇಂದ್ರದಲ್ಲಿ ಜಾತ್ಯತೀತ ಸರಕಾರದ ರಚನೆ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ। ಹರ್‌ಕಿಶನ್‌ಸಿಂಗ್ ಸುರ್ಜಿತ್ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಕಾಂಗ್ರೆಸ್ಸನ್ನು ಹೊರತು ಪಡಿಸಿ ಎಡಪಕ್ಷಗಳ ನೇತೃತ್ವದಲ್ಲಿ ಮೂರನೇ ರಂಗವೊಂದು ಅಸ್ತಿತ್ವಕ್ಕೆ ಬರಲಿದ್ದು ಪ್ರಧಾನಮಂತ್ರಿ ಯಾರೆಂಬುದನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವಹಿಸಲಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷ ಜಾತ್ಯತೀತ ಪಕ್ಷವಾಗಿದ್ದರೂ, ಕೋಮುವಾದಿ ಬಿಜೆಪಿಯನ್ನು ಎದುರಿಸಲು ದೃಢತೆಯನ್ನು ತೋರಿಸಿಲ್ಲ. ಮಧ್ಯಪ್ರದೇಶದ ಹಿಂದಿನ ಮುಖ್ಯಮಂತ್ರಿ ದಿಗ್ವಿಜಯಸಿಂಗ್, ಗುಜರಾತಿನ ಕಾಂಗ್ರೆಸ್ ಮುಖಂಡ ಶಂಕರ್ ಸಿಂಗ್ ವಾಘೇಲಾ ಮೊದಲಾದ ಮುಖಂಡರು ಮೃದು ಹಿಂದುತ್ವ ಧೋರಣೆ ತಳೆದುದನ್ನು ನೆನಪಿಸಿದ ಕಾ। ಸುರ್ಜಿತ್, ಕಾಂಗ್ರೆಸ್‌ನವರು ಜಾತ್ಯತೀತ ಶಕ್ತಿಗಳನ್ನು ಒಂದುಗೂಡಿಸುವಲ್ಲಿ ವಿಫಲರಾದರು ಎಂದು ತಿಳಿಸಿದರು.

ಕಾಂಗ್ರೆಸ್ಸಿನ ಆರ್ಥಿಕ ನೀತಿಯೂ, ಬಿಜೆಪಿಯ ಆರ್ಥಿಕ ನೀತಿಗಳಿಗಿಂತ ಭಿನ್ನವಾಗಿಲ್ಲ. ಕೋಮುವಾದಿ ಬಿಜೆಪಿಗೆ ಸಮರ್ಥವಾದ ಪರ್ಯಾಯವನ್ನು ಒದಗಿಸಬೇಕಾದಲ್ಲಿ ಕಾಂಗ್ರೆಸ್ ತನ್ನ ಆರ್ಥಿಕ ಧೋರಣೆಯಲ್ಲಿ ಆಮೂಲಾಗ್ರ ಬದಲಾವಣೆ ತರುವುದು ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು.

ಕೇರಳದಲ್ಲಿ ಚುನಾವಣಾ ಪ್ರಚಾರ ಮತ್ತು ಪತ್ರಿಕೆ ವರದಿಗಾರರೊಂದಿಗೆ ಚರ್ಚೆಯಲ್ಲಿ ಭಾಗವಹಿಸಿದ ಸುರ್ಜಿತ್ ಚುನಾವಣಾ ಫಲಿತಾಂಶದ ನಂತರ ಎಡಪಕ್ಷಗಳು ದೇಶದ ರಾಜಕೀಯದಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಲಿವೆ ಎಂದು ಹೇಳಿದರು.

ಸರಕಾರದಲ್ಲಿ ಭಾಗವಹಿಸುವ ಬಗ್ಗೆ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರವಾಗಿ, "ಕೇಂದ್ರದಲ್ಲಿ ಅಧಿಕಾರದಲ್ಲಿ ಭಾಗವಹಿಸುವ ಬಗ್ಗೆ ಸಿಪಿಐ(ಎಂ) ಇದುವರೆಗೆ ಯಾವುದೇ ನಿರ್ಧಾರಕ್ಕೆ

ಪುಟ 11 ಕ್ಕೆ

ತೀವ್ರಗೊಳ್ಳುತ್ತಿರುವ ವೃತ್ತಿ ಶಿಕ್ಷಣ ಬಿಕ್ಕಟ್ಟು...

ಪುಟ 4 ರಿಂದ

ಶಿಕ್ಷಣ ಶುಲ್ಕಗಳನ್ನು ಇನ್ನೂ ನಿರ್ಧರಿಸಲಾಗಿಲ್ಲ. ಕಳೆದ ವರ್ಷ ಈ ಶುಲ್ಕಗಳನ್ನು ಅಘಾತಕಾರಿ ಸ್ವರೂಪದಲ್ಲಿ ಏರಿಸಲಾಗಿತ್ತು. ಈ ವರ್ಷ ಮತ್ತೆ ಶುಲ್ಕಗಳನ್ನು ಏರಿಸಬೇಕೆಂಬ ತೀವ್ರ ಒತ್ತಡವನ್ನು 'ಶುಲ್ಕ ನಿಗದಿ ಸಮಿತಿ'ಯ ಮೇಲೆ ಖಾಸಗಿ ಆಡಳಿತ ಮಂಡಳಿಗಳು ಹೇರುತ್ತಿವೆ. ಇದೇ ಸುಪ್ರೀಂ ಕೋರ್ಟ್‌ನ 'ಆಶೀರ್ವಾದ'ದಿಂದ ಈ ವರ್ಷ ಒಂದೊಂದು ಕಾಲೇಜಿಗೆ ಒಂದೊಂದು ಸ್ವರೂಪದ ಶುಲ್ಕ ನಿಗದಿಯಾಗಲಿದೆ.

ಮುಂದೆ ವಿದ್ಯಾರ್ಥಿ - ಪೋಷಕರ ಮೇಲೆ ಬಂದೆರಗಲಿರುವ ಬರ ಸಿಡಿಲಿಗೆ ಸಾಕ್ಷಿಯಾಗಿ ಈಗ ಸ್ನಾತಕೋತ್ತರ ವೈದ್ಯಕೀಯ ಶುಲ್ಕ ಏರಿಕೆಯ ಪ್ರಕಟಣೆ ಬಂದಿದೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಕಾಲೇಜುಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಕೋರ್ಸಿಗೆ ವಾರ್ಷಿಕ 20 ಸಾವಿರ ರೂ. ಶುಲ್ಕ ಇದ್ದದ್ದು ಈಗ 2 ಲಕ್ಷಕ್ಕೆ ಏರಿಸಲಾಗಿದೆ. ದಂತ ವೈದ್ಯಕೀಯ ಶುಲ್ಕವನ್ನು 5 ಸಾವಿರದಿಂದ 1.5 ಲಕ್ಷಕ್ಕೆ ಏರಿಸಲಾಗಿದೆ. ಈ ಶುಲ್ಕವೂ ಅಂತಿಮವೇನಲ್ಲ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಈಗ ರಾಜ್ಯದಲ್ಲಿ ನೇಮಕ ಮಾಡಲಾಗಿರುವ ನಿವೃತ್ತ ನ್ಯಾಯಾಧೀಶರುಗಳಾದ ಎ.ಬಿ.ಮುರಗೋಡ್ ಹಾಗೂ ಎಸ್.ವೆಂಕಟರಾಮನ್ ನೇತೃತ್ವದ ಶುಲ್ಕ ನಿಗದಿ ಸಮಿತಿಗಳು ನೀಡಿರುವ ತಾತ್ಕಾಲಿಕ ನಿರ್ದೇಶನಗಳಿವು. ಸದ್ಯದಲ್ಲಿಯೇ ಅಂತಿಮ ಶುಲ್ಕ ಸ್ವರೂಪವನ್ನು ಪ್ರಕಟಿಸಲಿದ್ದು ಶುಲ್ಕ ಮತ್ತಷ್ಟು ಏರಿಕೆಯಾಗಲಿದೆ ಎಂದು ಹೇಳಲಾಗತ್ತಿದ್ದು ಎಂ.ಡಿ.ಕೋರ್ಸಿಗೆ ಆಡಳಿತ ಮಂಡಳಿಗಳು 5-6 ಲಕ್ಷದವರೆಗೆ ಶುಲ್ಕ ನಿಗದಿಗಾಗಿ ಒತ್ತಾಯಿಸುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ.

ಏಪ್ರಿಲ್ 28 ಶುಲ್ಕ ಏರಿಕೆ -ವಿರೋಧಿಸಿ ಎಸ್.ಎಫ್.ಐ -ಡಿವೈಎಫ್‌ಐ ಗಳ ಪ್ರತಿಭಟನೆ

ಏಪ್ರಿಲ್ 28 ರಂದು ಈ ಅಘಾತಕಾರಿ ಶುಲ್ಕ ಏರಿಕೆಯ ವಿರುದ್ಧ ಎಸ್ಸೆಫೈ ಮತ್ತು ಡಿವೈಎಫ್‌ಐ ಸಂಘಟನೆಗಳು ಜಂಟಿಯಾಗಿ ಬೆಂಗಳೂರಿನ ಸಿಇಟಿ ಘಟಕದ ಮುಂದೆ ಪ್ರತಿಭಟನೆ ನಡೆಸಿ, ಶುಲ್ಕ ಏರಿಕೆ ವಾಪಸ್ ಪಡೆಯಲು ಒತ್ತಾಯಿಸಿದವು.

ಪ್ರತಿಭಟನೆಯ ಸಂದರ್ಭದಲ್ಲಿ ಪ್ರತಿಭಟನಾಕಾರರು ಕಂಡ ದೃಶ್ಯಗಳು ಮನಕರಗುವಂತಿವೆ. ಕೋಲಾರದ ಸರ್ಕಾರಿ ಶಾಲೆಯೊಂದರಲ್ಲಿ ಶಿಕ್ಷಕರಾಗಿರುವ ಪೋಷಕರೊಬ್ಬರು ಪ್ರತಿಭಟನೆಯ ಸಂದರ್ಭದಲ್ಲಿ ಮಾತನಾಡಿದರು. ಅವರ ಮಗಳಿಗೆ ಎಂ.ಡಿ. ಕೋರ್ಸಿಗೆ ಸೇರುವ ಎಲ್ಲಾ ಶೈಕ್ಷಣಿಕ ಅರ್ಹತೆ ಇದೆ. ಆದರೆ ಈಗ ತಾತ್ಕಾಲಿಕವಾಗಿ ನಿಗದಿಯಾಗಿರುವ 2 ಲಕ್ಷ ಶುಲ್ಕವನ್ನು ಕೊಡಲೂ ಶಕ್ತಿ ಇಲ್ಲ. ಹೀಗಾಗಿ ಪ್ರವೇಶದ ಆಸೆ ಬಿಟ್ಟು ವಾಪಸ್ ತೆರಳುತ್ತಿರುವುದಾಗಿ ಅವರು ತಮ್ಮ ನೋವು ತೋಡಿಕೊಂಡರು.

ಇದು ವಾಪಸ್ ಹೋಗುವವರ ಕಥೆಯಾದರೆ, ಕೌನ್ಸಿಲಿಂಗ್ ಮುಗಿಸಿ ಖಾಸಗಿ ಕಾಲೇಜುಗಳಿಗೆ ಪ್ರವೇಶ ಪಡೆದುಕೊಳ್ಳಲು ಹೋದವರ ಕತೆ ಬೇರೆಯೇ ಇದೆ. ಸಿಇಟಿ ಘಟಕದ ನಿರ್ದೇಶನ ಒಂದಾದರೆ ಖಾಸಗಿ ಕಾಲೇಜುಗಳ ಮಾಲೀಕರು ಹೇಳುವುದೇ ಬೇರೆ.

ಎಂ.ಎಸ್. ರಾಮಯ್ಯ ಕಾಲೇಜಿಗೆ ಹೋದ ವಿದ್ಯಾರ್ಥಿಗೆ ಆಡಳಿತ ಮಂಡಳಿಯವರು 6 ಲಕ್ಷ ಕೊಡಲು ಒತ್ತಾಯಿಸಿದೆ. ಸೆಂಟ್ ಜಾನ್ ಮೆಡಿಕಲ್ ಕಾಲೇಜಿಗೆ ಹೋದ ವಿದ್ಯಾರ್ಥಿಗಳಿಗೆ ಯಾರಿಗೂ ಕಾಲೇಜಿಗೆ ಪ್ರವೇಶವನ್ನೇ ನೀಡಿಲ್ಲ! ತಮ್ಮದು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಾದ್ದರಿಂದ ತಮ್ಮದೇ ನಿಷ್ಕರ್ಷೆಯಂತೆ ತಾವು ಈಗಾಗಲೇ ತಮ್ಮ ಕಾಲೇಜಿಗೆ ವಿದ್ಯಾರ್ಥಿಗಳನ್ನು ತುಂಬಿಕೊಂಡಿರುವುದಾಗಿ ಅವರು ವಾದಿಸುತ್ತಿದ್ದಾರೆ.

ಮತ್ತೆ ಹಲವು ಕಾಲೇಜುಗಳು, ಒಂದೊಮ್ಮೆ ಅಂತಿಮ ಶುಲ್ಕ ದುಬಾರಿಯಾಗಿ ವಿದ್ಯಾರ್ಥಿಗಳು ಪ್ರವೇಶ ರದ್ದು ಮಾಡಲು ಬಯಸಿದರೆ ಇಡೀ ಕೋರ್ಸಿನ (2-3 ವರ್ಷಗಳು) ಪೂರ್ಣ ಶುಲ್ಕ ಪಾವತಿ ಮಾಡಿ ಪ್ರವೇಶ ರದ್ದು ಮಾಡಿಕೊಳ್ಳುತ್ತೇವೆಂದು ವಿದ್ಯಾರ್ಥಿಗಳನ್ನು ಮುಚ್ಚಳಿಕೆ ಬರೆದುಕೊಡಲು ಒತ್ತಾಯಿಸುತ್ತಿದ್ದಾರೆ.

ತಾಂತ್ರಿಕ-ವೈದ್ಯಕೀಯ ಪದವಿ ಕೋರ್ಸುಗಳ ಪ್ರವೇಶ ಸಮಯದಲ್ಲಿ ಏನೇನು ತಕರಾರುಗಳನ್ನು ಎತ್ತುವರೋ - ಯಾವ ಯಾವ ಗೊಂದಲ ಸೃಷ್ಟಿಸುವರೋ ಎಂಬ ಆತಂಕ ಈಗ ವಿದ್ಯಾರ್ಥಿ ಪೋಷಕರಲ್ಲಿ ತೀವ್ರಗೊಂಡಿದೆ.

ಮೇ 15, 2004 ರಾಜ್ಯವ್ಯಾಪಿ ಪ್ರತಿಭಟನೆಗೆ ಎಸ್‌ಎಫ್‌ಐ -ಡಿವೈಎಫ್‌ಐ ಕರೆ

ಈಗ ಏರಿಸಲಾಗಿರುವ ಎಂಡಿ-ಎಂಡಿಎಸ್ ಶುಲ್ಕಗಳನ್ನು ಕಡಿತಗೊಳಿಸಬೇಕು, ತಾಂತ್ರಿಕ-ವೈದ್ಯಕೀಯ-ದಂತ ವೈದ್ಯಕೀಯ ಪದವಿ ಶುಲ್ಕಗಳನ್ನು ಸಮಾಜಿಕವಾಗಿ ದುರ್ಬಲ ವಿಭಾಗದ ವಿದ್ಯಾರ್ಥಿಗಳಿಗೂ ಎಟಕುವಂತೆ ನಿಗದಿಪಡಿಸಬೇಕು - ಖಾಸಗಿ ಆಡಳಿತ ಮಂಡಳಿಗಳ ಉದ್ಧಟತನದ ವರ್ತನೆಗಳನ್ನು ಸರ್ಕಾರ ನಿಯಂತ್ರಿಸಬೇಕು - ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಕೇಂದ್ರೀಯ ಶಾಸನ ರಚಿಸಬೇಕು. ಹಾಗೂ ಮೂಲಭೂತವಾಗಿ ಉನ್ನತ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಸೇರಿದಂತೆ ಶಿಕ್ಷಣ ನೀಡುವ ಜವಾಬ್ದಾರಿಯಿಂದ ಸರ್ಕಾರಗಳು ಜಾರಿಕೊಳ್ಳದೆ, ಸಮಾಜದ ಅಗತ್ಯಗಳಿಗೆ ತಕ್ಕಂತೆ ವೈದ್ಯಕೀಯ- ತಾಂತ್ರಿಕ ಕಾಲೇಜುಗಳನ್ನು ಸರ್ಕಾರವೇ ಆರಂಭಿಸ ಬೇಕು. ಹೆಚ್ಚು ಹೆಚ್ಚು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸಮಾಜದ ಅಗತ್ಯಕ್ಕೆ ತಕ್ಕಂತೆ ಆರಂಭಿಸಬೇಕು.

ಈ ಮೇಲಿನ ಪ್ರಮುಖ ನಾಲ್ಕು ಬೇಡಿಕೆಗಳ ಆಧಾರದಲ್ಲಿ ಮೇ 15 ರಂದು ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲು ಎಸ್‌ಎಫ್‌ಐ-ಡಿವೈಎಫ್‌ಐ ರಾಜ್ಯ ಸಮಿತಿಗಳು ಕರೆ ನೀಡಿವೆ. ಮೇ 14 ರಂದು ಕಾಮೆಡ್-ಕೆ ನಡೆಸುವ ಪ್ರವೇಶ ಪರೀಕ್ಷೆಗಳು ನಡೆಯಲಿವೆ. 15 ರಂದು ಈ ಪರೀಕ್ಷೆಗಳು ಮುಗಿಯಲಿದ್ದು ಪರೀಕ್ಷೆಗಳು ಮುಗಿದ ನಂತರ ಇದೇ ಪರೀಕ್ಷಾ ಕೇಂದ್ರಗಳ ಸಮೀಪ ಈ ಪ್ರತಿಭಟನೆ ನಡೆಸಲು ಹಾಗೂ ಈ ಕೂಡಲೇ ವಿದ್ಯಾರ್ಥಿ-ಪೋಷಕರನ್ನು ಸಂಪರ್ಕಿಸಿ ಹೋರಾಟ ಸಮಿತಿಗಳನ್ನು ರಚಿಸಲು ಎಸ್‌ಎಫ್‌ಐ- ಡಿವೈಎಫ್‌ಐ ಸಂಘಟನೆಗಳು ಕರೆ ನೀಡಿವೆ.

ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ಒತ್ತಾಯಿಸಿ ಎಸ್ಸೆಫೈ ನೇತೃತ್ವದಲ್ಲಿ ಡಿಸೆಂಬರ್ 11, 2003 ರಂದು ನಡೆದ ಅಖಿಲ ಭಾರತ ಶೈಕ್ಷಣಿಕ ಮುಷ್ಕರಕ್ಕೆ ರಾಜ್ಯದಲ್ಲಿಯೂ ರಾಷ್ಟ್ರದ ವಿವಿದ ರಾಜ್ಯಗಳಲ್ಲಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಮುಂದೆ, ಈ ಹೋರಾಟವನ್ನು ತೀವ್ರಗೊಳಿಸಬೇಕಿದೆ. ಅಖಿಲ ಭಾರತ ವಿಮಾ ನೌಕರರ ಸಂಘ(AIIEA), BEFI, AILU, FMRAI, CITU, KPRS, AIAWU, JMS ಮುಂತಾದ ಸಂಘಟನೆಗಳು ಕಳೆದವರ್ಷದ ಚಳುವಳಿಯನ್ನು ಬೆಂಬಲಿಸಿ ಪಾಲ್ಗೊಂಡಿದ್ದು ಮುಂದೆ ಈ ಜನಪರ ಸಂಘಟನೆಗಳ ಸಹಕಾರವನ್ನು ನಿರೀಕ್ಷಿಸಲಾಗಿದೆ.

ಈ ನಡುವೆ ಶುಲ್ಕ ಏರಿಕೆ ಪ್ರಶ್ನಿಸಿ ವಿದ್ಯಾರ್ಥಿಗಳು ರಾಜ್ಯ ಹೈಕೋರ್ಟಿನ ಮೊರೆ ಹೋಗಿದ್ದರು. ಈ ವಿಚಾರದಲ್ಲಿ ಮಧ್ಯ ಪ್ರವೇಶಿಸಲು ಸ್ಪಷ್ಟವಾಗಿ ನಿರಾಕರಿಸಿರುವ ಕೋರ್ಟ್ 'ಶುಲ್ಕ ಏರಿಕೆ ಸಮಿತಿ'ಯ ತೀರ್ಮಾನ ಅಂತಿಮ ಎಂದಿದೆ. ಶುಲ್ಕ ನಿಗದಿ ಸಮಿತಿಗೆ ಸುಪ್ರೀಂಕೋರ್ಟ್ ತೀರ್ಪು ಆಧಾರವಾಗಿದ್ದು, ಸುಪ್ರೀಂಕೋರ್ಟ್ ಕಾಲೇಜಿನ ಮೂಲಭೂತ ಸೌಕರ್ಯ, ಶಿಕ್ಷಕ- ನೌಕರರ ವೇತನ, ಸಂಸ್ಥೆಯ ಭವಿಷ್ಯದ ಯೋಜನೆಗಳ ಆಧಾರದಲ್ಲಿ ಶುಲ್ಕ ನಿಗದಿ ಮಾಡಬೇಕೆಂದು ತೀರ್ಪು ನೀಡಿದೆ. ನ್ಯಾಯಾಲಯಗಳ ಮಿತಿಯಲ್ಲಿ ಈ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ, ಜನ ಚಳುವಳಿಗಳು ಹಾಗೂ ಆ ಮೂಲಕ ಕೇಂದ್ರೀಯ ಶಾಸನವೇ ಸಮಸ್ಯೆಗೆ ಪರಿಹಾರ ಎಂಬುದು ಮತ್ತೊಮ್ಮೆ ಸಿದ್ದವಾಗಿದೆ. ಜಾಗತೀಕರಣದ ನೀತಿಗಳ ಭಾಗವಾಗಿ ಬರುತ್ತಿರುವ ಶಿಕ್ಷಣದ ನಗ್ನ ವ್ಯಾಪಾರೀಕರಣವನ್ನು ವಿದ್ಯಾರ್ಥಿ-ಪೋಷಕರ, ಶಿಕ್ಷಣ ಪ್ರೇಮಿಗಳ ಬೃಹತ್ ಆಂದೋಲನದಿಂದ ಪ್ರತಿರೋಧಿಸಬೇಕಿದೆ.



ನಮ್ಮ ಬಡವರಿಗೆ ಉಪವಾಸ ವಿದೇಶಿಯರಿಗೆ ರಸದೌತಣ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜನ ಸಾಮಾನ್ಯರ ಒಳಿತಿಗಾಗಿ ಏನು ಮಾಡುತ್ತಿದೆ ಎಂಬುದಕ್ಕೆ ಇದೊಂದೇ ನೀತಿ ಸಾಂಕೇತಿತ ಉದಾಹರಣೆಯಾಗಿದೆ.

ಆಹಾರ ಧಾನ್ಯಗಳ ರಫ್ತು

ನಾವು ಆಹಾರ ಧಾನ್ಯಗಳ ರಫ್ತುದಾರರು ಎಂದು ಹೇಳಿಕೊಳ್ಳಲು ಇಡೀ ದೇಶಕ್ಕೇ ಗರ್ವ ಎನಿಸಬಹುದಾಗಿತ್ತು. ನಮ್ಮ ದೇಶದ ಎಲ್ಲ ಜನರ ಹೊಟ್ಟೆ ತುಂಬಿದ ಮೇಲೆ ನಾವು ರಫ್ತು ಮಾಡಿರುತ್ತಿದ್ದರೆ ಹಾಗಾಗಿಲ್ಲ. ನಾವು ರಫ್ತು ಮಾಡಿದ್ದೀವೆ ನಿಜ. ಇಸವಿ ಡಿಸೆಂಬರ್ 2000ದ ಡಿಸೆಂಬರ್ ನಂತರ ಇಂದಿನವರೆಗೆ ನಾವು ಸುಮಾರು 33 ದಶಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ರಫ್ತು ಮಾಡಿದ್ದೇವೆ. ಆದರೆ ಈ ರಫ್ತಿನ ಬೆಲೆ?

ಸಹಸ್ರಾರು ಜನ ರೈತರು ದೇಶದಾದ್ಯಂತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲಕ್ಷಾಂತರ ಜನ ಹಸಿವಿನನಿಂದ ನರಳಿದ್ದಾರೆ. ಹಸಿವಿನಿಂದ ಸತ್ತವರ ಸಂಖ್ಯೆಯೇನೂ ಕಡಿಮೆಯಲ್ಲ. ಅಲ್ಲದೆ ರಫ್ತಾದ ಆಹಾರ ಧಾನ್ಯಗಳನ್ನು ಮೂರು ಕಾಸಿಗೆ ರಫ್ತು ಮಾಡಲಾಗಿದೆ. ಇದು ಈ ಸರ್ಕಾರದ ರಫ್ತಿನ ತೆವಲು. ಈ ತೆವಲಿಗೆ ನಮ್ಮ ದೇಶ ತೆತ್ತ ಬೆಲೆ ಅಗಾಧವಾದದ್ದು ಎಷ್ಟು ಜನ ಮಹಿಳೆಯರು/'ಮಕ್ಕಳು ಈ ಪರಿಸ್ಥಿತಿಯಿಂದಾಗಿ ನರಕಯಾತನೆ ಅನುಭವಿಸಿದರು ಎಂಬುದನ್ನು ನವ... ಮಾಧ್ಯಮಗಳು ವರದಿ ಮಾಡಿಲ್ಲ.

ಈ ನೀತಿ ಎಷ್ಟು ಜನಪರ ಈ ಸರ್ಕಾರ ಎಂಬುದನ್ನು ಸ್ಪಷ್ಟವಾಗಿ ಎತ್ತಿ ತೋರಿದೆ. ಕೆಳಗಿನ ಕೋಷ್ಟಕ ಈ ರಫ್ತಿನ ಸಾಧನೆಯ ವಿವರಗಳನ್ನು ನೀಡುತ್ತದೆ.

ಆಹಾರ ಧಾನ್ಯಗಳ ರಫ್ತು(ರಫ್ತು ಟನ್‌ಗಳಲ್ಲಿ)

ಇಸವಿ	ಗೋಧಿ	ಅಕ್ಕಿ	ಒಟ್ಟು
2000-01	20.43	0.42	20.85
2001-02	39.65	23.50	63.15
2002-03	67.93	80.71	148.64
2003-04	70.69	30.71	101.40
ಒಟ್ಟು	198.70	135.54	334.04

ಗೋಣಿ ಚೀಲವೊ ಪ್ಲಾಸ್ಟಿಕ್ ಚೀಲವೋ?

ಆಹಾರ ಧಾನ್ಯಗಳನ್ನು ಗೋಣಿ ಚೀಲಗಳಲ್ಲಿಯೇ ತುಂಬಬೇಕು ಹೊರತು ಪ್ಲಾಸ್ಟಿಕ್ ಚಿಲಗಳಲ್ಲಲ್ಲ ಎಂಬ ಕೇಂದ್ರ ಸರ್ಕಾರದ ಕಾನೂನು ಇದೆ. ಗೋಣಿ ಚೀಲಗಳಲ್ಲಿ ತುಂಬಿಟ್ಟರೆ ಮಾತ್ರ ಆಹಾರಧಾನ್ಯಗಳು ಚೆನ್ನಾಗಿರುತ್ತವೆ ಇಲ್ಲದಿದ್ದರೆ ಇಲ್ಲ ಎಂದೇನೂ ಅಲ್ಲ. ಗೋಣಿ ಚೀಲಗಳನ್ನು ಉಪಯೋಗಿಸಿದರೆ ಸೆಣಬು ಉದ್ದಿಮೆಗೆ ನೆರವಾಗುತ್ತದೆ. ನಲವತ್ತು ಲಕ್ಷ ಸೆಣಬು ಬೆಳೆಗಾರರು ಮತ್ತು 2.5 ಲಕ್ಷ ಕೆಲಸಗಾರರು ಈ ಉದ್ದಿಮೆ ಅವಲಂಬಿಸಿದ್ದಾರೆ.

ಇದಲ್ಲದೆ ವಿಶ್ವ ಆರೋಗ್ಯ ಸಂಸ್ಥೆಯೂ ಸಹ ಗೋಣೀ ಚೀಲಗಳನ್ನೇ ಉಪಯೋಗಿಸುವುದು ಒಳ್ಳೆಯದೆಂದಿದೆ.

ಈಗ ಕೇಂದ್ರ ಸರ್ಕಾರ ಶೇ.40 ರಷ್ಟು ಪ್ಲಾಸ್ಟಿಕ್ ಚೀಲಗಳನ್ನು ಬಳಸಬಹುದೆಂದಿದೆ. ಇದರಿಂದಾಗಿ, ಸೆಣಬು ಬೆಳೆಗಾರರು ಮತ್ತು ಕಾರ್ಮಿಕರಿಗೆ ಹೊಡತ ಬೀಳುತ್ತದೆ. ಬೆಳೆಗಾರರು ಮತ್ತು ಕಾರ್ಮಿಕರ ಹಿತಾಶಕ್ತಿಗಳನ್ನು ಶುರುವಿನಿಂದಲೇ ಗಾಳಿಗೆ ತೂರಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈ ಸೆಣಬು ಉದ್ದಿಮೆ ಮೇಲೆ ಅಲಂಬಿಸಿರುವವರ ಹಿತಾಸಕ್ತಿಗಳನ್ನು ಏಕೆ ಕಾಯ್ದೀತು

ಇ. ರೂಪದ ಜ್ಞಾನದ ಗುತ್ತಿಗೆ?

ಸಾಮ್ರಾಜ್ಯಶಾಹಿಗಳು ಇಡೀ ಜಗತ್ತನ್ನೇ ಗುತ್ತೆ ತೆಗೆದುಕೊಂಡು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಸದಾ ಹವಣಿಸುತ್ತಿರುತ್ತಾರೆ. ಈಗ ಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿ ಆಗಿರುವ ಬೆಳವಣಿಗೆಗಳನ್ನು ತಮ್ಮ ಇಂತಹ ಉದ್ದೇಶಕ್ಕೆ ಬಳಸಿಕೊಳ್ಳಲು ಆಗಲೇ ಅವರು ಹವಣಿಸ ತೊಡಗಿದ್ದಾರೆ.

ಇದುವರೆಗೆ ಮುದ್ರಿತ ಪುಸ್ತಕಗಳು ವಾಚನಾಲಯುಗಳ ಸರಕುಗಳಾಗಿದ್ದವು. ಎಲೆಕ್ಟ್ರಾನಿಕ್ ಕ್ರಾಂತಿಯಿಂದಾಗಿ ಮುಂಬರುವ ದಿನಗಳಲ್ಲಿ ಪುಸ್ತಕಗಳು ಮುದ್ರಿತ ಪುಸ್ತಕಗಳ ರೂಪದಲ್ಲಿ ದೊರೆಯುವ ಬದಲು ಇ-ರೂಪದಲ್ಲಿ ಅಂದರೆ ಎಲೆಕ್ಟ್ರಾನಿಕ್ ರೂಪದಲ್ಲಿ ಅಂದರೆ ಕಂಪ್ಯೂಟರ್‌ಗಳಲ್ಲಿ ಲಭ್ಯವಾಗ ತೊಡಗುತ್ತವೆ. ಈಗಾಗಲೇ ಹಲವು ಅಮೇರಿಕದ ಮತ್ತು ಇತರ ದೇಶಗಳ ಮುಖ್ಯ ನಿಯತ ಕಾಲಿಕಗಳು ಇ-ರೂಪದಲ್ಲೇ ಪ್ರಕಟವಾಗುತ್ತಿವೆ.

ಇದು ಹೆಚ್ಚುತ್ತ ಹೋದಂತೆಲ್ಲ ವಾಚನಾಲಯಗಳ ರೂಪವೆ ಬದಲಾಗುತ್ತವೆ. ಪುಸ್ತಕಗಳನ್ನು ಓದುವ ಹಲವು ಅನುಕೂಲಗಳೂ ಇರುತ್ತವೆ ಉದಾಹರಣೆಗೆ ಪತ್ತೆದಾರೀ ಕಾದಂಬರಿ ಓದುವ ಓದುಗ ಬೇಗ ಬೇಗ ಪುಟ ತಿರುವುತ್ತ ತನ್ನ ಕುತೂಹಲದ ವಿಷಯಗಳನ್ನೂ ಓದಬಹುದು. ಈ ಕಾದಂಬರಿಯ ಜೊತೆಗೆ ಶಬ್ದ/ನೋಟಗಳನ್ನು ಕಾಣಬಹುದು. ಇಂತಹ ಇನ್ನೂ ಹಲವು ವಿಶೇಷತೆಗಳು ಇ-ರೂಪದ ಕಾದಂಬರಿ/ಪುಸ್ತಕಗಳ ಜೊತೆಗೆ ಬರುತ್ತವೆ. ಹಾಗೆ ಬಂದಾಗ ಪುಸ್ತಕಗಳು ಹಳೆಯ ಹೊರೆಗಳಾಗಿಬಿಡುತ್ತವೆ.

ಇಂತಹ ಬೆಳವಣಿಗೆಯನ್ನು ತೀವ್ರವಾಗಿ ಬೆಳೆಸಲು ಆಸಕ್ತಿ ತೋರುವ ಇ-ಬಂಡವಾಳಿಗರು ನಂತರ ಎಲ್ಲ ಪುಸ್ತಕಗಳ ಕಾಪಿರೈಟುಗಳನ್ನು ತೆಗೆದುಕೊಂಡು ಪ್ರಕಾಶನ ಮಾಡುತ್ತಾರೆ. ಇವುಗಳನ್ನು ಓದಬಯಸುವವರು ಅಪಾರ ಬೆಲೆ ತೆರಲೇ ಬೇಕಾಗುತ್ತದೆ. ವಿವಿಧ ಸ್ಥರದ ಜನರಿಗೆ ಬೇರೆ ಬೇರೆ ತರಹದ ಓದು ಅವರ ಸ್ತರಕ್ಕೆ ತಕ್ಕಂತೆ ಅಂದರೆ ಒಳ್ಳೆಯ ಬರಹಗಳು ಶ್ರೀಮಂತರಿಗೆ ಕಳಪೆ ಬರಹಗಳು ಅಲ್ಪ ಹಣವಿರುವವರಿಗೆ ಇತ್ಯಾದಿ ಸಾಧ್ಯತೆಗಳು ಆಗ ನಿಜವಾಗತೊಡಗುತ್ತವೆ.

ಇಂತಹ ಸ್ಥಿತಿ ಬಂದಾಗ ಸಾಮ್ರಾಜ್ಯಶಾಹಿಗಳು ಯಾರ್‍ಯಾರು ಏನೇನು ಓದಬೇಕು ಎಂಬುದನ್ನು ನಿರ್ಧರಿಸುತ್ತಾರೆ.

ಇಂತಹ ಬೆಳವಣಿಗೆಗೆ ವಿರೋಧವಿಲ್ಲವೆಂದು ಕೊಳ್ಳಬೇಡಿ. ಆಗಲೇ ಉತ್ತಮ ಪುಸ್ತಕಗಳು ಆಧುನಿಕ ತಂತ್ರಜ್ಞಾನದ ಮೂಲಕ ಮುಫತ್ತಾಗಿ ದೊರೆಯಬೇಕೆಂಬ ದೊಡ್ಡ ಚಳುವಳಿಯೇ ಅಮೇರಿಕದಲ್ಲಿ ಪ್ರಾರಂಭವಾಗಿದೆ. ಇಂತಹ ಚಳುವಳಿಗಳು ಬಲಗೊಳ್ಳಬೇಕಾದ ಅವಶ್ಯಕತೆಯಿದೆ.

ಸಿಐಟಿಯು ಪ್ರಣಾಳಿಕೆ.....

ಪುಟ 7 ರಿಂದ

ಮೌಲ್ಯಗಳ ಮೂರ್ಖ ವಿಕೃತಿಗಳನ್ನು ಕಂಡಿದೆ. ಇದರ ಜೊತೆಗೆ ಆರ್ಥಿಕ ರಂಗದಲ್ಲಿನ ವಿನಾಶ, ಬಿಜೆಪಿ ನೇತೃತ್ವದ ಕೂಟ ದೇಶದ ಶತ್ರು, ಜನಗಳ ಶತ್ರು ಎಂಬುದನ್ನು ಬಯಲಿಗೆಳಿದಿದೆ.

ಸಾಮಾಜಿಕ ಮತ್ತು ರಾಜಕೀಯ ರಂಗದಲ್ಲಿ, ಇಂತಹ ಶ್ರೀಮಂತರ-ಪರವಾದ ನೀತಿಗಳಿಂದ ಜನರಲ್ಲಿ ಅಸಂತೃಪ್ತಿ ಹೆಚ್ಚುತ್ತಿರುವಾಗ, ಬಿಜೆಪಿ ಕೂಟ ಅಧಿಕಾರದಲ್ಲಿ ಉಳಿಯುವ ಲೆಕ್ಕಾಚಾರದಿಂದ ಹೊಲಸು ತಂತ್ರಗಳನ್ನು ಅನುಸರಿಸುತ್ತಿದೆ. ಮಾನವ ಜೀವಗಳನ್ನೇ ಒತ್ತೆಯಿಟ್ಟು, ಕೋಮು ಗಲಭೆಗಳ ಮೂಲಕ ಮತದಾರರ ನಡುವೆ ಒಂದು ವಿಭಿನ್ನ ವಿಭಜನಾಕಾರೀ ಧ್ರುವೀಕರಣ ತರಲು ಪ್ರಯತ್ತಿಸುತ್ತಿದೆ. ಗುಜರಾತದ ದಂಗೆಗಳು, ಅದಕ್ಕೆ ಪೂರ್ವಭಾವಿಯಾದ ಗೋಧ್ರಾ ಹತ್ಯಾಕಾಂಡ ಆರ್‌ಎಸ್‌ಎಸ್‌ನ ಕೈವಾಡವಾಗಿದ್ದು ಗುಜರಾತಿನಲ್ಲಿ ಬಿಜೆಪಿಯುನ್ನು ರಾಜಕೀಯ ಅಧಿಕಾರದಲ್ಲಿ ಉಳಿಸಲು ಮತ್ತು ಇತರ ರಾಜ್ಯಗಳಲ್ಲಿ ಸರ್ಕಾರಗಳನ್ನು ರಚಿಸಲು ನೆರವಾಗುವಂತೆ ನಡೆಸಿದ ಕೃತ್ಯಗಳು.

ಈಗ ಚುನಾವಣೆಗಳ ತಯಾರಿಯಲ್ಲಿ ಬಿಜೆಪಿ ಕೂಟ ಕೋಮುವಾದಿ ಭಾವೋದ್ವೇಗವನ್ನು ಬಡಿದೆಬ್ಬಿಸಲು ಹಗಲಿರುಳು ದುಡಿಯುತ್ತಿದೆ. ವಿಹೆಚ್‌ಪಿ, ಭಜರಂಗದಳ ಇತ್ಯಾದಿ ಸಂಘ ಪರಿವಾರದ ಸಂಘಟನೆಗಳು ಅಯೋಧ್ಯೆಯಲ್ಲಿ ರಾಮದೇವಸ್ಥಾನದ ಹೆಸರಲ್ಲಿ ಭಾವೋದ್ವೇಗವನ್ನು ಪುನಃ ಕೆರಳಿಸಲು ಹಿಂದುತ್ವದ ಹೆಸರನ್ನು ಹೆಮ್ಮೆಯಿಂದ ಹೇಳುತ್ತಾ ಪ್ರಯತ್ನಿಸುತ್ತಿದ್ದಾರೆ. ಅದರ ರಾಜಕೀಯ ಸಂಘಟನೆಯಾದ ಬಿಜೆಪಿಯ ಮುಖಂಡರು ಮಧ್ಯಸ್ಥಿಕೆದಾರರ ಸೋಗು ಹಾಕುತ್ತಾ ಜನಗಳಲ್ಲಿ ಗೊಂದಲ ಉಂಟು ಮಾಡಿ ಮತಗಳನ್ನು ಗಳಿಸಲು ಪ್ರಯತ್ನಿಸುತ್ತಿದ್ದಾರೆ. ಆರ್ಥಿಕ ನೀತಿಯ ಪ್ರಶ್ನೆಗಳ ಮೇಲೂ ಅದೇ ತಂತ್ರವನ್ನು ಬಳಸಲಾಗುತ್ತಿದೆ. ಆರ್‌ಎಸ್‌ಎಸ್ ಸಂಸ್ಥೆಗಳಾದ ಸ್ವದೇಶೀ ಜಾಗರಣಾ ಮಂಚ್ ಮತ್ತು ಬಿಎಂಎಸ್‌ಗಳು ಉದಾರೀಕರಣ, ಜಾಗತೀಕರಣದ ಆರ್ಥಿಕ ಧೋರಣೆಗಳ ವಿರುದ್ಧ ಸಾರ್ವಜನಿಕವಾಗಿ ವಿಷ ಕಾರುತ್ತವೆ. ಆದರೆ ಈ ನೀತಿಗಳ ವಿರುದ್ಧ ಯಾವುದೇ ನಿರ್ದಿಷ್ಟ ಕಾರ್ಯಾಚರಣೆ ನಡೆದಾಗ ದೂರ ನಿಲ್ಲುತ್ತವೆ.

ಕಾರ್ಮಿಕ ವರ್ಗ ಮತ್ತು ಶ್ರಮಜೀವಿ ಜನತೆ ಮತ್ತೆ ಈ ಬಿಜೆಪಿ ನೇತೃತ್ವದ ಕೂಟದಿಂದ ಮೋಸ ಹೋಗಬಾರದು. ಎನ್‌ಡಿಎ ಕೂಟವನ್ನು ಮುಂಬರುವ ಚುನಾವಣೆಗಳಲ್ಲಿ ಸೋಲಿಸಿ ಅವರು ಈ ಪ್ರಥಮ ಶತ್ರುವಿಗೆ ಪಾಠ ಕಲಿಸಬೇಕು.

◆ ◆ ◆ ◆ ◆

ಮೇ ದಿನ 2004 ನವಉದಾರವಾದಿ ಜಾಗತೀಕರಣ ಮತ್ತು ಸಾಮಾಜಿಕ ಹಾಗೂ ರಾಜಕೀಯ ರಂಗಗಳಲ್ಲಿ ಅದರ ಪ್ರತಿಪಾದಕರ ವಿರುದ್ಧ ದೇಶವ್ಯಾಪಿ ಐಕ್ಯ ಹೋರಾಟವನ್ನು ಬಲಪಡಿಸುವ ಕರ್ತವ್ಯವನ್ನು ನಮ್ಮ ಮುಂದಿಡುತ್ತದೆ. ನವ-ಉದಾರವಾದೀ ಪರ ನಿಲುವು ದೇಶವನ್ನು ವಿನಾಶದತ್ತ ಒಯ್ಯುತ್ತದೆ. ಉದಾರೀಕರಣ ವಿರೋಧಿ ಹೋರಾಟ ಮಾತ್ರವೇ ದೇಶವನ್ನು ವಿನಾಶದಿಂದ ಉಳಿಸುತ್ತದೆ. ಕಾರ್ಮಿಕವರ್ಗ ತನ್ನನ್ನು ಒಟ್ಟು ಗೂಡಿಸಿಕೊಳ್ಳುವ ಪ್ರತಿಜ್ಞೆ ಗೈದು, ಕೋಮುವಾದಿ ಮತ್ತು ವಿಭಜನಕಾರೀ ಶಕ್ತಿಗಳನ್ನು ಸೋಲಿಸಿ ನಮ್ಮ ಶತ್ರುಗಳನ್ನು, ಅವರ ನೀತಿಗಳನ್ನು ಬಯಲಿಗೆಳೆದು ದೇಶವನ್ನು ರಕ್ಷಿಸುವ ಹೋರಾಟಕ್ಕೆ ನೇತೃತ್ವ ನೀಡಬೇಕು.

ಈ ಹೋರಾಟ ವಿಶ್ವಾದ್ಯಂತ ಹೆಚ್ಚೆಚ್ಚು ಚುರುಕುಗೊಳ್ಳುತ್ತಿದೆ. ಅಂತರ‍್ರಾಷ್ಟ್ರೀಯ ಸೌಹಾರ್ದದ ಈ ದಿನದಂದು ನಾವೆಲ್ಲಾ ಈಗ ನಡೆಯುತ್ತಿರುವ ಹೋರಾಟದಲ್ಲಿ ಸಾಧ್ಯವಾದಷ್ಟು ವ್ಯಾಪಕವಾಗಿ ಜನಗಳನ್ನು ಅಣಿನೆರೆಸುವ ಮೂಲಕ ಇಡೀ ಶ್ರಮಜೀವಿ ಹಾಗೂ ಪ್ರಜಾಪ್ರಭುತ್ವವಾದಿ ಜನಗಳನ್ನು ಏಕೀಕರಣಗೊಳಿಸುವ ಪ್ರತಿಜ್ಞೆ ಗೈಯೋಣ.

ಮೇ ದಿನ 2004ಕ್ಕೆ ವಿಶ್ವಾದ್ಯಂತ ಒಂದು ಏಕೀಕೃತ ಕರೆಯಿದೆ - "**ನಾವು ಎಲ್ಲರಿಗೂ ಉದ್ಯೋಗ ಕೇಳುತ್ತೇವೆ**", "**ಎಲ್ಲರಿಗೂ ಗೌರವಪೂರ್ಣ ಬದುಕು ಬೇಕು**". ಇದನ್ನು ನವ ಉದಾರವಾದಿತನ ಎಂದಿಗೂ ಒದಗಿಸಲಾರದು. ಆದ್ದರಿಂದಲೇ ಇನ್ನೊಂದು ಜಗತ್ತಿನ ಘೋಷಣೆ ಬಂದಿದೆ. "**ಇನ್ನೊಂದು ಜಗತ್ತು**" ಸಾಧಿಸಲು ಸಾಧ್ಯವಿದೆ ಎಂಬ ವಿಶ್ವಾಸ ನಮಗಿದೆ.

ಈ ದಿನ ನಾವು ಅತ್ಯಂತ ಅಗತ್ಯವಾ... ಎಲ್ಲರಿಗೂ ಒಂದು ಭದ್ರ ಉದ್ಯೋಗ ಮತ್ತು ಎಲ್ಲರಿಗೂ ಒಂದು ಗೌರವಪೂರ್ಣ ಬದುಕನ್ನು ಇನ್ನೊಂದು ಜಗತ್ತಿನಲ್ಲಿ ಗಳಿಸಲು ನಡೆದಿರುವ ಜಾಗತಿಕ ಹೋರಾಟದಲ್ಲಿ ನಮ್ಮೆಲ್ಲ ಶಕ್ತಿ-ಸಾಮರ್ಥ್ಯದಿಂದ ಸೇರಿಕೊಳ್ಳುತ್ತೇವೆ ಎಂದು ನಾವು ಪ್ರತಿಜ್ಞೆ ಗೈಯುತ್ತೇವೆ.


❋ನಮ್ಮ ಮಹಾನ್ ದೇಶ ಮತ್ತು ಅದರ ಜನ... ಹಿತಾಸಕ್ತಿಗಳನ್ನು ರಕ್ಷಿಸಲು ಮನ್ನಡೆಯೋಣ!

❋ಕಾರ್ಮಿಕ ವರ್ಗದ ಐಕ್ಯತೆ ಚಿರಾಯುವಾಗಲಿ

❋ಕಾರ್ಮಿಕವರ್ಗದ ಅಂತರ‍್ರಾಷ್ಟ್ರೀಯ ಸೌಹಾರ್ದ ಚಿರಾಯುವಾಗಲಿ

❋ ಸಾಮ್ರಾಜ್ಯಶಾಹಿಗೆ ಧಿಕ್ಕಾರ! ಸಮಾಜವಾ... ಚಿರಾಯುವಾಗಲಿ!

❋ ವಿಶ್ವದ ಕಾರ್ಮಿಕರೇ ಒಂದಾಗಿ!



ಈ ಜಗತ್ತು ಮಾರಾಟಕ್ಕಿಲ್ಲ, ಅದಕ್ಕಾಗಿ ಬಿಡೆವು - ಮುಂಬೈನಲ್ಲಿ WSF ಸಮಾವೇಶದಲ್ಲಿ...

...ರಾಕ್ : ಮುಂಬರುವ ಭೀಕರತೆಯ ಮುನ್ಸೂಚಕ

...ಕ್ ಹತ್ಯಾಕಾಂಡ ಬಿಜೆಪಿ ...ಟ ಅಧಿಕಾರದಲ್ಲಿ ...ವರಿದರೆ ಮುಂಬರುವ ಭೀಕರ ...ಯ ಮುನ್ಸೂಚಕ. ಅದೇ ರೀತಿ ...ನಲ್ಲಿ ಅಮೆರಿಕನ್ ...ಜ್ಯಶಾಹಿ ನಡೆಸುತ್ತಿರುವ ...ತ್ಪಾದನೆ, ಸಾಮ್ರಾಜ್ಯಶಾಹಿ ...ಕ್ಕೆ ಮುಂದುವರೆದರೆ ಮುಂಬರುವ ... ಪರಿಸ್ಥಿತಿಯ ಮುನ್ಸೂಚಕ. ...ದ ದಿನಕ್ಕೆ ಇರಾಕ್‌ನ ಪರಿಸ್ಥಿತಿ ...ರೀತಿಯಲ್ಲೂ ಹದಗೆಡುತ್ತಿದೆ. ... ಜನತೆಯ ಪ್ರತಿರೋಧ ...ವಾಗಿ ಸಂಘಟಿತವಾಗಿ ...ಯುತ್ತಿದ್ದಾರೆ. ಇರಾಕ್‌ನ್ನು ಆಳುವ ...ಕದ ಕನಸು ಭಗ್ನವಾಗಿದೆ. ಇರಾಕ್ ...ಯ ಪ್ರತಿರೋಧಕ್ಕೆ ಇಡೀ ಜಗತ್ತಿನ ...ಪ್ರಿಯ ಜನತೆ ಬೆಂಬಲಿಸಬೇಕು. ...ಕದ ಪ್ರಯೋಗ ಸಫಲವಾಗದಂತೆ ... ವಹಿಸಬೇಕು.

...ರಾಕ್ ಮೇಲೆ ಅಕ್ರಮವಾಗಿ ಅಧಿಕಾರ ...ತ್ತಿರುವ ಅಮೆರಿಕದ ವಿರುದ್ಧ ಪ್ರತಿರೋಧ ...ತ್ಮಕವಾಗಿಯೂ ಗುಣಾತ್ಮಕವಾಗಿಯೂ ...ಾಗಿ ಬೆಳೆದಿದೆ. ಪ್ರತಿದಿನ ಅಮೆರಿಕದ ವಿರುದ್ಧ ...ರೋಧ ಹೋರಾಟದಲ್ಲಿ ತೊಡಗುವವರ ... ಹೆಚ್ಚುತ್ತಿದೆ. ಚದುರಿದಂತೆ ಅಸಂಘಟಿತರಾಗಿ ...ವ್ಮೆ ಈಗೊಮ್ಮೆ ಪ್ರತಿರೋಧ ಹಿಂದೆ ...ಕೊಳ್ಳುತ್ತಿತ್ತು. ಈಗ ಸಂಘಟಿತವಾಗಿ, ...ವಾಗಿ ಸಂಯೋಜಿತವಾಗಿ ಪ್ರತಿರೋಧದ ...ಪ ಬದಲಾಗಿದೆ. ಇದು ಮಹತ್ವದ ...ಾವಣೆ. ಪ್ರತಿರೋಧದ ತೀವ್ರತೆಯೂ ...ದೆ. ಇದು ಐಕ್ಯ, ಅಖಿಲ ಇರಾಕ್, ...ಯೋಜಿತ ಪ್ರತಿರೋಧ ಆಗಿದೆ. ...ರಿಕದ ದಬ್ಬಾಳಿಕೆಯಲ್ಲಿ ...ಹಿಂಸೆ-ದಬ್ಬಾಳಿಕೆ ಕೊಲೆಗಳಿಗೀಡಾದ ...ಕಿಗಳ ಸಂಬಂಧಿಗಳು ಪ್ರತಿದಿನ ...ರೋಧವನ್ನು ಗಟ್ಟಿಗೊಳಿಸುತ್ತಿದ್ದಾರೆ. ...ಕ್ ಪ್ರತಿರೋಧದ ಮೇಲೆ ದಮನ ...ವ್ರವಾದಷ್ಟು, ಪ್ರತಿರೋಧ ಯುದ್ಧಕ್ಕೆ ಇರಾಕಿ ...ರಾಟಗಾರರು ಭರ್ತಿಯಾಗುತ್ತಿದ್ದಾರೆ.

ಅಮೆರಿಕನ್ ಸಾಮ್ರಾಜ್ಯಶಾಹಿಯ ಶಿಯಾ-ಸುನ್ನಿ ...ರ್ಮಿಕ ಪಂಥದ ಆಧಾರದ ಮೇಲೆ ಇರಾಕ್ ...ತೆಯನ್ನು ಸುಲಭವಾಗಿ ಒಡೆದು ಆಳಬಹುದು ...ಬ ಪ್ರಯತ್ನ ಕೆಲಸ ಮಾಡುವಂತೆ ಕಾಣುತ್ತಿಲ್ಲ. ...ಯಾ-ಸುನ್ನಿಗಳು ತಮ್ಮಲ್ಲೇ ಯಾದವಿ ಕಲಹ ...ಸುತ್ತಾರೆ. ಅಮೆರಿಕನ್ ಸೈನ್ಯವಿಲ್ಲದಿದ್ದರೆ ...ಾಕಿನಲ್ಲಿ ರಕ್ತಪಾತವಾಗುತ್ತದೆ ಎಂಬ ಅಮೆರಿಕನ್ ...ಚಾರ ಪೂರ್ತಿ ಹುಸಿಯಾಗಿದೆ. ಬದಲಾಗಿ ...ದೆಂದಿಗಿಂತಲೂ ಹೆಚ್ಚಿನ ಐಕ್ಯತೆಯಿಂದ ...ಾಕಿಗಳು ಹೋರಾಡುತ್ತಿದ್ದಾರೆ. ಅಮೆರಿಕನ್ ...ಗೇಡಿ ಯೋಜನೆ ಜನಕ್ಕೆ ಅರ್ಥವಾಗಿದೆ. ...ಾದವೀ ಕಲಹ ಆಗುವಂತೆ ಮಾಡುವ ...ಮೆರಿಕನ್ ಪ್ರಯತ್ನಗಳಿಗೆ ಅವರು ಸೊಪ್ಪು ...ಕುತ್ತಿಲ್ಲ.

...ನಿಕರ ಸಾವು - ಆತ್ಮಹತ್ಯೆ



ಸಾಮ್ರಾಜ್ಯಶಾಹಿಯ ಈ ಪ್ರಯೋಗ ವಿಫಲಗೊಳಿಸಿ

ಅಮೆರಿಕನ್ ಸರ್ಕಾರ ಮತ್ತು ಇರಾಕಿನಲ್ಲಿ ಅದರ ಚಮಚಾ ಸರ್ಕಾರ ಎರಡಕ್ಕೂ ಈ ಇರಾಕಿ ಪ್ರತಿರೋಧ ನುಂಗಲಾರದ ತುತ್ತಾಗಿದೆ. ಇರಾಕಿನಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಿ ಹೆಚ್ಚಿನ ಸೈನ್ಯವನ್ನು ವಾಪಸು ಕಳಿಸುವ ಅವರ ಯೋಜನೆ ತಲೆಕೆಳಕಾಗಿದೆ. ಬುಶ್‌ನ ಚುನಾವಣಾ ರಾಜಕೀಯ ಅತಿ ಅಗತ್ಯ ಕ್ರಮಗಳು. ಆದರೆ ಅದು ಸಾಧ್ಯವಾಗುವಂತೆ ಕಾಣುತ್ತಿಲ್ಲ. ಬದಲಾಗಿ ಸೈನ್ಯದ ಸಂಖ್ಯೆ ಹೆಚ್ಚಾಗಬಹುದು. ಇದರ ಜತೆ ಅಮೆರಿಕ ಇನ್ನೊಂದು ಸಮಸ್ಯೆ ಎದುರಿಸುತ್ತಿದೆ. ಜೂನ್ ಹೊತ್ತಿಗೆ ಹೆಚ್ಚಿನ ಸೈನಿಕರು ಅಮೆರಿಕಕ್ಕೆ ವಾಪಸಾಗಬಹುದು ಎಂಬ ಆತಂಕ ಎಲ್ಲಾ ಸೈನಿಕರನ್ನು ಕಾಡುತ್ತಿದೆ. ನಿತ್ಯ ಸಾಯುತ್ತಿರುವ ಸೈನಿಕರ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದರಿಂದ ಸೈನಿಕರ ಮಾನಸಿಕ ಒತ್ತಡ ಜಾಸ್ತಿಯಾಗುತ್ತಿದ್ದು ಹಲವು

> **ಮಿಲಿಟರಿ ಕೆಲಸಕ್ಕೆ ಖಾಸಗಿ 'ಬಾಡಿಗೆ ಸೈನಿಕರು'**
>
> ಇತರ ದೇಶಗಳ ಸೈನ್ಯ ಪಡೆಯಲಾಗಿದೆ, ಬುಶ್ ಸರ್ಕಾರ ಖಾಸಗಿ 'ಬಾಡಿಗೆ ಸೈನಿಕರು'ರನ್ನು ತರಲಾರಂಭಿಸಿದೆ. ಇತ್ತೀಚೆಗಿನ ಅಮೆರಿಕನ್ ಸಾವು ನೋವುಗಳಲ್ಲಿ ಇಂತಹ 'ಬಾಡಿಗೆ ಸೈನಿಕರು' ಬಲಿಯಾಗಿದ್ದಾರೆ. ಇರಾಕಿ ತೈಲ ಸ್ಥಾವರಗಳನ್ನು ಕಾಯುವ ಕೆಲಸ ಈಗಾಗಲೇ ಇಂತಹ ಮಿಲಿಟರಿ ಕಂಪನಿಗೆ ವಹಿಸಲಾಗಿದೆ.

ಅಮೆರಿಕನ್ ಸೈನಿಕರು ಆತ್ಮಹತ್ಯೆ ಮಾಡಿಕೊಳ್ಳುವ ವರದಿಗಳು ದಿನೇ ದಿನೇ ಹೆಚ್ಚುತ್ತಿವೆ. ಅಮೆರಿಕನ್ ಸೈನಿಕರ ಸಾವು-ನೋವು ಹೆಚ್ಚಿದಂತೆ, ಆಂತರಿಕವಾಗಿ ಯುದ್ಧಕ್ಕೆ ಅಮೆರಿಕದಲ್ಲಿ ವಿರೋಧ ತೀವ್ರವಾಗುತ್ತಿದೆ. ಸೈನಿಕರ ಕುಟುಂಬದಲ್ಲಿ ದೊಡ್ಡ ರೀತಿಯಲ್ಲಿ ಯುದ್ಧ - ವಿರೋಧಿ ಚಳುವಳಿ ತೀವ್ರವಾಗಿದೆ. ಈ ವರ್ಷ ಚುನಾವಣಾ ವರ್ಷವಾದ್ದರಿಂದ ಇದು ಬುಶ್ ಸರ್ಕಾರಕ್ಕೆ ತೀವ್ರ ಸವಾಲೊಡ್ಡಿದೆ.

ಅಮೆರಿಕ - ಒಂಟಿ

ಇದು ಸಾಲದೆಂಬಂತೆ ಅಮೆರಿಕನ್ ಸರ್ಕಾರ ರಚಿಸಿದ ದುಷ್ಟಕೂಟ ಒಡೆಯಲಾರಂಭಿಸಿದೆ. ಅಮೆರಿಕಕ್ಕೆ ಇರಾಕ್‌ನಲ್ಲಿ ಸಶಸ್ತ್ರ ಬೆಂಬಲ ನೀಡುತ್ತಿರುವ ಇಟಲಿ, ಜಪಾನ್ ಸರ್ಕಾರಗಳು ಸೈನ್ಯ ವಾಪಸು ಕರೆಸಲು ತೀವ್ರ ಒತ್ತಡ ಎದುರಿಸುತ್ತಿವೆ. ಸ್ಪೈನ್‌ನಲ್ಲಿ ಚುನಾವಣೆ ನಂತರ ಇದೇ ಮುಖ್ಯ ಚುನಾವಣಾ ವಿಷಯ ಮಾಡಿ ಗೆದ್ದ ಸೋಶಲಿಸ್ಟ್ ಸರ್ಕಾರ, ಸೈನ್ಯ ವಾಪಸು ತೆಗೆಯುವುದಾಗಿ ಪ್ರಕಟಿಸಿದೆ. ಅಮೆರಿಕದ ನೆರವಿಗೆ ಬರುತ್ತಿದ್ದ ವಿಶ್ವಸಂಸ್ಥೆ ಸಹ ಅಮೆರಿಕದ ಬೆಂಬಲಕ್ಕೆ ಬರುವುದು ಸಾಧ್ಯವಾಗುತ್ತಿಲ್ಲ. ಬೆದರಿಕೆ - ಒತ್ತಾಸೆ ಎಲ್ಲಾ ಬಳಸಿದರೂ ಯಾವುದೇ ದೇಶದ ಸರ್ಕಾರ ಅಮೆರಿಕದ 'ಬಾಡಿಗೆ ಪೋಲೀಸು' ಕೆಲಸ ಮಾಡಲು ಮುಂದೆ ಬರುತ್ತಿಲ್ಲ.

ಇರಾಕ್‌ನಲ್ಲಿ ಪ್ರಜಾಪ್ರಭುತ್ವದ ಜೋಕು!

ಇರಾಕ್‌ನ ಸರ್ವಾಧಿಕಾರಿ ಸದ್ದಾಂಹುಸೇನ್‌ನ ದುರಾಡಳಿತದಿಂದ 'ವಿಮೋಚನೆ' ಮಾಡಿ, ಪ್ರಜಾಪ್ರಭುತ್ವ ಸ್ಥಾಪಿಸುವುದು ಅಮೆರಿಕದ ಮಿಲಿಟರಿ ಕಾರ್ಯಾಚರಣೆ ಎಂಬುದು ಬುಶ್ ಪ್ರಚಾರ. ಅದನ್ನು ಕನಿಷ್ಟ ಅಮೆರಿಕ ಮತ್ತು ಯುರೋಪಿನ ಜನತೆಯ ಒಂದು ವಿಭಾಗ ನಂಬಿತ್ತು. ಇದು ಅತ್ಯಂತ ಕ್ರೂರ 'ಜೋಕ್' ಎಂದು ರುಜುವಾತಾಗಿದೆ.

ಈಗಲೇ ಚುನಾವಣೆ ನಡೆಸಿ ಎಂದು ಇರಾಕಿ ಜನತೆ ಭಾರಿ ಪ್ರದರ್ಶನಗಳನ್ನು ನಡೆಸಿದಾಗ, ಬುಶ್‌ಗೆ ಫಜೀತಿಗಿಟ್ಟುಕೊಂಡಿತು. ಸಿಐಎ ಆಗಲೇ ವರದಿ ಸಲ್ಲಿಸಿತ್ತು. ಅಮೆರಿಕನ್-ಪರ 'ಇರಾಕಿ' ನಾಯಕರಿಗೆ ಯಾವುದೇ ಜನ ಬೆಂಬಲವಿಲ್ಲ ಅಂತ. ಚುನಾವಣೆ ನಡೆದರೆ ಶಿಯಾ ಮೂಲಭೂತವಾದಿಗಳು ಪ್ರಚಂಡ ಬಹುಮತಗಳಿಸಿ ಇರಾಕ್ ರೀತಿಯ ಸರ್ಕಾರ ಬರುವುದು ಖಚಿತ ಎಂದು ವರದಿ ಮಾಡಿತ್ತು. ಆದ್ದರಿಂದ 'ಪ್ರಜಾಪ್ರಭುತ್ವ'ಕ್ಕಾಗಿ ದಂಡೆತ್ತಿ ಹೋದ ಬುಶ್ ಮಾನ ಉಳಿಸಿಕೊಳ್ಳಲು ವಿಶ್ವಸಂಸ್ಥೆ ಮೊರೆ ಹೋಗಬೇಕಾಯಿತು. ಎಂದಿನಂತೆ 'ಜೋಹುಕುಂ' ಎನ್ನುವ ವಿಶ್ವಸಂಸ್ಥೆ ತಂಡ ಚುನಾವಣೆಗೆ 'ಪರಿಸ್ಥಿತಿ ಪಕ್ವ'ವಾಗಿಲ್ಲ ಎಂದು ವರದಿ ಮಾಡಿತು. ಜಗತ್ತಿನ ಎಲ್ಲಾ ಸರ್ವಾಧಿಕಾರಿಗಳು ಇದನ್ನೇ ಹೇಳುವುದಲ್ಲವೇ?

> **ನವ-ವಸಾಹತುಶಾಹಿ ದರೋಡೆ**
>
> ಇರಾಕ್‌ನ ಅತಿಕ್ರಮಣ ಮಿಲಿಟರಿ ಮಾತ್ರವಲ್ಲ, ಇಡೀ ಇರಾಕಿ ಆರ್ಥಿಕವನ್ನು ನವವಸಾಹತುಶಾಹೀ ದರೋಡೆಗೆ ಒಳಪಡಿಸಲಾಗುತ್ತಿದೆ. ಇದು ಇರಾಕ್‌ನ ಅಪಾರ ತೈಲ ಸಂಪತ್ತಿಗೆ ಸೀಮಿತವಾಗಿಲ್ಲ. ಎಲ್ಲಾ ಪ್ರಮುಖ ಆರ್ಥಿಕ ಕ್ಷೇತ್ರಗಳನ್ನು ಅಮೆರಿಕನ್ ಕಂಪನಿಗಳು ಕಬಳಿಸಿವೆ. ಇವುಗಳಲ್ಲಿ ಸುಮಾರು 70 ಕಂಪನಿಗಳು ಬುಶ್ ದುಷ್ಟಕೂಟ, ಸಿಐಎ, ಪೆಂಟಗಾನ್ ಜತೆ ನಿಕಟ ಸಂಬಂಧ ಹೊಂದಿರುವ ಕಂಪನಿಗಳು. ಬುಶ್ 2000 ಚುನಾವಣೆ 5 ಲಕ್ಷ ಡಾಲರಿಗಿಂತ ಹೆಚ್ಚು ವಂತಿಗೆ ನೀಡಿದವು. ಇಲ್ಲಿ ನಡೆಯುತ್ತಿರುವ ಭಾರಿ ಭ್ರಷ್ಟಾಚಾರದ ಬಗೆ ಹೇಳಬೇಕಾಗೇ ಇಲ್ಲ.

> **ಗುಜರಾತ್ - ಇರಾಕ್ ಫ್ಯಾಸಿಸ್ಟ್ ಪ್ರಯೋಗ ಶಾಲೆ**
>
> ವಾಜಪೇಯಿ ಬಿಜೆಪಿ ಸರ್ಕಾರ ಒಂದು ವರ್ಷದಲ್ಲಿ ಬುಶ್‌ಗೆ 'ಬಾಡಿಗೆ ಸೈನ್ಯ' ಕಳಿಸಲು ತುದಿಗಾಲಲ್ಲಿ ನಿಂತಿದೆ. ಆದರೆ ಸಾಮ್ರಾಜ್ಯಶಾಹಿ ವಿರೋಧಿ ಜನತೆಯ ರಾಜಕೀಯ ಒತ್ತಡ ಅದರ ಕೈಕಟ್ಟಿ ಹಾಕಿದೆ. ಈಗಲೂ ವಿಶ್ವಸಂಸ್ಥೆ ನಿರ್ಣಯ ಆದರೆ, ಅಮೆರಿಕನ್ ನಾಯಕತ್ವದಲ್ಲೂ ಸೈನ್ಯ ಕಳಿಸಲು ಸಿದ್ಧವಾಗಿ ನಿಂತಿದೆ. ಆದರೆ ಈ ಸಬೂಬು ಸಿಗುತ್ತಿಲ್ಲ. ಪಾಕಿಸ್ತಾನಕ್ಕೆ ಇತ್ತೀಚೆಗೆ ವಿಶೇಷ ಮಿಲಿಟರಿ ಸಹವರ್ತಿ ಸ್ಥಾನ ಕೊಟ್ಟ ಮೇಲೂ ವಾಜಪೇಯಿ ಸರ್ಕಾರ ಯಾವ ನಾಚಿಕೆಯಿಲ್ಲದೆ ತನ್ನ ನೀತಿ ಮುಂದುವರಿಸುತ್ತಿದೆ.
>
> ಅಮೆರಿಕ ಇಸ್ರೇಲ್- ಭಾರತ ಅಕ್ಷ ಹೊಸೆಯಲು ಮುಂದಾಗಿರುವ ವಾಜಪೇಯಿ ಸರ್ಕಾರ ಸೈದ್ಧಾಂತಿಕವಾಗಿ ಈ ಎರಡು ದೇಶಗಳ ದುಷ್ಟ ಸರ್ಕಾರಗಳಿಗೆ ಸಮೀಪವಾಗಿದೆ. ಆದ್ದರಿಂದಲೇ ಬುಶ್ ಬಿಜೆಪಿ ಸರ್ಕಾರ ಪುನರಾಯ್ಕೆಯಾಗಲಿ ಎಂದು ಬಹಿರಂಗವಾಗಿ ಹಾರೈಸಿದ್ದಾರೆ. ಬುಶ್ ಇಸ್ರೇಲಿಗಳು ಪ್ಯಾಲೆಸ್ಟೇನ್‌ನಲ್ಲಿ ಬಳಸಿದ - ಬಳಸುತ್ತಿರುವ ಬರ್ಬರ ಭೀಕರ ದಮನಚಕ್ರದಿಂದ ಪಾಠ ಕಲಿತು ಅದನ್ನು ಇರಾಕ್‌ನಲ್ಲಿ ಬಳಸುತ್ತಿದ್ದಾರೆ. ಬಿಜೆಪಿ ಗುಜರಾತ್ ಪ್ರಯೋಗಶಾಲೆಯಾದಂತೆ, ಅಮೆರಿಕಕ್ಕೆ ಇರಾಕ್ ಪ್ರಯೋಗ ಶಾಲೆ. ಇಬ್ಬರ ಗುರಿಯೊಂದೇ - ಫ್ಯಾಸಿಸ್ಟ್ ಸರ್ವಾಧಿಕಾರ ಸ್ಥಾಪಿಸುವುದು. ಅವರನ್ನು ತಡೆಯುವ ಒಂದೇ ಮಾರ್ಗ - ಅವರನ್ನು ಚುನಾವಣೆಗಳಲ್ಲಿ ಕಿತ್ತೊಗೆಯುವುದು.

> **ಥಲಾಬಿಗೆ ಮೂರುವರೆಲಕ್ಷ ಗಿಂಬಳ**
>
> ಇರಾಕಿ ನಾಯಕರೆನ್ನಲಾದ ಅಹಮದ್ ಛಲಾಬಿಗೆ 'ಇರಾಕಿನಲ್ಲಿ ಗೂಢಚಾರ ವರದಿ' ಸಲ್ಲಿಸಲು ಮೂರುವರೆ ಲಕ್ಷ ಡಾಲರ್ ಪ್ರತಿ ತಿಂಗಳು ಗಿಂಬಳ ಕೊಡಲಾಗುತ್ತಿದೆ. ಪೆಂಟಗಾನ್ ಒಪ್ಪಿಕೊಂಡಿದೆ. ಇರಾಕ್‌ನ ಗವರ್ನಿಂಗ್ ಕೌನ್ಸಿಲ್ ಸದಸ್ಯ ಛಲಾಬಿ. ಇಂತಹವರು ಇರಾಕ್‌ಗೆ ಪ್ರಜಾಪ್ರಭುತ್ವ ತರುತ್ತಾರಂತೆ!

ಕೇಂದ್ರದಲ್ಲಿ ಜಾತ್ಯತೀತ ಸರಕಾರ ಅಧಿಕಾರಕ್ಕೆ ....


ಪುಟ 8 ರಿಂದ

ಬಂದಿಲ್ಲ. ಪಲಿತಾಂಶ ಪ್ರಕಟವಾದ ನಂತರ ಕೇಂದ್ರಸಮಿತಿ ಸಭೆ ಸೇರಿ ನಿರ್ಧರಿಸುತ್ತದೆ" ಎಂದರು.

ಬಿಜೆಪಿ ಅಧಿಕಾರದಿಂದ ಹೊರಕ್ಕೆ: ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದ ಅವರು 'ಸಮೀಕ್ಷೆಗಳನ್ನು ನಾವು ನಂಬುವುದಿಲ್ಲ, ಆದರೂ ಎನ್‌ಡಿ ಟಿ.ವಿ. - ಇಂಡಿಯನ್ ಎಕ್ಸ್‌ಪ್ರೆಸ್ ಚುನಾವಣೆ ಆರಂಭವಾಗುವ ಮೊದಲು ನಡೆಸಿದ ಸಮೀಕ್ಷೆಯಲ್ಲಿ ಮೊದಲ ಹಂತ ಚುನಾವಣೆಯಲ್ಲಿ ಎನ್.ಡಿ.ಎ ಈಗಿರುವ 87 ಸೀಟುಗಳ ಬದಲಿಗೆ 97 ಸ್ಥಾನಗಳನ್ನು ಗೆಲ್ಲುವುದಾಗಿ ಹೇಳಿತ್ತು. ಚುನಾವಣಾ ಪ್ರಚಾರ ಆರಂಭವಾದ ನಂತರ ನಡೆದ ಸಮೀಕ್ಷೆಯಲ್ಲಿ ಇದು 83 ಕ್ಕೆ ಇಳಿದಿದ್ದು, ಮತಗಟ್ಟೆ ಸಮೀಕ್ಷೆಯ ನಂತರ(Exit pole) ಇದು 75 ಕ್ಕೆ ಇಳಿದಿದೆ. ಇದೇ ಅಭಿಪ್ರಾಯವನ್ನು ಬಹುತೇಕ ಏಜೆನ್ಸಿಗಳು ನೀಡಿವೆ. ಎರಡನೇ ಹಂತದ ಚುನಾವಣೆ ನಂತರ ಇದು ಇನ್ನಷ್ಟು ಕೆಳಕ್ಕೆ ಹೋಗಿದ್ದು ಬಿಜೆಪಿ ಪುನಃ ಅಧಿಕಾರಕ್ಕೆ ಬರುವ ಸಾಧ್ಯತೆ ಇಲ್ಲ' ಎಂದು ಹೇಳಿದ ಅವರು, "ಆದರೆ ಅಧಿಕಾರಕ್ಕೆ ಅಂಟಿಕೊಳ್ಳುವುದಕ್ಕಾಗಿ ಬಿಜೆಪಿ ಅತ್ಯಂತ ಕೆಳಮಟ್ಟದ ರಾಜಕೀಯ ಮಾಡುವುದನ್ನು ಹೇಸುವುದಿಲ್ಲ" ಎಂದು ಎಚ್ಚರಿಸಿದರು.

ಎಡಪಕ್ಷಗಳನ್ನು ಬಲಪಡಿಸುವುದು ಅಗತ್ಯ: ಕೇಂದ್ರದಲ್ಲಿ ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ಬಾರದಿರುವ ಹಿನ್ನೆಲೆಯಲ್ಲಿ ರಾಷ್ಟ್ರಮಟ್ಟದಲ್ಲಿ ಜಾತ್ಯಾತೀತ ಸರ್ಕಾರದ ಸ್ಥಾಪನೆಗಾಗಿ, ಎಡಪಕ್ಷಗಳು ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸಲಿವೆ. ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳು ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲಿದ್ದು 3ನೇ ರಂಗ ರಚಿಸುವಲ್ಲಿ, ಜಾತ್ಯತೀತ ಸರ್ಕಾರದ ಸ್ಥಾಪನೆಗಾಗಿ ಪ್ರಯತ್ನಿಸಲಿದೆ ಎಂದು ಹೇಳಿದ ಸುರ್ಜಿತ್, ಜಾತ್ಯಾತೀತ ಪಕ್ಷಗಳಲ್ಲಿ ಹಲವಾರು ಭಿನ್ನಾಭಿಪ್ರಾಯಗಳಿವೆ. ಇದನ್ನು ಬಗೆಹರಿಸಿಕೊಳ್ಳಬೇಕಾಗಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಯ ದೃಷ್ಟಿಯಿಂದ ಇದು ಅನಿವಾರ್ಯ. ದೇಶವನ್ನು ಉಳಿಸಿದಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ದೇಶವೇ ನಾಶವಾದಲ್ಲಿ ಎಲ್ಲವೂ ನಾಶಗೊಳ್ಳುತ್ತದೆ" ಎಂದು ಸ್ಪಷ್ಟಪಡಿಸಿದರು.

ಇದು ರಶಿಯನ್ ಕಥೆ. ಝಾರ್‌ನ ನಿರಂಕುಶ ಪ್ರಭುತ್ವ ಸಂದರ್ಭದಲ್ಲಿನದು. ಕಾರ್ಮಿಕರ ಹಕ್ಕು-ಹೋರಾಟಗಳನ್ನು ನಿಷೇಧಿಸಿ ನಿರ್ದಯವಾಗಿ ದಮನ ಮಾಡಲು ಮುಂದಾಗಿದ್ದು, ಪ್ರಭುತ್ವದ 'ಫರ್ಮಾನು' ಧಿಕ್ಕರಿಸಿ ಕಾರ್ಮಿಕರು ಮೇ ದಿನ ಆಚರಿಸಿದ ಸಾವಿರಾರು ಘಟನೆಗಳು ಅಲ್ಲಿ ಕಾಣಸಿಗುತ್ತವೆ. ಅದು ನಿರ್ಬಂಧವಿರಲಿ, ನಿಷೇಧವೇ ಇರಲಿ, ಕಾರ್ಖಾನೆ, ಜೇಲಿನೊಳಗೆ, ಶವಯಾತ್ರೆಯ ಮೂಲಕ ಮೇ ದಿನ ಆಚರಿಸಿದ ಧೀರ ಘಟನೆಗಳು ರೋಮಾಂಚಕಾರಿ. ಇಡೀ ಜನಸಮೂಹವೇ ಹಿಡಿದ ದಾರಿ. ಅಂತಹ ಒಂದು ಘಟನೆಯನ್ನು ಬಿಂಬಿಸುವ ಕಥೆಯಿಲ್ಲಿದೆ.



ದುಡಿಮೆಯ ಕೆಂಬಾವುಟ

ಮೂರು ಕಾರ್ಖಾನೆಗಳು ಮೇ ದಿನೋತ್ಸವವನ್ನು ಜೊತೆಗೂಡಿ ಆಚರಿಸಲು ನಿರ್ಧರಿಸಿದವು. ನಗೋರ್‍ನಯ, ಲಿತೇಯ್ನಯ, ಮಾರ್ಷವಯ ಮತ್ತಿತರ ಬೀದಿಗಳ ಕಾರ್ಮಿಕರು ಒಟ್ಟಿಗೆ ಸೇರಿ ಒತ್ತಾದ ಸಾಲುಗಳಲ್ಲಿ ನಗರದ ಕೇಂದ್ರಕ್ಕೆ ನಡೆದರು.

ಬೆಳಿಗ್ಗೆ ಗೋಷ್ಕನ ತಂದೆ ಇತರ ಕಾರ್ಮಿಕರೊಂದಿಗೆ ತನ್ನ ಕಾರ್ಖಾನೆಗೆ ಹೊರಟ.

"ನಾನೂ ನಿನ್ನ ಜೊತೆಗೆ ಬರುತ್ತೀನಪ್ಪ" ಗೋಷ್ಕ ಅವನನ್ನು ಕೇಳಿದ.

"ನೀನಿನ್ನೂ ಚಿಕ್ಕವ" ತಂದೆ ನಗುತ್ತ ಹೇಳಿದ. "ನೀನು ಮನೆಯಲ್ಲೇ ಇರು."

"ಇಲ್ಲ. ನಾನೂ ಬರುತ್ತೀನಪ್ಪ" ಗೋಷ್ಕ ಹಟ ಹಿಡಿದ. "ನೋಡು ನಿನ್ನೆ ನಾನು ಏನು ಮಾಡಿದೀನಿ ಅಂತ" ಎಂದವನು ತನ್ನ ತಂದೆಗೆ ಒಂದು ಪುಟ್ಟ ಕೆಂಬಾವುಟವನ್ನು ತೋರಿಸಿದ.

"ಬಾವುಟ ಚೆನ್ನಾಗಿದೆ" ಅಪ್ಪ ಒಪ್ಪಿಕೊಂಡ. ಆದರೂ ಮಗನನ್ನು ಮನೆಯಲ್ಲೇ ಬಿಟ್ಟ.

ಗೋಷ್ಕ ಮನೆಯಲ್ಲೇ ಉಳಿದ. ಕೋಣೆಯಲ್ಲೇ ಶತಪಥ ಹಾಕಿದ. ತಾನು ಮಾಡಿದ್ದ ಕೆಂಬಾವುಟವನ್ನು ಎದೆಗೆ ಒತ್ತಿಹಿಡಿದ. ಅನಂತರ ಬಾಗಿಲಿನ ಬಳಿಗೆ ಹೋದ.

"ಎಲ್ಲಿಗೆ ಹೋಗುತ್ತಿದ್ದೀಯೋ?" ತಾಯಿ ತುಸು ಗಾಬರಿಯಿಂದ ಕೇಳಿದಳು.

"ಸುಮ್ಮನೆ ವಾಂಕ ಸೆರ್‍ಯೇಗಿನ್‌ನನ್ನು ಕಾಣಲು."

ಹಾಗೆಂದು ಅವನು ಅಂಗಳಕ್ಕೆ ಓಡಿದ. ಮೊದಲು ವಾಂಕನ ಮನೆಯತ್ತ ಹೋಗುವವನಂತೆ ಸೋಗು ಹಾಕಿದ. ಅನಂತರ ವಾಯುವೇಗದಲ್ಲಿ ನಗೋರ್‍ನಯ ಬೀದಿಯ ದಿಕ್ಕಿನಲ್ಲಿ ಓಡಿದ.

ಅವನು ಅಲ್ಲಿಗೆ ಹೋದಾಗ ಆಗಲೇ ಒಂದು ಗುಂಪು ನೆರೆದಿತ್ತು. ಕಾರ್ಮಿಕರ ಒಂದು ಕಂಬಸಾಲು ಬೀದಿಯಲ್ಲಿ ನಡೆದಿದ್ದಿತು. ಮುಂದುಗಡೆ, ಅವರ ತಲೆಗಳ ಮೇಲೆ, ಕೆಂಬಾವುಟವೊಂದು ಹಾರಾಡುತ್ತಿದ್ದಿತು.

ಕಾರ್ಮಿಕರು ಹಾದುಹೋಗುವವರೆಗೂ ಕಾದಿದ್ದು ಗೋಷ್ಕ ಅನಂತರ ಕಂಬ ಸಾಲಿನ ಕೊನೆಯಲ್ಲಿ ತಾನೂ ಮೆರವಣಿಗೆಯನ್ನು ಸೇರಿಕೊಂಡ. ತನ್ನ ಪುಟ್ಟ ಕೆಂಬಾವುಟವನ್ನು ಹೊರಕ್ಕೆ ತೆಗೆದು ಹಿಡಿದುಕೊಳ್ಳಬೇಕೆನ್ನುವಷ್ಟರಲ್ಲೇ ಅವನಿಗೆ ಯಾರೋ ಗದರಿಸಿ ಹೇಳಿದರು:

"ಏಯ್, ಹೋಗು ಮನೆಗೆ! ಹೋಗು! ಅಮ್ಮನ ಬಳಿಗೆ ಹೋಗು!"

"ಇಲ್ಲ. ನಾನೂ ನಿಮ್ಮ ಜೊತೆ ಇರ್‍ತೀನಿ. ನಾನೂ ಮೇ ದಿನೋತ್ಸವ ಆಚರಿಸುತ್ತೀನಿ."

"ಸುಮ್ಮನೆ ಹರಟ ಬೇಡ. ಹುಂ, ಹೊರಡು ಈ ಕೂಡಲೇ!"

ಹೊರಡುವುದು ಬಿಟ್ಟು ಗೋಷ್ಕನಿಗೆ ಬೇರೆ ಮಾರ್ಗವೇ ಇರಲಿಲ್ಲ.

ಗೋಷ್ಕ ಒಂದು ಘಳಿಗೆ ಯೋಚನೆ ಮಾಡುತ್ತ ನಿಂತಿದ್ದು ಅನಂತರ ಲಿತೇಯ್ನಯ ಬೀದಿಗೆ ಓಡಿದ. ಅಲ್ಲೂ ಆಗಲೇ ಗುಂಪು ನೆರೆದಿತ್ತು. ಅಲ್ಲೂ ಕಾರ್ಮಿಕರು ಕಂಬಸಾಲಿನಲ್ಲಿ ಮೆರವಣಿಗೆ ನಡೆದಿದ್ದರು. ಅವರ ತಲೆಗಳ ಮೇಲೂ ಕೆಂಬಾವುಟ ಹಾರಾಡುತ್ತಿದ್ದಿತು.

ಗೋಷ್ಕ ಮೆರವಣಿಗೆ ಸೇರಿ ಕೊಂಡ, ತನ್ನ ಪುಟ್ಟ ಕೆಂಬಾವುಟ ಹೊರಗೆ ತೋರಬೇಕೆನ್ನುವಾಗ ಯಾರೋ ತಟಕ್ಕನೆ ಕೇಳಿದರು:

"ಏಯ್, ನೀನು ಏನು ಮಾಡುತ್ತಿದ್ದೀಯೋ ಇಲ್ಲಿ?!"

"ಏನಿಲ್ಲ. ನಾನೂ..."

"ಹೌದಾ? ನನ್ನ ಬೆಲ್ಟಿನ ರುಚಿ ತೋರಿಸಲಾ?! ಹುಂ, ಹೋಗು ಮನೆಗೆ!"

ಗೋಷ್ಕ ಹಿಂದೆ ನಿಂತ. ಒಂದು ಘಳಿಗೆ ಯೋಚಿಸಿದ. ಆಮೇಲೆ ಮಾರ್ಷವಯ ಬೀದಿಯ ಕಡೆಗೆ ಓಡಿದ.

ಅಲ್ಲೂ ಜನರ ಗುಂಪು ನೆರೆದಿತ್ತು. ಕಾರ್ಮಿಕರು ಮೆರವಣಿಗೆ ಹೊರಟಿದ್ದರು. ಅವರ ತಲೆಗಳ ಮೇಲೆ ಕೆಂಬಾವುಟ ಹಾರಾಡುತ್ತಿತ್ತು.

ಗೋಷ್ಕ ಕಾರ್ಮಿಕರ ಬಳಿಗೆ ಹೋಗಿ ಉಪಾಯದಿಂದ ಹೇಳಿದ:

"ನಾನು ಅಪ್ಪನನ್ನು ಕಾಣಬೇಕಾಗಿದೆ. ಅಮ್ಮ ಕಳಿಸಿಕೊಟ್ಟಿದಾಳೆ. ಅವನು ಅಲ್ಲಿ ಮುಂದಿದಾನೆ."

ಕಾರ್ಮಿಕರು ಪಕ್ಕಕ್ಕೆ ಸರಿದು ಗೋಷ್ಕಗೆ ಹೋಗಲು ದಾರಿ ಮಾಡಿಕೊಟ್ಟರು. ಅವನು ಮುಂದಿನ ಸಾಲಿನವರೆಗೂ ಹೋದ. ಆಳವಾಗಿ ಉಸಿರಾಡಿ ಸುತ್ತ ನೋಡಿದ. ಸ್ವಲ್ಪ ದೂರ ಬಲಗಡೆ ಅವನ ಅಪ್ಪ ನಡೆದಿದ್ದ. ಅವನು ಕೈಯಲ್ಲಿ ಕೆಂಬಾವುಟ ಹಿಡಿದು ನಡೆದಿದ್ದ.

ಗೋಷ್ಕ ಕೂಡಲೇ ಹಿಂದಿನ ಸಾಲಿಗೆ ಹೋಗಲು ಯತ್ನಿಸಿದ. ಆದರೆ ಆಗಲೇ ತಡವಾಗಿತ್ತು.

"ಏಯ್, ಬಾ ಇಲ್ಲಿ" ಅಪ್ಪ ಸಂಜ್ಞೆ ಮಾಡಿ ಕರೆದ.

ಗೋಷ್ಕ ವಿಧೇಯತೆಯಿಂದ ಹೋದ.

"ಏನಾಗಿದೆ ನಿನಗೆ? ಅಪ್ಪ ಅಮ್ಮನ ಮಾತು ಕೇಳಬಾರದು ಅಂತಾನಾ?"

"ಇಲ್ಲಪ್ಪ. ನಾನೂ ಎಲ್ಲರಂತೆಯೇ ಇರಬೇಕೂಂತ. ನನಗೂ ಎಲ್ಲರ ಜೊತೆ ಹೋಗಬೇಕೂಂತ ಇಷ್ಟ. ನಾನಾಗಲೇ ಇದನ್ನು ಮಾಡಿಕೊಂಡಿದೀನಿ. ನೋಡು" ಎನ್ನುತ್ತ ಗೋಷ್ಕ ತನ್ನ ಕೋಟಿನ ಒಳಗೆ ಅಡಗಿಸಿಟ್ಟಿದ್ದ ಪುಟ್ಟ ಕೆಂಬಾವುಟವನ್ನು ಹೊರಗೆಳೆದು ತೋರಿಸಿದ.

ಅಪ್ಪ ತನ್ನ ಮಗನ ಜಾಣ್ಮೆಯನ್ನು ಕಂಡು ಸಂತಸದಿಂದ ನಕ್ಕ. ಇತರ ಕಾರ್ಮಿಕರೂ ನಗತೊಡಗಿದರು.

"ಅಲ್ನೋಡು-ಕೆಂಬಾವುಟ!"

"ನಿಜವಾದ ಬಾವುಟ!"

"ಕೆಂಪಗೂ ಇದೆ!"

ಅಪ್ಪ ತನ್ನ ಕೈಲಿದ್ದ ದೊಡ್ಡದಾದ ಕೆಂಬಾವುಟವನ್ನು ನೋಡಿದ. ಅನಂತರ ಗೋಷ್ಕನ ಕೈಲಿದ್ದ ಪುಟ್ಟ ಕೆಂಬಾವುಟವನ್ನು ನೋಡಿದ. ಮತ್ತೊಮ್ಮೆ ನಕ್ಕು ಗೋಷ್ಕನ ತಲೆ ನೇವರಿಸಿದ.

"ಸರಿ. ಈಗ ಮನೆಗೆ ಅಮ್ಮನ ಬಳಿಗೆ ಹೋಗು."

"ಇಲ್ಲಪ್ಪ. ನಾನೂ..."

ಗೋಷ್ಕಗೆ ಮಾತು ಮುಗಿಸಲೂ ಅವಕಾಶ ಸಿಗಲಿಲ್ಲ. ಬಂದೂಕಧಾರಿಗಳಾದ ಸೈನಿಕರ ಒಂದು ತಂಡ ಪಕ್ಕದ ಬೀದಿಯಿಂದ ಹೊರಬಂದು ಮೆರವಣಿಗೆಕಾರರ ಮಾರ್ಗದಲ್ಲಿ ಅಡ್ಡ ನಿಂತಿತು.

"ನಿಲ್ಲಿಸಿ!" ಸೈನ್ಯಾಧಿಕಾರಿಯೊಬ್ಬ ಕಾರ್ಮಿಕರಿಗೆ ಕೂಗಿ ಹೇಳಿದ: "ಮುನ್ನಡೆಯದಿರಿ!"

ಮೆರವಣಿಗೆಕಾರರು ನಡಿಗೆ ನಿಧಾನಗೊಳಿಸಿ ಅನಂತರ ನಿಂತರು.

"ಚೆದುರಿ!"

ಕಾರ್ಮಿಕರು ಹೆಚ್ಚು ಒತ್ತಾಗಿ ನಿಂತರು, ಗೋಷ್ಕನ ತಂದೆಯ ಮತ್ತು ಅವನು ಹಿಡಿದಿದ್ದ ಬಾವುಟದ ಸುತ್ತ ಒತ್ತಾಗಿ ನಿಂತರು.

"ಬಂದೂಕುಗಳನ್ನು ಸಿದ್ಧಗೊಳಿಸಿ!" ಸೈನ್ಯಾಧಿಕಾರಿ ಸೈನಿಕರಿಗೆ ಆಜ್ಞೆ ನೀಡಿದ.

ಸೈನಿಕರು ಬಂದೂಕಗಳನ್ನು ಎತ್ತಿಹಿಡಿದರು.

"ಮಗು...." ಗೋಷ್ಕನ ತಂದೆ ಪಿಸುಮಾತಿನಲ್ಲಿ ಹೇಳಿದ. "ಮಗು, ಓಡು, ಓಡಿ ಹೋಗು!" ಆದರೆ ಗೋಷ್ಕ ಮಿಸುಕಲಿಲ್ಲ.

"ಯಾರಿಗೆ ಹೇಳ್ತಿರೋದು, ಓಡು!" ಅಪ್ಪ ಕೂಗಿ ಹೇಳಿ ಗೋಷ್ಕನನ್ನು ಬಲವಂತವಾಗಿ ದೂರ ತಳ್ಳಿದ.

ಗೋಷ್ಕ ಮೆರವಣಿಗೆ ಬಿಟ್ಟು ಕಾಲುದಾರಿಗೆ ಹೋಗಿ ನಿಂತ. ಮುಖದ ಮೇಲೆ ದಿಗ್ಭ್ರಮೆಯ ಭಾವನೆಯೊಂದಿಗೆ ಆ ಪುಟ್ಟ ಹುಡುಗ ಅಲ್ಲಿ ನಿಂತ. ಸೈನಿಕರಿಂದ ಕಾರ್ಮಿಕರತ್ತ, ಕಾರ್ಮಿಕರಿಂದ ಸೈನಿಕರತ್ತ ನೋಡುತ್ತ ನಿಂತ. ಸೈನ್ಯಾಧಿಕಾರಿ ಕೈ ಮೇಲೆತ್ತಿದುದನ್ನು, ಸೈನಿಕರು ತಮ್ಮ ಬಂದೂಕುಗಳನ್ನು ಹೆಗಲಿಗೆ ಒತ್ತಿ ಹಿಡಿದುದನ್ನು, ಗಮನಿಸಿದ. ಇನ್ನೊಂದು ಕ್ಷಣ, ಅವರು ಗುಂಡು ಹಾರಿಸುವರು.

ಆಗ ಇದ್ದಕ್ಕಿದ್ದಂತೆ ಹಾಡು ಕೇಳಿ ಬಂದಿತು:

ಕೆಚ್ಚೆದೆಯ ಗೆಳೆಯರೇ ಹೆಜ್ಜೆ ಹಾಕುತ ಬನ್ನಿ, ಮುಂದೆ ಬನ್ನಿ,

ಬೆಳೆಯುವೆವು ನಾವು, ಬಲಿಯುವೆವು ನಾವು, ಹೋರಾಟದಲ್ಲಿ!

ಸ್ವಾತಂತ್ರ್ಯ ಸಾಮ್ರಾಜ್ಯಕೊಯ್ಯುವಾ ಮಾರ್ಗವನು

ಸ್ವಂತ ಶ್ರಮದಿಂದ ತ್ಯಾಗಗಳಿಂದ ರಚಿಸೋಣ ಬನ್ನಿ!

ಗೋಷ್ಕನ ತಂದೆಯೇ ಈ ಹಾಡನ್ನು ಗಟ್ಟಿಯಾಗಿ ಹಾಡಿದ. ಹಾಡುತ್ತ ಅವನು ಕೆಂಬಾವುಟವನ್ನು ಬೀಸಿಕೊಂಡು ಮುನ್ನಡೆದ. ಕಾರ್ಮಿಕರೂ ಅವನೊಂದಿಗೇ ಒಟ್ಟಾಗಿ ಹಾಡುತ್ತ ನಡೆದರು. ಅವರ ಕ್ರಿಯೆಗಳೆಲ್ಲ ಒಬ್ಬ ವ್ಯಕ್ತಿಯ ಕ್ರಿಯೆಗಳೇ ಎನ್ನುವಂತೆ ಒಂದೇ ಸ್ಥಾಯಿಯಲ್ಲಿ ಚಲಿಸುತ್ತ ಅವರು ಸೈನಿಕರ ಮೇಲೆ ನುಗ್ಗಿ ನಡೆದರು.

"ಗುಂಡು ಹಾರಿಸಿ!" ಸೈನ್ಯಾಧಿಕಾರಿ ಆಜ್ಞಾಪಿಸಿದ.

"ಅಪ್ಪ! ಅಪ್ಪ!" ಗೋಷ್ಕ ಕೂಗಿಕೊಂಡು ತಾನೂ ಮೆರವಣಿಗೆಯ ಮಧ್ಯೆ ಸೇರಿಕೊಂಡ. ಅಪ್ಪನವರೆಗೂ ಓಡಿ ಹೋಗಿ ಅವನ ಷರಾಯಿಗಳಲ್ಲಿ ತನ್ನ ಮುಖ ಮುಚ್ಚಿಕೊಂಡು ಕೂಗಿದ. "ಅಪ್ಪ! ಅಪ್ಪ!"

ಅವನ ತಂದೆ ಕೆಳಗೆ ಬಾಗಿ ಗೋಷ್ಕನನ್ನು ಎತ್ತಿಕೊಂಡು ತನ್ನ ಹೆಗಲ ಮೇಲೆ ಕೂರಿಸಿಕೊಂಡ.

ಪುಟ್ಟ ಹುಡುಗ ಸುತ್ತ ನೋಡಿದ: ಸೈನಿಕರು ತಮ್ಮ ಬಂದೂಕಗಳನ್ನು ತಗ್ಗಿಸಿ ಕಾಲುದಾರಿಗೆ ಸರಿಯುತ್ತ ಕಾರ್ಮಿಕರಿಗೆ ದಾರಿ ಬಿಟ್ಟುಕೊಡುತ್ತಿದ್ದರು.

"ಗುಂಡು ಹಾರಿಸಿ! ಗುಂಡು ಹಾರಿಸಿ!" ಸೈನ್ಯಾಧಿಕಾರಿ ಬೊಗಳಿದ.

ಆದರೆ ಯಾರೂ ಅವನ ಆಜ್ಞೆಗೆ ಕಿವಿಗೊಡಲಿಲ್ಲ.

ಗೋಷ್ಕ ಮುಗುಳ್ನಗುತ್ತ ಸೈನಿಕರನ್ನು ಅಭಿನಂದಿಸುವವನಂತೆ ತನ್ನ ಪುಟ್ಟ ಕೆಂಬಾವುಟವನ್ನು ಗಾಳಿಯಲ್ಲಿ ಆಡಿಸಿದ.

ಕಾರ್ಮಿಕರು ಮಾರ್ಷವಯ ಬೀದಿಯ ಉದ್ದಕ್ಕೂ ಹೋಗಿ ನಗೋರ್‍ನಯ ಬೀದಿಯಿಂದ ಬರುತ್ತಿದ್ದ ಕಾರ್ಮಿಕರನ್ನು ಸಂಧಿಸಿದರು. ಅನಂತರ ಲಿತೇಯ್ನಯ ಬೀದಿಯ ಕಾರ್ಮಿಕರೂ ಇವರ ಜೊತೆಗೂಡಿದರು. ಇತರ ಬೀದಿ ಚೌಕಗಳಿಂದ ಬಂದ ಕಾರ್ಮಿಕರೂ ಇವರಲ್ಲಿ ಬೆರೆತರು. ಕಾರ್ಮಿಕರ ಸಮೂಹ ಅಪಾರವಾಗಿ ಬೆಳೆಯಿತು. ಹತ್ತಾರು ಕೆಂಬಾವುಟಗಳು ಮೇ ದಿನದ ಗಾಳಿಯಲ್ಲಿ ಪಟಪಟನೆ ಹಾರಾಡುತ್ತಿದ್ದವು. ಹಾಡೊಂದು ನಗರದಾದ್ಯಂತ ಮೊಳಗಿತು:

ಕುಟ್ಟಿ ಪುಡಿ ಮಾಡುವೆವು ಯುಗಾಂತರಗಳ ದಬ್ಬಾಳಿಕೆಯನು,

ನಿರ್ನಾಮ ಮಾಡವೆವು ನಿರಂಕುಶ ಪ್ರಭುಗಳನು,

ನಮ್ಮ ಈ ಭುಜ ಬಲದಿಂದ!

ಹಾರಾಡಲಿರುವುದು ಅನಂತರ ಇಳೆಯ ಮೇಲೆ

ರಕ್ತರಂಗಿನ ಬಾವುಟ - ದುಡಿಮೆಯ ಕೆಂಬಾವುಟ!

'ರಶಿಯನ್ ಇತಿಹಾಸದ ಕಥೆಗಳು' ಗ್ರಂಥದಿಂದ ಆಯ್ದುದು

ಕೆಂಪು ಸೂರ್ಯ ಇರುವವರೆಗೂ ಕೆಂಪುಧ್ವಜ ನಮ್ಮದು

ನೆನೆನೆನೆಯೋ ಆ ದಿನವ
ದುಡಿಮೆಗಾರ ಬಂಧುವೇ
ಕೆಂಪು ಧ್ವಜವು ಹುಟ್ಟಿದಂಥ
ಆ ಚರಿತ್ರೆ ನಿನ್ನದೇ
ಜಗದಿ ಮೊದಲ ಬಾರಿ ಅಂದು
ಎಂಟು ತಾಸು ದುಡಿಮೆಗಾಗಿ
ಹೆಚ್ಚುವರಿ ಬಿಟ್ಟಿ ದುಡಿಮೆ
ಬೇಡವೆಂದು ಕಾರ್ಮಿಕರು
ಮಾಲಿಕರ ಕೊರಳಪಟ್ಟಿ
ಹಿಡಿದು ನ್ಯಾಯ ಕೇಳಿದರು
ಪೊಲೀಸರ ಬಂದೂಕುಗಳು
ಕಾರ್ಮಿಕರ ಕೊಂದವು
ಬೀದಿ ತುಂಬ ನೀರಿನಂತೆ
ಮೈ ನೆತ್ತರು ಹರಿಯಿತು
ತೊಟ್ಟ ಅಂಗಿ ಬಿಚ್ಚಿ ಒಬ್ಬ ಅಣ್ಣ
ನೆಲದ ನೆತ್ತರಲ್ಲಿ ತೋಯಿಸಿದ
ಮುಗಿಲ ಕಡೆಗೆ ಮುಖ ಮಾಡಿ
ಗಾಳಿಯಲ್ಲಿ ಹಾರಿಸಿದ
ಮುಂಬರುವ ಕ್ರಾಂತಿಗೆ
ಧೀರ ಧ್ವಜನ ಕಂಡು ಹಿಡಿದ
ಬೆಂದ ಶ್ರಮಿಕ ಬಂಧುಗಳ
ನೋವಿನೆಡೆಗೆ ಮಾತುಕೊಟ್ಟ
ಅಂದಿನಿಂದ ಈವರೆಗೂ ಈ ಧ್ವಜವೇ ನಮ
ಪ್ರಾಣ ತಿಳಿಯೋ
ನೆನೆನೆನೆಯೋ ಆ ದಿನವ

ನನ್ನಣ್ಣನ ನೆತ್ತರಲ್ಲಿ
ಈ ಧ್ವಜವು ನೆಂದಿದೆ
ಲಕ್ಷ ಲಕ್ಷ ಕಾರ್ಮಿಕರ
ತ್ಯಾಗ ಇದರ ಹಿಂದಿದೆ
ಕೊಲೆಗಡುಕ ಗದ್ದುಗೆಗಳ
ಕೆಡಪಿ ಗೋರಿ ಮಾಡಿದೆ ಸಮಾನತೆ ಸ ಮ
ಸರ್ಕಾರಗಳ ಕಟ್ಟಿದೆ
ಭೂಗೋಲದ ತುಂಬೆಲ್ಲ
ತನ್ನ ಬೆಳೆಯ ಬೆಳೆದಿದೆ
ರಕ್ತ ಹೀರುವ ಮಾಲಿಕರ
ಗುಂಡಿಗೆಯ ನಡುಗಿಸಿದೆ
ಜಗದ ಎಲ್ಲ ಕಾರ್ಮಿಕರಲಿ
ಒಗ್ಗಟ್ಟು ತಂದಿದೆ
ಕಷ್ಟಗಳ ಪರಿಹಾರಕೆ
ದಾರಿಯನು ತೋರಿಸಿದೆ
ಇಂಥ ಧ್ವಜವ ಹಿಡಿದು ನೀನು
ಸಂಘ ಕಟ್ಟೋ ಗೆಳೆಯನೇ
ನೆನೆನೆನೆಯೋ ಆ ದಿನವ

ಆ ದಿನವೇ ಮೇ ಒಂದು
ನೀನು ತಿಳಿಯೋ ಶ್ರಮಿಕ ಬಂಧು
ಇತಿಹಾಸ ಸೃಷ್ಟಿಸಿದೆ
ಭವಿಷ್ಯ ನಮ್ಮ ಮುಂದಿದೆ
ಕೆಂಪು ಸೂರ್ಯ ಇರುವವರೆಗೂ
ಕೆಂಪು ಧ್ವಜವು ನಮ್ಮದೇ
ನೆನೆನೆನೆಯೋ ಆದಿನವ

ಬಿ. ಫೀರ್‌ಭಾಷ
ಹೂವಿನ ಹಡಗಲಿ



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH